ವಿನಿಯೋಗಿಸಿದರೆ, ಹೆಚ್ಚಿನ ಉಪಯೋಗವಾಗುತ್ತದೆಂದು ಹೇಳಬಹುದು. ಇವತ್ತು ದೊಡ್ಡ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳನ್ನು ತೆಗೆದುಕೊಂಡರೆ 1:10 ರಂತೆ ಜನರು ಇದರಲ್ಲಿ ಜೀವನ ಮಾಡುತ್ತಿದ್ದಾರೆಂದು ಹೇಳಬಹುದು. ಆದರೆ ಕೇವಲ ಎಪ್ಪತ್ತೈದೂವರೆ ಲಕ್ಷ ರೂಪಾಯಿಗಳನ್ನು ಸಣ್ಣ ಕೈಗಾರಿಕೆಗಳಿಗೆ ಕೊಟ್ಟಿದ್ದಾರೆ. ನಷ್ಟವಾಗುತ್ತಿರುವ ದೊಡ್ಡ ಕೈಗಾರಿಕೆಗಳಿಗೆ 12 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನೀವು ಹೀಗೆ ಹಣವನ್ನು ಹಾಕುತ್ತಾ ಹೋದರೆ, 10 ವರ್ಷಗಳಲ್ಲಿ ನಿಮ್ಮ ಕ್ಯಾಪಿಟಲ್ ಕೂಡ ಹೊರಟು ಹೋಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದರ ಜೊತೆಗೆ ಭದ್ರಾವತಿಯಲ್ಲಿ ಎಕ್ಸ್‌ಪಾನ್‌ಶನ್ ಸ್ಕೀಂ ಎಂದು ಇಟ್ಟುಕೊಂಡಿದ್ದಾರೆ. ಅದನ್ನು ಎಷ್ಟು ಟೈಂ ಲಿಮಿಟ್ಟಿನೊಳಗೆ ಮಾಡಬೇಕೆಂದು ಎಸ್ಟಿಮೇಟ್ ಮಾಡಿದ್ದೀರಿ? ಎಲ್ಲೂ ಕೂಡ ನೀವು ಟೈಂ ಲಿಮಿಟ್‌ನಲ್ಲಿ ಎಕ್ಸ್‌ಪಾನ್‌ಶನ್ ಸ್ಕೀಂ ಮಾಡದೆ ಇರುವುದರಿಂದ, ಅನೇಕ ರೀತಿಯಲ್ಲಿ ಇನ್‌ಡೈರೆಕ್ಟ್ ಲಾಸ್ ಆಗುತ್ತಿದೆ. ಇನ್ನು ಕನ್ಸಲ್ಟೆಂಟ್ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಬಹಳ ಹೇಳಿದ್ದಾರೆ. ಇದು ಬಹಳ ವಿಚಿತ್ರವಾದುದು. ಫಾರಿನ್ ಮೆಷಿನರಿಗೆ ಹ್ಯಾಂಡಲ್ ಮಾಡುವುದಕ್ಕೆ ತಿಂಗಳಿಗೆ 4 ಸಾವಿರ ರೂಪಾಯಿ, ಮತ್ತು ಇಂಡಿಜಿನಸ್ ಸಾಮಾನುಗಳನ್ನು ಹ್ಯಾಂಡಲ್ ಮಾಡುವುದಕ್ಕೆ ಒಂದು ಸಾವಿರ ರೂಪಾಯಿ ಇದು ಎಷ್ಟು ವರ್ಷದಿಂದ ಕೊಟ್ಟುಕೊಂಡು ಬರುತ್ತಿದ್ದೀರಿ? ಕೆಲವು ಕಂಪೆನಿಗಳಲ್ಲಿ ಅಗ್ರಿಮೆಂಟಿನಲ್ಲಿ ಒಂದು ಕಂಡೀಷನ್ ಇಟ್ಟುಕೊಂಡು ಇರೆಕ್ಷನ್ ಬಗ್ಗೆ ಅವರಿಗೆ ಗ್ರ್ಯಾಂಟ್ ಕೊಟ್ಟು ಸುಮಾರು 30–31 ಲಕ್ಷ ರೂಪಾಯಿ ನಷ್ಟ ಮಾಡಿದ್ದೀರಿ. ಇದರ ಜೊತೆಗೆ ಗೌರ್ನ್‌ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ನ್ಯೂ ಗೌರ್ನ್‌ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಇವೆರಡು ಕೂಡ ಒಂದನ್ನೊಂದು ಸ್ಪರ್ಧೆ ಮಾಡುತ್ತವೆ. ಇದರಿಂದ ಅನೇಕ ರೀತಿಯಲ್ಲಿ ಸರ್ಕಾರಕ್ಕೆ ನಷ್ಟ ಆಗುತ್ತಿದೆ. ಈ ಕಂಪೆನಿಗೆ ಇವತ್ತು ಒಂದು ಕೋಟಿ 8 ಲಕ್ಷ ರೂಪಾಯಿ ಹೊರಗಡೆಯಿಂದ ಬರಬೇಕಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಏನು ಮಾಡಿದ್ದಾರೆ? ಮಧ್ಯಪ್ರದೇಶದವರು ಮತ್ತು ಮಹಾರಾಷ್ಟ್ರದವರು ಈ ಕಂಪೆನಿಯಿಂದ ಟ್ರಾನ್ಸ್‌ಫಾರ್ಮರ್ಸ್ ಬೇಕೆಂದು ಆರ್ಡರ್ ಮಾಡಿದರು. ಅದೇ ರೀತಿ ಟ್ರಾನ್ಸ್‌ಫಾರ್ಮರ್ಸ್‌ನ್ನು ಸಪ್ಲೈ ಮಾಡಿದ್ದಾರೆ. ಆದರೆ ಡಿಫೆಕ್ಟಿವ್ ಟ್ರಾನ್ಸ್‌ಫಾರ್ಮರ್ಸ್‌ನ್ನು 66ನೇ ಇಸವಿಯಲ್ಲಿ ಕಳಿಸಿಕೊಟ್ಟಿದ್ದಾರೆ. ಅದು 7.5 ಲಕ್ಷ ರೂಪಾಯಿ ಬೆಲೆಯದ್ದು. ಅವರು ನಂತರ ಅದು ಚೆನ್ನಾಗಿಲ್ಲವೆಂದು ಕೊಟ್ಟಂತಹ ಆರ್ಡರನ್ನು ಕ್ಯಾನ್ಸಲ್ ಮಾಡಿದರು. ಈಗ ಆ ಟ್ರಾನ್ಸ್‌ಫಾರ್ಮರ್ಸ್ ನಿಮ್ಮ ಕಂಪೆನಿಯಲ್ಲಿ ಬಿದ್ದಿದೆ. ಇದರಿಂದ ಈ ಕಂಪೆನಿಯ ಪ್ರೆಸ್ಟೀಜ್ ಏನಿದೆ ಎಂಬುದನ್ನು ನೋಡಬಹುದು. ಒಳ್ಳೆಯ ಸಾಮಾನುಗಳನ್ನು ಸಪ್ಲೈ ಮಾಡದವೆ ಈ ರೀತಿ ನಷ್ಟವಾಗಿದೆ. ಅದೇ ರೀತಿ ಸೇಲ್ಸ್ ಇಂಟರ್‌ನಾಶನಲ್. ಇದು ವಿಚಿತ್ರವಾದ ಸಂಸ್ಥೆ. ಸರ್ಕಾರದ ಕ್ಯಾಪಿಟಲ್ ಇದರಲ್ಲಿ 10 ಲಕ್ಷ ಹಾಕಿದ್ದಾರೆ. ಒಂದು ವರ್ಷದಲ್ಲಿ ಇದರಲ್ಲಿ ಏಳೂವರೆ ಲಕ್ಷ ನಷ್ಟವಾಗಿದೆ. ಇದು ಯಾವರೀತಿಯಲ್ಲಿ ಸರ್ಕಾರದ ಸೋಲ್ ಏಜೆನ್ಸಿಯಾಗಿ ಕೆಲಸ ಮಾಡುತ್ತದೆ ಯಾವ ರೀತಿ ವರ್ತಿಸುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 3500 ಎಲೆಕ್ಟ್ರಿಕ್ ಮೋಟಾರುಗಳನ್ನು ಸಪ್ಲೈ ಮಾಡಬೇಕೆಂದು ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಗೆ ಆರ್ಡರ್ ಕೊಟ್ಟರು. ಆ ರೀತಿ ಆರ್ಡರ್ ಕೊಟ್ಟಾದಮೇಲೆ ಆ ಆರ್ಡರನ್ನು ಎಗ್ಸಿಕ್ಯೂಟ್ ಮಾಡುವ ಸಂದರ್ಭದಲ್ಲಿ 650 ಮೋಟಾರುಗಳನ್ನು ತೆಗೆದುಕೊಂಡು ಬಾಕಿ ಮೋಟಾರುಗಳನ್ನು ಸ್ಟೋರ್ ಮಾಡುವುದಕ್ಕೆ ಸ್ಥಳವಿಲ್ಲವೆಂದು ಹೇಳಿದರು. ಈಗ ಅವನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಹಾಗೆಯೇ ಬಿಟ್ಟರು. ಇದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಈ ರೀತಿ ಸರ್ಕಾರದ ಎಲ್ಲಾ ಕಾರ್ಖಾನೆಗಳನ್ನು ನಷ್ಟಕ್ಕೆ ತೆಗೆದುಕೊಂಡು ಹೋಗುವ ವ್ಯವಸ್ಥೆ ಆಗಿದೆ. ಸೇಕಡ 15ರಷ್ಟೂ ಕೂಡ ಟಾರ್ಜೆಟ್ಟನ್ನು ರೀಚ್ ಮಾಡುವುದಕ್ಕಾಗಲಿಲ್ಲ.

ಇನ್ನು ರೆಮ್ಕೊ ಬಗ್ಗೆ ಹೇಳುವುದಾದರೆ, ಅಲ್ಲಿ ಬೇಕಾದಷ್ಟು ಎನರ್ಜಿ ಮೀಟರ್ಸ್, ವಾಟರ್ ಮೀಟರ್ಸ್, ರೇಡಿಯೋಗಳು ಮತ್ತು ಟ್ರಾನ್ಸಿಸ್ಟರ್ಸ್—ಇವನ್ನು ಸ್ಟೋರ್ ಮಾಡಿದ್ದಾರೆ. ಸರ್ಕಾರಕ್ಕೆ ಕೊಡಬೇಕಾದ್ದು ಸಾಲ 208 ಲಕ್ಷ ರೂಪಾಯಿಗಳಷ್ಟು ಇದೆ. ನಮ್ಮ ಕ್ಯಾಪಿಟಲ್ ಅಲ್ಲಿ 60 ಲಕ್ಷ ರೂಪಾಯಿಗಳು ಇದೆ. ಇದು ಹೇಗೆ ನಡೆಯುತ್ತಿದೆ ಎನ್ನುವುದನ್ನು ನೀವು ಊಹಿಸಿಕೊಳ್ಳಬಹುದು.

ಇನ್ನು ನಾಲ್ಕು ಸ್ಟ್ಯಾಚುಟರಿ ಕಾರ್ಪೊರೇಷನ್‌ಗಳ ಬಗ್ಗೆ ಹೇಳುವುದಾದರೆ, ಅಲ್ಲಿ ಹಾಕಿರತಕ್ಕ $83\frac{1}{2}$ ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟಿನಲ್ಲಿ ಸೇಕಡ 9ರಷ್ಟು ಲಾಭ ಬಂದಿದೆ. ಇದನ್ನು ನೋಡಿದರೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಏನು ಈಗ ಹಣವನ್ನು ವಿನಿಯೋಗಿಸುತ್ತಿದ್ದೇವೋ ಅದರಿಂದ ಸರ್ಕಾರಕ್ಕೆ ನಷ್ಟ, ರಾಜ್ಯಕ್ಕೆ ನಷ್ಟ ಮತ್ತು ಜನತೆಗೂ ನಷ್ಟ ಇದೆ. ಆದ್ದರಿಂದ ನೀವು ಇದರ ಅರ್ಧದಷ್ಟು ಹಣವನ್ನು ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಪ್ರೈವರ್ಟ್ ಮಾಡಿದ್ದರೆ ಇನ್ನು ಎಲ್ಲಾ ಸಣ್ಣ ಸಣ್ಣ ಕೈಗಾರಿಕೆಗಳು ಹೆಚ್ಚಿಗೆ ಬೆಳೆಯುವುದಕ್ಕೆ ಅವಕಾಶವಾಗುತ್ತಿತ್ತು.

(ಎಚ್. ಬಿ. ಜ್ವಾಲಾನಯ್ಯ)

ಜನಗಳಿಗೂ ನಾನಾ ವೃತ್ತಿಗಳು ಸಿಕ್ಕಿ ಅವರ ಜೀವನ ಸುಖಮಯವಾಗುತ್ತಿತ್ತು. ಇದರ ಬಗ್ಗೆ ಜಪಾನಿಗೆ ಇಂಡಿಯನ್ ಡೆಲಿಗೇಷನ್ ಹೋದಾಗ ಮಾಡಿದಂಥ ವರದಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಯಾವ ರೀತಿ ಅಭಿವೃದ್ಧಿಹೊಂದಿವೆ ಯೆಂಬುದನ್ನು ತಿಳಿಸಿದ್ದಾರೆ. ಜಪಾನ್ ಇಷ್ಟು ಕೈಗಾರಿಕೆಗಳಲ್ಲಿ ಪ್ರಗತಿಗೆ ಬರುವುದಕ್ಕೆ ಕಾರಣ ಸಣ್ಣ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿರುವುದೇ ಆಗಿದೆ. ಅಲ್ಲಿಯ ಪ್ರಧಾನ ಮಂತ್ರಿಗಳೇ ಸಣ್ಣ ಕೈಗಾರಿಕೆಗಳ ಪೋರ್ಟ್‌ಫೋಲಿಯೋವನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ನೀವು ಕೊಟ್ಟಿರುವ 75 ಲಕ್ಷ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. ನಿಮ್ಮಲ್ಲಿ ಸುಮ್ಮನೆ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್ ಇವರುಗಳ ಸಂಬಳಕ್ಕೇ ಎಷ್ಟೋ ಹಣ ಖರ್ಚಾಗುತ್ತಿದೆ. ಸಣ್ಣ ಕೈಗಾರಿಕೆಗಳಿಗೆ ಯಾವುದಕ್ಕೂ ಇದರಿಂದ ಉಪಯೋಗ ಬರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಕನಿಷ್ಠಪಕ್ಷ 3 ಕೋಟಿ ರೂಪಾಯಿಗಳನ್ನಾದರೂ ಸಣ್ಣ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಕೊಡಬೇಕೆಂದು ಹೇಳುತ್ತೇನೆ. ಇದರಿಂದ ಹೆಚ್ಚಿಗೆ ದೇಶ ಬೆಳೆಯುತ್ತದೆ. ಸ್ಟೇಟ್ ಏಡ್ ಇಂಡಸ್ಟ್ರೀಸ್ ಆಕ್ಟ್ ಪ್ರಕಾರ 35 ಲಕ್ಷ ರೂಪಾಯಿಗಳನ್ನು ಕೈಗಾರಿಕೆಯ ಅಭಿವೃದ್ಧಿಗಾಗಿ ಇಟ್ಟುಕೊಂಡಿದ್ದೀರಿ. ಅದನ್ನು ಯಾವುದಕ್ಕೆ ಕೊಡುತ್ತೀರಿ ! ಇದನ್ನು ಕನಿಷ್ಠಪಕ್ಷ ಒಂದು ಕೋಟಿ ರೂಪಾಯಿಗಳಿಗಾದರೂ ಹೆಚ್ಚಿಸಬೇಕು. ಈ 35 ಲಕ್ಷ ರೂಪಾಯಿಗಳಲ್ಲಿ ಕೈಗಾರಿಕೆಯ ಶಾಖೆಯ ವರ್ಗದವರಿಗೆ ಎಷ್ಟು ಕೊಡಬೇಕೋ ಅದನ್ನು ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಫೈನಾನ್ಸಿಂಗ್ ಕಾರ್ಪೊರೇಷನ್ ಮುಖಾಂತರ ಕೊಡಬೇಕಾಗಿದೆ. ಈಗ ಅದಕ್ಕೂ ದುಡ್ಡು ಇಲ್ಲ, ಇದಕ್ಕೂ ದುಡ್ಡು ಇಲ್ಲವೆಂದು ಹೇಳುತ್ತಾರೆ. ಹೊರದೇಶಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡುವಂಥ ಸೌಲಭ್ಯ ಇಲ್ಲಿ ಸ್ವಲ್ಪವೂ ಕೊಡುತ್ತಾ ಇಲ್ಲ. ಮೈಸೂರು ಸರ್ಕಾರ ಇತ್ತೀಚೆಗೆ ಸಣ್ಣ ಕೈಗಾರಿಕೆಗಳನ್ನು ಕಡೆಗಣಿಸಿದ್ದಾರೆ. ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಆಫೀಸು ಈಗ ಒಂದು ಆರ್ನಮೆಂಟಲ್ ಆಫೀಸು ಆಗಿದೆ. ಅಲ್ಲಿರುವ ಡೆಪ್ಯುಟಿ ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್‌ಗಳಿಗೆ ಕೆಲಸವೇ ಇಲ್ಲ. ನಿಮ್ಮ ಅಧಿಕಾರಿಗಳಲ್ಲಿ ಜನರಿಗೆ ವಿಶ್ವಾಸವೇ ಇಲ್ಲ. ಕೆಲವರು ಉತ್ತಮವಾದ ಅಧಿಕಾರಿಗಳೂ ಇದ್ದಾರೆ. ಕೆಲವರನ್ನು ನಾವೇ ಸೋಮಾರಿಗಳನ್ನಾಗಿ ಮಾಡಿದ್ದೇವೆ. ಕಾರಣ, ಅವರಿಂದ ಉಪಯುಕ್ತವಾದ ಕೆಲಸಗಳನ್ನು ಸರಿಯಾಗಿಪಡೆಯುತ್ತಾ ಇಲ್ಲ.

ಇನ್ನು ಖಾದಿ ಬೋರ್ಡ್ ಬಹಳ ನಷ್ಟದಿಂದ ಕೆಲಸಮಾಡುತ್ತಿದೆ. 20ನೇ ಶತಮಾನದಿಂದ ಮುಂದುವರಿಗೆ ಕೊಡತಕ್ಕ ಹಣ ಇದರಲ್ಲಿ ಸರ್ವಥಾ ವೇಸ್ಟ್ ಆಗುತ್ತಿದೆ. ಆದ್ದರಿಂದ ಸಣ್ಣ ಕೈಗಾರಿಕೆಗಳನ್ನು ಮೈಸೂರು ರಾಜ್ಯದಲ್ಲಿ ರಿವಲ್ಯೂಷನೈಜ್ ಮಾಡದೇ ಹೋದರೆ ಈ ರಾಜ್ಯಕ್ಕೆ ಏಳಿಗೆ ಇಲ್ಲ. ಒಳ್ಳೆಯದಾಗುವುದಿಲ್ಲ. ಅದೇ ರೀತಿಯಲ್ಲಿ ಕೆಲವು ಕೊ-ಆಪರೇಟಿವ್ ಸೆಕ್ಟರಿನಲ್ಲಿ ಷುಗರ್ ಮಿಲ್‌ಗಳನ್ನು ಈಗ ತೆಗೆದುಕೊಂಡಿದ್ದಾರೆ. ಅನೇಕ ಷುಗರ್ ಮಿಲ್ಲುಗಳಲ್ಲಿ ಸರ್ಕಾರದವರು ಬಂಡವಾಳವನ್ನು ಕೋಟ್ಯಾಂತರ ರೂಪಾಯಿಗಳಷ್ಟು ಹಾಕಿದ್ದಾರೆ. ಬಿಜಾಪುರದಲ್ಲಿ 10–12 ಲಕ್ಷ ರೂಪಾಯಿಗಳಷ್ಟು ಮೆಷನರಿಗಳನ್ನು ತಂದು ಹೊರಗಡೆ ಬಿಸಿಲಿನಲ್ಲಿ ಹಾಕಿದ್ದಾರೆ. ಸರ್ಕಾರದವರು ಇದರ ಬಗ್ಗೆ ಇನ್ನೂ ಗಮನ ತೆಗೆದುಕೊಳ್ಳುತ್ತಾ ಇಲ್ಲ.

ಇನ್ನು ಅಲ್ಪ ಪ್ರಮಾಣದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸೇಕಡ 15ರಷ್ಟು ಎನ್. ಇ. ಎಸ್. ಸ್ಕೀಂನಲ್ಲಿ ಇಟ್ಟುಕೊಂಡಿದ್ದಾರೆ. ಇದರ ಬಗ್ಗೆ ಸ್ಟೋರ್ಸ್ ಪರ್ಚೇಜ್ ಕಮಿಟಿಯವರು ಯಾವ ಗಮನವನ್ನು ಕೊಡುತ್ತಾ ಇಲ್ಲ. ಆದ್ದರಿಂದ ಸಣ್ಣ ಕೈಗಾರಿಕೆಗಳನ್ನು ಮೈಸೂರು ರಾಜ್ಯದಲ್ಲಿ ಬೆಳೆಸುವ ವ್ಯವಸ್ಥೆಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ. ಇದಕ್ಕೋಸ್ಕರವೇ ಬೇರೆ ಒಬ್ಬ ಮಂತ್ರಿಯನ್ನು ನೇಮಿಸಬೇಕು. ಅದರಿಂದ ಇನ್ನೂ ಹೆಚ್ಚಿಗೆ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅವಕಾಶವಾಗುತ್ತದೆ. ಇದರಲ್ಲಿ ನಷ್ಟವಾಗುತ್ತಿರುವುದನ್ನು ತಡೆಗಟ್ಟಬೇಕು. ಕಷ್ಟಪಟ್ಟು ಸಂಪಾದನೆ ಮಾಡಿರುವ ಕೋಟ್ಯಾಂತರ ರೂಪಾಯಿಗಳನ್ನು ವ್ಯರ್ಥಮಾಡಬಾರದು. ಹಿಂದಿನಿಂದ ಬಂದಂಥ ಡಿಮ್ಯಾಂಡ್‌ಗಳನ್ನು ನಮ್ಮ ಮಂತ್ರಿಗಳು ಇಲ್ಲಿ ಇಟ್ಟಿದ್ದಾರೆ. ಮಾನ್ಯ ರಾಜಶೇಖರ ಮೂರ್ತಿಯವರು ಕ್ರಾಂತಿಕಾರಕವಾದ ರೀತಿಯಲ್ಲಿ ಹೆಚ್ಚಿಗೆ ಡಿಮ್ಯಾಂಡುಗಳನ್ನು ಇಲ್ಲಿ ಇಡುತ್ತಾರೆಂದು ನಾನು ಎಣಿಸಿದ್ದೆ. ಏಕೆ ಇಡಲಿಲ್ಲವೋ ಗೊತ್ತಿಲ್ಲ. ಮಾನ್ಯ ಶ್ರೀ ಅಪ್ಪಣ್ಣನವರು ಈ ಬಾಬಿನಲ್ಲಿ ಒಳ್ಳೆಯ ಇಂಟರೆಸ್ಟ್ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಅವರಿಗೆ ದುಡ್ಡು ಇಲ್ಲ. ಸ್ಟೇಟ್ ಇಂಡಸ್ಟ್ರಿಯಲ್ ಫೈನಾನ್ಸಿಂಗ್ ಕಾರ್ಪೊರೇಷನ್, ಮತ್ತು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳು ಸಾಕಷ್ಟು ದುಡ್ಡು ಕೊಡುತ್ತಾ ಇಲ್ಲ. ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ನಷ್ಟವಾಗುತ್ತಿರುವ ಕೈಗಾರಿಕೆಗಳಿಗೆ ಹಣವನ್ನು

ಅವರು ಕೊಡುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ 10 ವರ್ಷಗಳ ಅವಧಿಯಲ್ಲಿ ಬಂಡವಾಳದಲ್ಲಿ ಬಹಳ ನಷ್ಟವಾಗುತ್ತಿದೆ. ಈ ರೀತಿ 75 ಲಕ್ಷ ರೂಪಾಯಿಗಳನ್ನು ಭಿಕ್ಷೆಯಾಗಿ ಕೊಡುವುದು ಸರಿಯಲ್ಲ. ಆದುದರಿಂದ ಈ ಬೇಡಿಕೆಗೆ ಅನುಮತಿಯನ್ನು ಕೊಡಬಾರದು. ಇಂಡಸ್ಟ್ರಿಯಲ್ ಕೊ-ಆಪರೇಟಿವ್ ಎಸ್ಟೇಟ್ ಎಂದು ಮಾಡುವುದು ಒಳ್ಳೆಯದು. ಅದನ್ನು ಈಗ ಬೆಂಗಳೂರು, ಬೆಳಗಾಂ, ಮತ್ತು ಹುಬ್ಬಳ್ಳಿಯಲ್ಲಿ ಮಾಡುತ್ತಿದ್ದಾರೆ. ಆದರೆ ಮಫ್ಯೂಸಿಲ್ ಪ್ಲೇಸಸ್‌ನಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಇವರು ಏನೂ ಮಾಡುತ್ತಾ ಇಲ್ಲ. ಜಪಾನಿನಲ್ಲಿ ಅಲ್ಲಿಯ ಸರ್ಕಾರದವರು ಯಾವ ರೀತಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ತೆಗೆದುಕೊಂಡಿದ್ದಾರೋ ಅದೇ ರೀತಿ ಇಲ್ಲಿಯೂ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೈಗಾರಿಕೆ, ವ್ಯಾಪಾರ ಮತ್ತು ಮಾರ್ಕೆಟಿಂಗ್ ಈ ಮೂರರ ಬಗ್ಗೆ ಹೊಸ ವ್ಯವಸ್ಥೆ ರಾಜ್ಯದಲ್ಲಿ ಮಾಡಬೇಕು. ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳ ಪ್ರಗತಿಯಾಗಬೇಕಾದರೆ ಸಣ್ಣ ಕೈಗಾರಿಕೆಗಳಿಂದಲೇ ಹೊರತು ದೊಡ್ಡ ದೊಡ್ಡ ಕೈಗಾರಿಕೆಗಳಿಂದ ನಷ್ಟವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri R. G. WALI** (Hubli). While supporting the demands made by the hon. Minister for Industries, I would like to place before the House some of the suggestions.

Since the Reorganisation of the States the industrial progress of our State is not so satisfactory. We are happy that since the last one and half years special attention is being paid by the Government and they have declared a number of concessions for starting new industries. While going through the report I am happy to find that during the last nine months 19 applications for setting up new industries were received. The encouragements given to start new industries, no doubt, have created a good atmosphere and it is necessary to see that no difficulty is experienced by the industrialists and it should be made very clear that whenever any assistance is necessary, it should be made available as quickly as possible. There should not be any difficulty in getting licences and giving necessary raw materials and other necessary facilities like land, water and electricity. I find Sir, that there are a number of difficulties experienced by these new entrepreneurs who want to come and start new industries in Mysore State. Many times the industrialists who have started industries will have to feel sorry for having started industries. I want to suggest that all the facilities must be made available to them and any delay in giving such facilities will cause a great loss to Mysore State. Therefore, I suggest that all facilities should be made available as quickly as possible. I want to point out here that the Area Development Board was constituted and it has taken up the cause of developing certain areas by providing all the facilities like water, electricity and plots. But unfortunately the progress is very slow. But so far as I know, no industrial area has been formed except in Bangalore.

Sir, some of the Government industries, as already pointed by me and some of the Hon. Members, which were incurring heavy loss during the last one year, are progressing well. It is quite necessary that proper attention should be given towards the management and to see that the affairs are set right in a proper way. The industries cannot be managed by those sitting in the office or by those working in the Government offices. They have to be handled by proper persons and

(SRI R. G. WALI)

proper vigilance is very essential in this field. If the industries are not manned by proper persons, the money invested in various industries will be lost. The Hon. Minister for Industries and the Hon. Chief Minister have taken a lot of interest during the last one year to see that industries progress well. But let us not be happy about it. What we have to do is, we have to see that all industries progress well in the coming years. I have pointed out many a time that the industrialists are experiencing great hardship in securing raw materials. The lack of supply of raw materials is one of the main reasons for non-development of industries in the State. The industrialists are not getting steel. The Steel is now de-controlled. Due to this reason, the rate has gone up by 2 to 2½ times the original rate. When it was controlled it was available in sufficient quantity and the rate was also reasonable. The rates would not have risen to this level if it was controlled. The Central Government has taken a hasty decision. Many industries are not getting the required quantity of steel. They have to approach various other markets paying 2½ times more than the prescribed rate and obtain the required quantity to run their industry. Unfortunately, they are not getting even 25 per cent quota. If that is the position, what is to be done for steel? naturally who can afford to pay more? They will have to go outside. The Government must see that the legitimate quota for each industry is given without any delay.

I am told that some of the industries are given the import licence for steel. I have to point out that this import licence has become a farce. The actual quantity cannot be imported and has not been imported so far by any industry. Small quantity cannot be imported at all. Overhead charges will be more and they will have to pay extra money. Instead of allowing a situtation like this and making the industrialists to suffer, the required full quantity of steel may be secured by the Small Industries Corporation and made available to all those industries. Some other raw materials are required for some industries. Such industries have been given permission to import them. Some small industries are put to very great hardship to get those raw materials. But the authorities will easily escape by saying that those industries have been given permission to import their raw materials. But the question is whether it is possible to get these raw materials imported by these small industries? Unfortunately these small industries are not able to import the raw materials they require. Therefore, I suggest that these raw materials are imported by the Industrial Corporation and made available to these small industries also. This could be made possible by arriving at an understanding between the State and the Central Government.

Regarding the industrial licensing policy, I am told that the Centre has declared that the industries with capital up to Rs. 1 crore need not take any licence. But there is a clause restricting the import

of components. A licence will have to be taken from the Central Government if components worth of Rs. 10 lakhs are to be imported. Many industrialists are unable to get the components on account of this clause. They are finding it difficult to import the components they require. These components are very essential for some of the industries. Therefore the State Government should see that arrangements are made to import such components and see that these components are distributed among the industrialists so that they can start industries as early as possible.

I am very happy that recently some of these industries have come up in some of the Districts. Some of the industries have been proposed and the licences have been given. I am further told that 19 industries are to be started. These industries must come up and they must start functioning immediately. Some of the industries functioning should be provided with all facilities that are necessary for smooth functioning. As I said earlier, the most important thing that is required for industries is raw materials. It is very necessary that raw materials are supplied to them as early as possible without any trouble. Financial help should also be given so that new entrepreneurs may come up. The other facilities like electricity, water and plots should be given immediately without any reservation. I think if all these facilities are given, the industries will come up and the State will soon be industrialised and economically advanced. With these few words, I conclude my speech. Thank you, Sir.

11-30 A.M.

[MR. DEPUTY SPEAKER in the Chair]

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಇವತ್ತು
ರಾಷ್ಟ್ರದ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ ಮತ್ತು ಏಳಿಗೆ ಯಾವ ಪ್ರಕಾರ ಆಗಿದೆಯೋ ಅದರಂತೆ
ನಮ್ಮ ರಾಜ್ಯ ಆಗಿಲ್ಲ ಎಂದು ನನಗೆ ಅನಿಸುತ್ತದೆ, ಇದಕ್ಕೆ ಎರಡು ಕಾರಣಗಳು ಇವೆ ಎಂದು ತಿಳಿದು
ಕೊಂಡಿದ್ದೇನೆ. ಒಂದನೆಯದು ನಮ್ಮ ರಾಜ್ಯಕ್ಕೆ ಲಾಭಕರವಾದ ವಿಷಯಗಳನ್ನು ಪ್ರತಿಪಾದಿಸಿದೆ,
ನಮ್ಮ ಸಂಸತ್ ಸದಸ್ಯರು ಕೇಂದ್ರದ ಮೇಲೆ ಒತ್ತಾಯ ತರದೆ ಮೌನವಾಗಿ ಕುಳಿತಿರುವುದು.
ಇನ್ನೊಂದು ನಮ್ಮ ರಾಜ್ಯ ಸರ್ಕಾರದ ಅನಾಸಕ್ತಿ. ಇದನ್ನು ಏಕೆ ಹೇಳಬೇಕಾಯಿತು ಎಂದರೆ
ನಮ್ಮಲ್ಲಿ ಬಿ. ಇ. ಎಲ್. ಇದೆ. ಇವರ ಸೆಕೆಂಡ್ ಯೂನಿಟನ್ನು ಸದ್ಯದಲ್ಲೇ ಇನ್‌ಸ್ಟಾಲ್ ಮಾಡ
ಬೇಕಾದ ಪರಿಸ್ಥಿತಿ ಇದೆ. ಬೆಂಗಳೂರಿನಲ್ಲೇ ಮಾಡಬೇಕೆಂದು ಮೊದಲು ಪ್ರಪೋಸಲ್ ಇತ್ತು, 45
ಎಕರೆ ಜಮೀನನ್ನು ಕೊಡುವುದಕ್ಕೂ ಕೂಡ ನಮ್ಮ ಸರ್ಕಾರದವರು ಒಪ್ಪಿಕೊಂಡಿದ್ದರು. ಅಂತೂ
ಏನೋ ಒಂದು ಕಡ್ಡಾಯಕ್ಕಾಗಿ ಒಪ್ಪಿಕೊಂಡ ಹಾಗೆ ಇಲ್ಲಿ ಅದನ್ನು ಸ್ಥಾಪನೆ ಮಾಡುವುದಕ್ಕೆ ಒಪ್ಪಿ
ಕೊಂಡಿದ್ದರು, ಈಗ ಏನೋ ಒಂದು ನೆಪ ಮಾಡಿಕೊಂಡು ಬಿ. ಇ. ಎಲ್. ಮ್ಯಾನೇಜ್‌ಮೆಂಟಿನವರು
ಅದನ್ನು ಡೆಲ್ಲಿಯಲ್ಲಿ ಇನ್‌ಸ್ಟಾಲ್ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ ಎಂದು ತಿಳಿದು
ಬಂದಿದೆ. ಇದನ್ನು ಏಕೆ ಹೇಳಬೇಕಾಯಿತು ಎಂದರೆ ಇಂತಹ ಒಂದು ಯೂನಿಟ್ಟು ನಮ್ಮ ರಾಜ್ಯ
ದಲ್ಲಿ ಆದರೆ ಹತ್ತು ಸಾವಿರ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಸಿಕ್ಕುತ್ತದೆ. ಯಾವುದೋ
ಒಂದು ಕಾರಣಕ್ಕಾಗಿ, ಬೇರೆ ಕಡೆಗೆ ಇದನ್ನು ಕೊಡುವುದಕ್ಕೆ ಈ ಜಾಗ ಇದಕ್ಕೆ ಲಾಯಕ್ಕಲ್ಲ
ಎಂದು ಕೊಲ್ಯಾಬೊರೇಟರ್ಸ್ ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೋ ಅದನ್ನೂ ಕೂಡ ವಿಚಾರಿ
ಡೆಲ್ಲಿಯಲ್ಲಿ ಮಾಡಬೇಕೆಂದು ಹೇಳುವುದಕ್ಕೆ ಯಾವ ಕಾರಣ ಇತ್ತು ಅಂತ ಅನ್ನುವುದು ನನಗೆ ಅರ್ಥ
ವಾಗುವುದಿಲ್ಲ. ಮಾನ್ಯ ಶ್ರೀ ರಾಜಶೇಖರಮೂರ್ತಿಗಳು ಇದರ ವಿಷಯದಲ್ಲಿ ಈ ಸಭೆಗೆ ಸರಿಯಾದ
ತಿಳುವಳಿಕೆ ಕೊಡಬೇಕೆಂದು ಹೇಳುತ್ತೇನೆ. ಇದರಲ್ಲಿ ನಮ್ಮ ರಾಜ್ಯದವರ ಅನಾಸಕ್ತಿಯೇ ಇದಕ್ಕೆ

(ಶ್ರೀ ಎಚ್. ಎನ್. ನಂಜೇಗೌಡ)

ಕಾರಣ ಎಂದು ಜನ ಮಾತನಾಡಿಕೊಳ್ಳುತ್ತಾ ಇದ್ದಾರೆ. ರಾಜ್ಯಸರ್ಕಾರದವರು ಪ್ರಯತ್ನ ಪಡದೆ, ಮತ್ತು ಸಂಸತ್ ಸದಸ್ಯರು ಮೌನ ತಾಳಿರುವುದರಿಂದ ಈ ರೀತಿ ಆಗುತ್ತಾ ಇರುವುದು. ಇದು ಬಹಳ ದುರ್ದೈವದ ಸಂಗತಿ. ಇಂತಹ ವಿಷಯಗಳಲ್ಲಿ ಕೇಂದ್ರಸರ್ಕಾರದವರು ನಮ್ಮ ರಾಜ್ಯವನ್ನು ಅನಾದರಣೆಯಿಂದ ಕಾಣುತ್ತಾ ಇರುವುದು ಬಹಳ ದುರ್ದೈವದ ಸಂಗತಿ. ಇದನ್ನು ಬಲಯುತವಾಗಿ ಪ್ರತಿಪಾದನೆ ಮಾಡಿ, ಟೆಕ್ನಿಕಲ್ ಒಪೀನಿಯನ್ ಕೂಡ ಈ ಯೂನಿಟ್ಟು ಬೆಂಗಳೂರಿನಲ್ಲಿ ಇರಬೇಕೆಂದು ಇರುವುದರಿಂದ ಇಲ್ಲೇ ಸೆಂಕೆಂಡ್ ಯೂನಿಟ್‌ನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ತಿಳಿಸುತ್ತೇನೆ.

ರಾಜ್ಯ ಸರ್ಕಾರದ ಅನಾಸಕ್ತಿ ಬೇರೆ ವಿಷಯದಲ್ಲೂ ಕೂಡ ಇರುವ ಹಾಗೆ ಕಾಣುತ್ತದೆ. ಏಕೆಂದರೆ ನಾನು ಸರ್ಕಾರದ ವತಿಯಿಂದ ಒಂದು ಸಮಾಚಾರವನ್ನು ತರಿಸಿಕೊಂಡೆ. ನಮ್ಮ ಹಾಸನ ಜಿಲ್ಲೆಯಲ್ಲಿ 25 ಜನ ಅರ್ಜಿಹಾಕಿಕೊಂಡವರ ಪೈಕಿ 19 ಜನಕ್ಕೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿದ್ದಾರೆ. 1968 ರಿಂದ ಈಚೆಗೆ ಈ 19 ಜನಕ್ಕೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿರುವುದನ್ನು ನೋಡಿದರೆ 5 ಜನರ ಬಗ್ಗೆ ಮಾಹಿತಿ ಇದೆ, ಇನ್ನು 14 ಬೋಗಸ್ ಕಂಪೆನಿಗಳು, ಅವರು ಮೆಷಿನರಿಯನ್ನೇ ಇನ್‌ಸ್ಟಾಲ್ ಮಾಡಿಲ್ಲ. ಏಕೆ ಇದನ್ನು ಹೇಳಬೇಕಾಯಿತು ಎಂದರೆ ಇವತ್ತು ಜ್ವಾಲನಯ್ಯನವರ ನೆಂಟರಿಗೆ ಕೊಟ್ಟಿದ್ದಾರೆ, ದೇವೇಗೌಡರ ನೆಂಟರಿಗೆ ಕೊಟ್ಟಿದ್ದಾರೆ, ಶಿವಪ್ಪನವರ ನೆಂಟರಿಗೆ ಕೊಟ್ಟಿದ್ದಾರೆ ಅಂತ ಹೇಳಿ ಜನ ಮಾತನಾಡಿಕೊಳ್ಳುತ್ತಾ ಇದ್ದಾರೆ. ದೇವೇಗೌಡರು 68 ರಿಂದ ಈಚೆಗೆ ಕಾಂಗ್ರೆಸ್‌ನಲ್ಲಿ ಸೇರಿದವರು; ಆದ್ದರಿಂದ ಇಂತಹ ಒಂದು ಪ್ರಸಂಗ ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಂಜೇಗೌಡರಿಗೆ ನನ್ನ ಮೇಲೆ ಕಣ್ಣು ಬಹಳ ಜಾಸ್ತಿ ಅಂತ ಕಾಣುತ್ತದೆ. ದೇವೇಗೌಡರ ನೆಂಟರಿಗೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿದ್ದಾರೆ ಎಂದು ಅವರು ಹೇಳಿದರು. ನಮ್ಮ ವಂಶದವರಾಗಲಿ ನಮ್ಮ ಸಂಬಂಧೀಕರಾಗಲಿ ಎಲ್ಲರೂ ಹೊಲ ಉಳುವವರೇ, ನಮ್ಮ ತಾಯಿ ಹೊಲದಲ್ಲಿ ಉಳುಮೆ ಮಾಡುವವರಿಗೆ ಹೊತ್ತಿಗೆ ಸರಿಯಾಗಿ ಊಟ ತರುವ ಅಭ್ಯಾಸ ಇಟ್ಟುಕೊಂಡಿದ್ದಂಥವರು, ಇದಕ್ಕಿಂತ ಹೆಚ್ಚಿಗೆ ಇನ್ನೇನನ್ನು ಹೇಳಲಿ? ಒಂದುವೇಳೆ ಅಧಿಕಾರಿಗಳ ಹತ್ತಿರವಾಗಲಿ, ಮಂತ್ರಿಗಳ ಹತ್ತಿರವಾಗಲಿ ಹೋಗಿ ಇಂಥವರಿಗೆ ಯಾರಿಗಾದರೂ ಸ್ಟೇನ್‌ಲೆಸ್‌ಸ್ಟೀಲ್ ಕೋಟಾ ಕೊಡಿ ಎಂದು ಹೇಳಿದಂತಹ ನಿದರ್ಶನ ಅವರು ತೋರಿಸಿಕೊಟ್ಟರೆ ನಾನು ತಪ್ಪು ಒಪ್ಪಿಕೊಳ್ಳುತ್ತೇನೆ, ಬೇಕಾದರೆ ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಎನ್‌ಕ್ವೈರಿ ಆಗಲಿ ಅಂತ ಒತ್ತಾಯ ಮಾಡುತ್ತಾರೆ ಅಂತ ನಾನು ತಿಳಿದುಕೊಂಡಿದ್ದೆ.

Sri H. D. DEVE GOWDA.—I welcome the suggestion. Whether they are the relatives of Sri Jwalanaiah or Sri Sivappa or anybody, an enquiry should be held and if there is any illegal transaction he must be punished.

ಶ್ರೀ ಎಚ್. ಎನ್. ನಂಜೇಗೌಡ.—ಇದನ್ನು ಏಕೆ ಹೇಳಬೇಕಾಯಿತು ಎಂದರೆ ಇವತ್ತು ಅಂತಹ ಬೋಗಸ್ ಕಂಪೆನಿಯವರು ಮೆಷಿನರಿಯನ್ನೂ ಕೂಡ ಇನ್‌ಸ್ಟಾಲ್ ಮಾಡದೆ ಕೋಟಾ ಪಡೆದುಕೊಂಡು ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. 19 ಜನರ ಪೈಕಿ 14 ಜನರಲ್ಲಿ ಮೆಷಿನರಿಯೇ ಇಲ್ಲ, ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಪಾಯಿಂಟ್-ಆಫ್-ಆರ್ಡರ್ ಸರ್, ಈಗ ಮಾನ್ಯ ಸದಸ್ಯರು ಮಾತನಾಡುತ್ತಾ ಸ್ಟೇನ್‌ಲೆಸ್‌ಸ್ಟೀಲ್ ಕೋಟಾವನ್ನು ಶಿವಪ್ಪನವರ ಬಂಧುಗಳಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಮತ್ತು ಇನ್ನೂ ಕೆಲವರು ಬಂಧುಗಳಿಗೆ ಕೊಟ್ಟಿದ್ದಾರೆ ಎಂದು ಅವರು ಹೇಳಿದರು. ಒಂದು ವೇಳೆ ಅವರ ವಂಶಸ್ಥರು ಯಾರಾದರೂ ಅಕಸ್ಮಾತ್ತಾಗಿ ಪಾತ್ರೆಗಳ ಟ್ರೇಡರ್ಸ್ ಆಗಿದ್ದರೆ ಅಂಥವರಿಗೆ ಕೊಡಬಾರದು ಅಂತ ಕಟ್ಟಳೆ ಇದೆಯೇ? ಅಂಥವರು ಆ ವ್ಯವಹಾರವನ್ನೇ ಬಿಟ್ಟು ಬಿಡಬೇಕು ಅಂತ ಮಾನ್ಯ ಸದಸ್ಯರ ಅಭಿಪ್ರಾಯವೇ? ಅವರ ನೆಂಟರು ಯಾರಾದರೂ ಇದ್ದರೆ ಅವರು ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕ ಒಂದು ಪದ್ಧತಿಯನ್ನು ಮುಂದೆಯೂ ಮಾಡಿಕೊಂಡು ಬಂದರೆ ಅದರಲ್ಲಿ ತಪ್ಪೇನಾದರೂ ಇದೆಯೆ?

ಉಪಾಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಶಿವಪ್ಪನವರ ಬಗ್ಗೆ ಆಗಲಿ ಇತರರ ಬಗ್ಗೆ ಆಗಲಿ ಹೇಳುತ್ತಿಲ್ಲ, ಜನ ಆ ರೀತಿ ಮಾತನಾಡಿಕೊಳ್ಳುತ್ತಾ ಇದ್ದಾರೆಂದು ಹೇಳಿದೆ. ಇದನ್ನು ಕೊಟ್ಟಿರುವ ರೀತಿಯಲ್ಲಿ ಸ್ವಲ್ಪ ಅನುಮಾನಕ್ಕೆ ಆಸ್ಪದವಾಗಿದೆ ಎಂಬುದನ್ನು ಹೇಳುತ್ತಾ ಇದ್ದೆ. 68ರಲ್ಲಿ ಈ ಕೋಟಾ ಕೊಟ್ಟರಲ್ಲಾ ಅಲ್ಲಿಂದ ಇಲ್ಲಿಯವರೆಗೂ ನಿಮ್ಮ ಅಧಿಕಾರಿಗಳು ಏನು ಮಾಡುತ್ತಾ ಇದ್ದರು? ಕತ್ತೆ ಕಾಯುತ್ತಾ ಇದ್ದರೇ? ಕೋಟಾ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟದ್ದು ಬಹಳ ಅನ್ಯಾಯ, ಇದರ ಬಗ್ಗೆ ತನಿಖೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಹಾಸನದಲ್ಲಿ ಮೊನ್ನೆ ಒಂದು ವಿಚಾರ ಗೊತ್ತಾಯಿತು, ಕಾಂಗ್ರೆಸ್ ಸದಸ್ಯರಾದ ಡಿ. ಎಸ್. ಗೌಡರ ಮನೆಯವರಿಗೆ ಸ್ಪಿರಿಟ್ ಕೋಟಾ ಕೊಟ್ಟಿದ್ದಾರೆ ಅಂತ ಗೊತ್ತಾಯಿತು, ಅಧಿಕೃತವಾಗಿ ಕೊಟ್ಟಿದ್ದಾರೋ ಇಲ್ಲವೋ ಎಂಬುದು ಗೊತ್ತಿಲ್ಲದೇ ಇರುವಾಗ ಅದನ್ನು ಸರಿಯಾಗಿ ವಿಚಾರಿಸಿ ಹೇಳಬೇಕಾಗುತ್ತದೆ.

ಷುಗರ್ ಫ್ಯಾಕ್ಟರಿ ಮೊಲಾಸಸ್‌ನ್ನು ಉಪಯೋಗ ಮಾಡಿ ಡ್ರಿಂಕ್ಸ್ ತಯಾರು ಮಾಡುವುದಕ್ಕೆ ಸರ್ಕಾರದವರೇ ಬ್ರೂಯರೀಸ್ ಓಪನ್ ಮಾಡಬೇಕು. ಇದನ್ನು ಖೊಡೇಸ್ ಅನ್ನುವವರಿಗೆ ಕೊಟ್ಟು ಅವರು ಅನುಚಿತವಾಗಿ ಲಾಭ ಸಂಪಾದನೆ ಮಾಡಿಕೊಳ್ಳುವಂತಹ ಒಂದು ಬಿಸಿನೆಸ್ ಆಗಿ ಮಾಡಿಕೊಳ್ಳುತ್ತಾ ಇದ್ದಾರೆ. ಆದ್ದರಿಂದ ಈಗಲಾದರೂ ಸರ್ಕಾರದವತಿಯಿಂದಲೇ ಬ್ರೂಯರೀಸ್‌ನ್ನು ಓಪನ್ ಮಾಡಿಸಬೇಕೆಂದು ಮಾನ್ಯ ಸಚಿವರಿಗೆ ಸೂಚನೆ ಕೊಡುತ್ತೇನೆ.

ಇನ್ನು ಪ್ರಾಮುಖ್ಯವಾಗಿ ಹೇಳಬೇಕಾದ ವಿಷಯ ಎಂದರೆ ಎಂ. ಎಸ್. ಕೆ. ಮಿಲ್ಸ್‌ನ ವಿಷಯ. ಇದರಲ್ಲಿ ರಾಜಶೇಖರ ಮೂರ್ತಿಯವರ ಕೈವಾಡ ಇಲ್ಲ, ಇವರು ಹೊಸದಾಗಿ ಬಂದಿರುವವರು ಅಂತ ಅನ್ನುವುದನ್ನು ಅರ್ಥಮಾಡಿಕೊಂಡಿದ್ದೇನೆ. ಏಕೆಂದರೆ ಇದು 62ನೇ ಇಸವಿಯಲ್ಲಿ ಪ್ರಾರಂಭವಾದದ್ದು. ಮೊದಲು 14.5 ಲಕ್ಷ ರೂಪಾಯಿಗಳನ್ನು ಈ ಮಿಲ್ಲಿಗೆ ಕೊಟ್ಟರು. ಇಷ್ಟು ಹಣ ಕೊಡುವುದಕ್ಕೆ ಕಾರಣ ಇರಲಿಲ್ಲ, ಕೊಡುವಂತಹ ಸ್ಥಿತಿಯಲ್ಲಿ ಅದು ಇರಲಿಲ್ಲ. ಆದರೂ ಕೂಡ ಕೊಟ್ಟರು. ಅದಾದಮೇಲೆ ಪುನಃ ಮುಚ್ಚಲಾಯಿತು. ಆಗ 60 ಲಕ್ಷ ರೂಪಾಯಿಗಳನ್ನು ಕೊಟ್ಟರು. ಈ ಮಿಲ್ಲಿನ ಅಸೆಟ್ಸ್‌ಗಿಂತ ಲಯಬಲಿಟೀಸ್ ಜಾಸ್ತಿಯಾಗಿದೆ. ಹಾಗಿರುವಾಗ ಮತ್ತೆ 65 ಲಕ್ಷ ಕೊಟ್ಟರು. 62ನೆಯ ಇಸವಿಯಲ್ಲಿ ಚುನಾವಣೆ ನಡೆಯಿತು, ಆಗ ನಿಜಲಿಂಗಪ್ಪನವರು ಕೈವಾಡ ನಡೆಸಿದರು ಎಂದು ಹೇಳುತ್ತಿದ್ದಾರೆ. ಮಿಲ್ಲಿನ ಅಸೆಟ್ಸ್—65 ಲಕ್ಷವಿರುವಾಗ ಹೇಗೆ ಸರಕಾರ ಹೆಚ್ಚು ಹಣ ಕೊಟ್ಟಿದೆ? ಹೀಗೆ ಮಾಡಿರುವುದು ಸ್ಟೇಟ್ ಏಡ್ ಟು ಇಂಡಸ್ಟ್ರೀಸ್ ಆಕ್ಟಿಗೆ ವಿರೋಧವಾಗಿಲ್ಲವೇ? ಸರಕಾರ ಇಷ್ಟು ಸಹಾಯ ಮಾಡಿದರೂ ಕಾರ್ಖಾನೆಯನ್ನು ಸರಿಯಾಗಿ ನಡೆಸುವುದಕ್ಕಾಗಿಲ್ಲ. ಸರಕಾರ ಕೊಟ್ಟ ಹಣವನ್ನು ಸಾಲ ತೀರಿಸಲು ಉಪಯೋಗಿಸಿದ್ದಾರೆ, ದುರುಪಯೋಗಿಸಿದ್ದಾರೆ, ದುರುಪಯೋಗ ಮಾಡಿದ್ದಾರೆ. ಹೀಗಿದ್ದರೂ ಕೂಡ ಸುಮ್ಮನಿರುವುದು ನೋಡಿದರೆ ಆಶ್ಚರ್ಯವಾಗುವುದು. 67ರ ಕೊನೆಗೆ ಸಾಲ, ಷೂರಿಟಿ ಎಲ್ಲಾ ಸೇರಿ ಸರಕಾರ 127 ಲಕ್ಷ ಕೊಟ್ಟಿದೆ. ಎಂ.ಎಸ್.ಕೆ. ಮಿಲ್ಸ್ ಅಸೆಟ್ಸ್ 67ರ ಕೊನೆಗೆ 125 ಲಕ್ಷ. ಲಯಬಿಲಿಟೀಸ್ ಹೆಚ್ಚಾಗುತ್ತಿದೆ. ಹಾಗಿರುವಾಗ 127 ಲಕ್ಷ ಕೊಟ್ಟರು, ಮತ್ತೆ 21 ಲಕ್ಷ ಕೊಟ್ಟರು. ಹಾಗೆ ಕೊಡುವಾಗ ನಿಜಲಿಂಗಪ್ಪನವರು ಮಾಡಿರುವ ಒಂದು ಸ್ಟೇಟ್‌ಮೆಂಟ್ ಇದೆ, ಈ ಸಭೆಯಲ್ಲಿ ಆ ಸ್ಟೇಟ್‌ಮೆಂಟ್ ಹೇಳಿದರೆ ಅರ್ಥವಾಗುವುದು. 10-7-67ರಲ್ಲಿ ದಿಗಂಬರರಾವ್ ಅವರು ಈ ಬಗ್ಗೆ ಪ್ರಶ್ನೆ ಕೇಳಿದಾಗ ಅವರು ಮಾಡಿರುವ ಸ್ಟೇಟ್‌ಮೆಂಟನ್ನು ಓದುತ್ತೇನೆ.

> "The Government have carefully considered the report of the enquiry committee and are of the opinion that the Mill do not have a case on economic grounds. It has not contributed anything towards the economic working and the sound financial position of the Mills. Lately it has become an unsound proposition on account of heavy accumulations. Therefore, there appears to be no alternative to the decision to close the Mills as already resolved by the Board."

ಇದಾದ ನಂತರ ಇತ್ತೀಚೆಗೆ 90 ಲಕ್ಷ ಷೇರು ಎಂದು ಟ್ರೀಟ್ ಮಾಡಬೇಕು, ಮತ್ತೆ 50 ಲಕ್ಷ ಸಾಲ ಕೊಡಬೇಕು ಎಂದು ಯಾವ ಕಾರಣದಿಂದ ತೀರ್ಮಾನ ಮಾಡಿದರು? ಇತ್ತೀಚೆಗೆ ಒಬ್ಬರನ್ನು ಅಲ್ಲಿಗೆ ತಂದುಹಾಕಿದರು, ಅಗ್ರಿಮೆಂಟ್ ನನ್ನ ಹತ್ತಿರವಿದೆ. ಆ ಮಿಲ್ಲಿನ ಸರ್ವಾಧಿಕಾರಿ ಆ ಮನುಷ್ಯ.

(ಶ್ರೀ ಎಚ್. ಎನ್. ನಂಜೇಗೌಡ)

ಅವನು ಕೇವಲ ಎರಡು ಲಕ್ಷ ಕೊಟ್ಟಿದ್ದಾನೆ. ಇಡೀ ಬಂಡವಾಳ ಸರಕಾರದ್ದಿದೆ. ಅಲ್ಲಿರುವ ಸರ್ವಾಧಿಕಾರಿಗೇನು ಆಶಕ್ತಿ ಇದೆ? ಆಗ್ರಿಮೆಂಟಿನ ಪ್ರಕಾರ ಅವನಿಗೆ ಜವಾಬ್ದಾರಿಯಿಲ್ಲ, 15 ಸಾವಿರ ಆತ ದಾನ ಕೊಡಬಹುದು, ಪಿಲ್ ಟರ್ನ್‌ಓವರ್ ಮೇಲೆ ಸೇಕಡ ಮೂರುಕಾಲು ಅವನಿಗೆ ಲಾಭ ಕೊಡಬೇಕು, ಅದರಲ್ಲಿ ವೀರೇಂದ್ರ ಪಾಟೀಲರಿಗೆ ಎಷ್ಟು ಬರುತ್ತದೆ ಎಂದು ಜನರು ಕೇಳುತ್ತಿದ್ದಾರೆ. ಇಡೀ ಬಂಡವಾಳ ಸರಕಾರ ಹಾಕಿ ಬೇರೆ ಜನ ಅಲ್ಲಿ ತಂದುಹಾಕಿ ಅವರಿಗೆ ಲಾಭ ಕೊಡುವಾಗ ಸರಕಾರದಲ್ಲಿರುವವರಿಗೆ ಪಾಲಿಲ್ಲ ಎಂದರೆ ಎಂಬುದು ಹೇಗೆ? ಇದರಲ್ಲಾಗಿರುವ ಭಾರಿ ಅನ್ಯಾಯ ನೋಡಿದರೆ ರಾಜ್ಯದ ಹಣ ಪೋಲಾಗುವುದು ಕಂಡುಬರುತ್ತದೆ, ಈ ಸರಕಾರ ಅಧಿಕಾರ ದುರುಪಯೋಗ ಮಾಡಿ ರಾಜ್ಯದ ಹಣ ಲೂಟಿ ಮಾಡುತ್ತಿದೆ, ಆದುದರಿಂದ ಎಂ.ಎಸ್.ಕೆ. ಮಿಲ್ಸ್ ಅಫೇರ್ಸನ್ನು ಕೇಂದ್ರ ಸರಕಾರ ನೋಡಿ ಅದು ಜವಾಬ್ದಾರಿ ನಿಗದಿಮಾಡಬೇಕೆಂದು ಈ ಸಭೆಯ ಮೂಲಕ ಆ ಸರಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ ಒಂದೆರಡು ಸೂಚನೆ ಕೊಡುತ್ತೇನೆ. ಅದು ಸ್ಟೋರ್ಸ್ ಪರ್ಚೇಸ್ ಇಲಾಖೆಯ ಡೈರೆಕ್ಟರಿಗೆ ಸಂಬಂಧಪಟ್ಟದೆ. ಮೂರನೆ ಪುಟದಲ್ಲಿ ಹೀಗಿದೆ:

1. Enquiry *re.* body building of 20 seater mini bus to Bagalkot Gram Sevak Training Centre ;
2. Enquiry *re.* body building of 20 seater mini bus to the Dharwar Gram Sevak Training Centre ;
3. Enquiry *re.* supply of School broadcasting system ;
4. Enquiry *re.* suppy of 16 mm Sound Projector.

ಟೆಕ್ನಿಕಲ್ ಕಮಿಟಿಗೆ ನಮ್ಮ ಡೈರೆಕ್ಟರ್ ಬೆಲೆ ಕೊಟ್ಟಿಲ್ಲ. ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ, ಟೆಂಡರ್ ಕರೆದು ಕೊಟ್ಟಿಲ್ಲ. ಕೋಟೇಷನ್ಸ್ ಕರೆಯುವುದು ಏತಕ್ಕೆಂದರೆ ಸರಿಯಾದವರಿಗೆ ಕೊಡಬೇಕೆಂದು. ಅದನ್ನು ಬಿಟ್ಟು ಬೇರೆಯವರಿಗೇಕೆ ಕೊಡುವುದು? ಇದರಲ್ಲೇನೋ ಲಂಚದ ಸನ್ನಾಹವಿರಬೇಕು. ಈ ಡೈರೆಕ್ಟರಿಗೆ ಹಣ ಹೆಚ್ಚಾಗಿ ಕೊಡಬೇಕಾಗಿಲ್ಲ, ಒಂದು ದಿವಸ ಇಂಟರ್‌ನ್ಯಾಷನಲ್ ಹೊಟೇಲಿಗೆ ಕರೆದುಕೊಂಡುಹೋಗಿ ಆರ್ಡರ್ ಸೆಕ್ಸ್ ಕಂಪೆನಿ ಕೊಡಿಸಿದರೆ ಸಾಕು, ಅದರಿಂದ ಒಳ್ಳೆಯದಾಗುತ್ತದೆ ಎಂದು ಜನ ಹೇಳುತ್ತಾರೆ. ಇಂಥವರನ್ನು ಡೈರೆಕ್ಟರ್ ಮಾಡಿದರೆ ಒಳ್ಳೆಯ ಹೆಸರು ಬರುವುದಿಲ್ಲ, ಇವರನ್ನು ತೆಗೆಯಬೇಕು. ತಪಶೀಲು ಬೇಕಾದರೆ ಹೇಳುತ್ತೇನೆ. ಒಳ್ಳೆಯದಾಗಬೇಕೆಂಬ ಅಭಿಪ್ರಾಯವಿರುವುದರಿಂದ ಇದನ್ನು ಹೇಳುವುದು. I am ready to discuss with the Minister and bring to his notice all the lapses. I request him to take action and see that he is changed from that post immediately. Otherwise, he will get a bad name.

ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† SRI R. M. DESAI (Bilgi).—Mr. Speaker, Sir, while welcoming and supporting the Budget Demands for Industry, I would like to make some observations. Members have talked of the principles and other important matters and I would like to talk on some of the practical aspects of Industry in our State.

Mysore State has no doubt its heritage of having all industries right from pig iron to coal. If we look at the past debates of the Mysore Assembly, we will find that even in those days members have bombarded eminent persons like Visveswariah for having started a concern like the Bhadravathi Iron Works. They were then saying that these industries were going to be utter failures. But today they have become feathers in our cap. No doubt, we have passed through the

stage of defects and improvements. We must remember that industries are not built in a day ; nor can they be built by one person ; nor can we improve the industries by dismissing some officials. There are so many factors that have to be taken into consideration for the development of industries. We have striven hard to strengthen old industries. We are trying hard to improve them. Efforts are also in progress by all the Government agencies to bring in new industries. Mysore has to its credit many minerals like iron, copper, gold and I think even our mineral Department is still venturing to find out some more minerals. The latest is the copper findings in Chitradurga district, which we think must go ahead so that we may find more copper, because it is so important a metal that it is required in a variety of industries.

Now Sir, looking to our present Government industries, we have got six departmental concerns and eight companies in which I think considerable amount has been invested by the Government. Looking to the Balance sheet of these cancerns, we are glad to see that we are on the improvement side. The Bhadravathi Iron and Steel Works has been a matter of concern and it has aroused attention of this House many a time. Sir, it is not a small venture. It is a pioneer venture in the whole of India, if I am not mistaken when it was started. Now it requires such a huge amount of development and it is still in a developing stage. How can you expect an industry to yield profits when it is still in a developing stage ? It is not possible. Looking to the balance sheet, we should say that the deficit or loss is a national loss and when the factory reaches its final stage production, I think we will not be able to cope with the demand for the best alloy. Therefore, there is very bright future for that industry. I thank the Department of Industries and the Industries Ministry for having taken up the matter on very urgent basis.

About the REMCO, we have been told that it is in a hopeless condition. I do not think it is so. Some of the conditions prevailing have made it like that. A little bit of rethinking in the matter is necessary and I think we should improve the conditions in REMCO also. Then we can make it work on profitable lines.

Regarding the other ventures, I think actually we have about 3 to 4 ventures which are making profit already. Sri D. M. Siddiah in his speech has already suggested that all the concerns started by the Government need not be expected to work on profit basis and that they should not have profit motive. But we cannot afford to maintain them always sustaining loss. Ideologies are different from practical working. Any way, we are making our efforts in this regard and I hope we are going to achieve better results in a very short time.

Sri K. H. PATIL.—What are the suggestions of the Hon'ble Member to make them self-supporting ?

Sri R. M. DESAI.—We must think of them. It is not merely a question of starting fresh industries and having 1,000 industries, but we should take a few of them and work them in a profitable manner. Let us not be very pessimistic about industries taken up by the Government. There is a bright future for them.

Sri C. K. RAJIAH SHETTY.—You want to continue the inexcusable lapses that have occurred in some of the major industries ?

Sri R. M. DESAI.—Certainly if there are any inexcusable lapses, we will have to correct them. There is no doubt about it. But the criticisms offered must be constructive. We should not criticise merely for the sake of criticism. One must also show the way to improve. There are so many industries in the country which have faced critical times. These are not industries which can come up in a day.

Now let me not take much time of the House. I will go to the salient points. The Mysore Government is welcoming industries into the State. Sir, I thank the Government for inviting successful industrialists into the State. But there are some people in our own State who are eager to put up industrial units. Why not give them the same impetus ? Let us give them the same impetus as we give to other people coming from outside the State. We have seen some people who come to our State, they will have their own people in all ranks from the sweeper to the Managing Director and there will be nobody else entering the compound. I do not blame them for being like that. I am only saying that we can give the same impetus to our own people within the state who want to start industries. There is some sort of a prejudice that all industrialists are blackmarketeers. The Government have offered seven concessions for the people from outside the State to start industries in the State, which have been enumerated in this report. You have not included the concession for water. I suggest that water also should be given as a concession, to the new industries, no matter even if we spend some money for making the water available. When you are giving so many concessions, why not give this concession for water also ? It is not going to cost us much. That is my suggestion. Sir, I understand that the rate at which water is charged to industries is Rs. 7-50. For some of the industries, the water requirements are very great. There must be some concessions for the big industries in this matter. I do not say that this Water rate should not be collected but there must be some concession.

Now coming to the Mysore State Industrial Area Development Corporation, the amount that has been provided this year is very meagre ; in my opinion, very very meagre. I think some facilities have been enumerated here -three facilities for promoting industries :

1 to complete the project report.

2 marketing data and participating in the share capital with or without controlling voice ;

3 underwriting new issues of shares.

Now, if we go through the policy that we have in respect of MSIAD many industries are coming up. My suggestion to the Government is, there are some of the industries in which our money is locked up and many of the industries are standing on their own legs and they are on a sound basis. Why not take that amount from those industries and invest it on fresh industries which are coming up instead of keeping it blocked ? What is the intention of starting this MSIAD ? It is to give impetus to new industries. My humble suggestion to the Government is to have a rethinking in the matter.

Now coming to Agro-Industries in which I am personally concerned, I have got statistics here. In our country, we have been growing plenty of sugar cane, out of which we produce more jaggery than sugar. 1964-65 figures show that India had grown 122 million tons of sugarcane whereas Cuba which is the second biggest had grown only 60 million tons. The sugarcane crushed in that year was only 770 lakh tons for Jaggery and khandsari out of which 77,54,100 tons were crushed for jaggery alone. In jaggery making we incur a colossal loss because of the conventional method. By the vacuum process which is being adopted the recovery will be 15 per cent and for that we could have crushed only 1,16,31,150 tons. So the loss is about 38,77,000 tons of jaggery. This has been wasted as fuel because we turn the crushed sugarcane into fuel. Therefore I suggest that such of the industries which are agro-based and which are making real efforts in this line should be encouraged.

12-00 Noon

We have a cell to find out why some of the industries have failed in our State, and what is required to make them work well. In this connection I would suggest that the smaller industries also should be looked into and consultations held with those people also. If we allay some of their fears and difficulties, it will have a very good impact on our industries.

Sir, I had several more point to touch, but for lack of time, I do not go into them now.

With these words, I thank the Chair.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದಿರುವ ಬೇಡಿಕೆಗಳನ್ನು ನೋಡಿದರೆ, ಸರ್ಕಾರ ಟೊಳ್ಳು ಬೇಡಿಕೆಗಳಿಗೆ ಹಣ ಖರ್ಚು ಮಾಡುವುದು ನೋಡಿದರೆ ದೇಶ ದಿವಾಳಿಯಾಗುವ ಹಾಗೆ ಕಾಣುತ್ತದೆ. ಕೈಗಾರಿಕೆ ವಿಚಾರದಲ್ಲಿ ಸರ್ಕಾರ ಅಕ್ಷಮ್ಯ ಅಪರಾಧ ಮಾಡುತ್ತಿರುವುದರಿಂದ ಇವತ್ತು ಒಂದು ತರಹದ ಪರ್ಜ್ ಕೊಡಬೇಕು ಎಂಬ ಭಾವನೆ ಬರುತ್ತದೆ. ಹೊಸದಾಗಿ ಒಂದು ಕೈಗಾರಿಕೆಯನ್ನೂ ಸ್ಥಾಪನೆ ಮಾಡಿಲ್ಲ. ಬಿರ್ಲಾ ಕಂಪನಿಯ ತಜ್ಞರನ್ನು ಭೇಟಿ ಮಾಡಿ ನಾನು ಕೇಳಿದ್ದೇನೆ. ಖಾಸಗಿ ಕೈಗಾರಿಕೆಗಳ ಬಗ್ಗೆ ಒಬ್ಬ ತಜ್ಞರು ಒಂದು ಕಡೆ ಹೀಗೆ ಹೇಳಿದ್ದಾರೆ.

"Maintaining time schedule for erection of any plant or industry and production programme ;

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

To have keen watch on installed capacity, targeted production, and actual performance ;

Never to idle any machinery, vehicle or man-power ;

To have thorough knowledge of quality and price of raw materials and finished goods and cost of production, and market value.

Selection of right men from the highest job and to any other heads of sections with proper qualifications, experience and integrity to maintain standards and norms ;

To have eternal watch on ever increasing competition and taxes ;

To be aware of latest scientific and technological developments in every line of all sections of industry by concerned Heads of Departments ;

To have a keen watch on study supply of raw materials and fuel ;

Necessity of research laboratories in all major industries.
ಈ ಒಂದು ನೀತಿ ನಿಯಮಗಳನ್ನು ಇವರು ಪಾಲಿಸುತ್ತಿಲ್ಲ.

ಕೈಗಾರಿಕಾ ಕ್ಷೇತ್ರದಲ್ಲಿ ಸರಕಾರಿ ಕ್ಷೇತ್ರ ಖಾಸಗಿ ಕ್ಷೇತ್ರ ಎಂದು ಎರಡು ವಿಭಾಗ ಮಾಡಬಹುದು. ಸರಕಾರಿ ಕ್ಷೇತ್ರದ ಇಲಾಖೆಯಲ್ಲಿ ಹೇಗೆ ಕೆಲಸಕಾರ್ಯಗಳು ನಡೆಯುತ್ತಿವೆ ಅಂದರೆ ಡಾಕ್ಟರ ಇರಬೇಕಾದ ಸ್ಥಳದಲ್ಲಿ ಇಂಜಿನಿಯರ್ ನೇಮಕ ಮಾಡುತ್ತಾರೆ, ಇಂಜಿನಿಯರ್ ಇರಬೇಕಾದ ಸ್ಥಳದಲ್ಲಿ ಡಾಕ್ಟರ್ ನೇಮಿಸುತ್ತಾರೆ ಎನ್ನುವ ಹಾಗೆ ಆಗಿದೆ. ಕೈಗಾರಿಕಾ ಇಲಾಖೆಗೆ ಲಾಯರ್ ಆದವರು ಮಿನಿಸ್ಟರ್ ಆಗಿದ್ದಾರೆ. ಕೈಗಾರಿಕೆ ಬಗ್ಗೆ ಅವರಿಗೆ ಏನೂ ಗೊತ್ತಿಲ್ಲ. ಐ. ಎ. ಎಸ್. ಅಧಿಕಾರಿಗಳು ಇರುತ್ತಾರೆ. ಅವರಿಗೆ ಕೈಗಾರಿಕೆಯ ಬಗ್ಗೆ ಏನು ಗೊತ್ತಿರುತ್ತದೆ? ಭದ್ರಾವತಿಯಲ್ಲಿಯ ದುಸ್ಥಿತಿ ತೆಗೆದುಕೊಂಡರೆ ಬಹುಶಃ ಇದು ಶರಾವತಿ ಸ್ಕ್ಯಾಂಡಲ್ ಹಾಗೆ ಭದ್ರಾವತಿ ಸ್ಕ್ಯಾಂಡಲ್ ಆಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು ಎಂದು ಅನ್ನಿಸುತ್ತದೆ. ಆಡಿಟ್ ರಿಪೋರ್ಟ್ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ನೋಡಿದರೆ ಇದರಲ್ಲಿ ಮೂರು ನಾಲ್ಕು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ತೋರುತ್ತದೆ. ಆದರೆ ಸಾಧಾರಣವಾಗಿ 12 ಕೋಟಿ ರೂಪಾಯಿವರೆಗೆ ನಷ್ಟವಾಗಿರಬಹುದು ಎಂದು ನಾನು ಹೇಳುತ್ತೇನೆ. ಇದು ಬೇಜವಾಬ್ದಾರಿ ಆಡಳಿತದ ಪರಿಣಾಮವಾಗಿದೆ. ಸರಕಾರದ ಲೋಪದೋಷಗಳು ಇಷ್ಟು ಹಣವನ್ನು ನುಂಗುತ್ತಿವೆ. ಇದನ್ನು ಸ್ವಲ್ಪ ಯೋಚನೆ ಮಾಡೋಣ. ಖಾಸಗಿ ಕೈಗಾರಿಕೆಗಳಲ್ಲಿ ಮೂರು ತರಹ ಇದೆ. ಡ್ಯುಯಲ್ ಕಂಟ್ರೋಲ್ ಮತ್ತು ಟ್ರಿಬಲ್ ಕಂಟ್ರೋಲ್ ಪ್ರಾಯೋಗಿಕವಾಗಿ ಹಾಕುತ್ತಾರೆ. ವೆಸ್ಟ್ ಜರ್ಮನಿ ಮತ್ತು ಆಸ್ಟ್ರಿಯಾದಿಂದ ತಜ್ಞರ ತಂಡ ಒಂದು ಇದೆ. ಇದರಲ್ಲಿ ಕನ್‌ಸಾರ್ಟಿಯಂ ಅಡ್ವೈಸರಿಗೆ 40 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇವರೆಲ್ಲರೂ ಮೋಸಗಾರರು. ಇದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಟೆಕ್ನಿಕಲ್ ಆಸಿಸ್ಟೆಂಟ್ ಇವರ ಪಾಲು ಇತ್ತು ಎಂದು ಹೇಳಿದರೆ ಅದು ತಪ್ಪಾಗಲಾರದು. ಕನ್ಸಲ್‌ಟೇಷನ್ ಫೀಜ್ 40 ಲಕ್ಷ ಮಾಡಿದ್ದಾರೆ. 40 ಲಕ್ಷದಲ್ಲಿ 5 ಪರ್ಸೆಂಟ್ ಕಮಿಷನ್ ಡೈರೆಕ್ಟರ್ ತೆಗೆದುಕೊಂಡಿದ್ದಾರೆ. ಇಂಡಿಯನ್ ರೈಲ್ವೇಜ್ ಸಂಪರ್ಕ ನನಗೆ ಅಪ್ರತ್ಯಕ್ಷವಾಗಿ ಇದೆ. ಅಲ್ಲಿ ಒಂದು ಬ್ರಿಜ್ ಎಸ್ಟಿಮೇಟು ಮಾಡಲು 5 ಸಾವಿರ ರೂಪಾಯಿ ಫೀಜ್ ಕೊಡುತ್ತಾರೆ. ಇಲ್ಲಿ 40 ಸಾವಿರ ರೂಪಾಯಿ ಫೀಜ್ ಕೊಟ್ಟಿದ್ದಾರೆ. 5 ಸಾವಿರ ರೂಪಾಯಿಗೆ ನಾನು ಅಂದಾಜು ಕೊಡಿಸುತ್ತೇನೆ.

ಇವರು ಕೊಳ್ಳತಕ್ಕ ಹಾಗೂ ಮಾರತಕ್ಕ ವಿಚಾರಗಳಲ್ಲೂ ತಪ್ಪು ಅಡ್ವೈಸನ್ನು ಕೊಡುತ್ತಿದ್ದಾರೆ ಅಷ್ಟೇ ಅಲ್ಲ ಅಲ್ಲಿಗೆ ಬರತಕ್ಕ ಜೆಲ್ಲಿ, ಮರಳು, ಕೋಕ್ ಮತ್ತು ಕೋಲ್ ಎಲ್ಲದಕ್ಕೂ ಕಮಿಷನ್ ಪಡೆಯುತ್ತಿದ್ದಾರೆ. ಇಂಥ ಅಡ್ವೈಸರು ನಮಗೆ ಅಲ್ಲಿರತಕ್ಕವರಲ್ಲಿ ಒಬ್ಬರಲ್ಲ—ಮೂವರು. ಅಷ್ಟು ಜನ ಅಡ್ವೈಸರಿದ್ದೂ ನಮಗೆ ಅಲ್ಲಿ ಅಷ್ಟು ಭಾರಿ ನಷ್ಟವುಂಟಾಗಿದೆ. ಅವರಿಲ್ಲದಿದ್ದರೇ ನಮಗೆ ಹೆಚ್ಚಿನ ಅನು

ಕೂಲವಾಗುತ್ತಿತ್ತು. ಹೀಗೆ ನಮಗೆ ಅಲ್ಲಿ ಪ್ರತಿಯೊಂದು ವ್ಯವಹಾರದಲ್ಲೂ ನಷ್ಟವಾಗುತ್ತಿರುವುದಕ್ಕೆ ಈ ಅಡ್ವೈಸರುಗಳು ಕೊಡತಕ್ಕ ಸಲಹೆಯಲ್ಲಿ ಏನೋ ಮೋಸವಿದೆ ಎನ್ನುವುದು ಇವರಿಗೆ ಗೊತ್ತಾಗುವುದು ಬೇಡವೇ? ಹಾಗೇ ಆ ಅನೀಲಿಂಗ್ ಫರ್ನೇಸ್ ವಿಚಾರದಲ್ಲೂ ಭಾರಿ ಮೋಸ ನಡೆದಿದೆ. ಅಲ್ಲಿಗೆ ಬೇಕಾಗಿದ್ದ ಒಂದೊಂದು ಕಬ್ಬಿಣದ ಗೇಟನ್ನು ಭದ್ರಾವತಿಯಲ್ಲೇ ಮಾಡಿಸಿದ್ದರೆ ಆ ಒಂದೊಂದು ಗೇಟಿಗೂ 200 ರೂಪಾಯಿಗಳಿಗೆ ಮೇಲೆ ಖರ್ಚುಬರುತ್ತಿರಲಿಲ್ಲ. ಅಲ್ಲಿರತಕ್ಕ ನಮ್ಮ ಕನ್‌ಸೋರ್ಷಿಯಂನವರು ಅವರಿಗೆ ಬೇಕಾದ ಒಬ್ಬ ಇಂಜಿನಿಯರಿಂಗ್ ವರ್ಕ್ಸಿಗೆ ಕಾಂಟ್ರಾಕ್ಟ್ ಕೊಡಿಸಿ ಒಂದೊಂದು ಗೇಟಿಗೂ 800 ರೂಪಾಯಿಗಳನ್ನು ಹಾಕಿದ್ದಾರೆ. ಇದನ್ನು ನೋಡಿದರೆ ನಮ್ಮ ಆ ಕನ್‌ಸೋರ್ಷಿಯಂ ಅವರ ಮತ್ತು ಅಲ್ಲಿರತಕ್ಕ ಆಡಳಿತವರ್ಗದವರ ದಕ್ಷತೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಆದಾಗ್ಯೂ ಆ ಕನ್‌ಸೋರ್ಷಿಯಂ ತನಗೆ ಬರತಕ್ಕ 40 ಲಕ್ಷದ ಜೊತೆಗೆ ಮಾರುವುದರಲ್ಲೂ ಮತ್ತು ಕೊಳ್ಳುವುದರಲ್ಲೂ ದುಡ್ಡನ್ನು ಲೂಟಿ ಹೊಡೆಯುತ್ತಿದ್ದಾರೆ. ಆ ಲೂಟಿಯಲ್ಲಿ ಕನ್‌ಸೋರ್ಷಿಯಂಗೂ ಮತ್ತು ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರುಗಳಿಗೂ ಹಿಸ್ಸೆ ಇದೆ.

ಹೀಗೇ ಆ ಸ್ಟೀಲ್ ಸ್ಕ್ರ್ಯಾಪ್ಸನ್ನು ಕೊಳ್ಳತಕ್ಕ ವ್ಯವಹಾರದಲ್ಲೂ ಭಾರಿ ಮೋಸ ನಡೆದಿದೆ. ಮೊದಲು 5 ಲಕ್ಷ ಟನ್ ಸ್ಕ್ರ್ಯಾಪಿಗೆ ಟೆಂಡರನ್ನು ಕರೆದರು. ಮೊದಲು ಕಂಟ್ರಾಕ್ಟರಿಗೆ 5 ಸಾವಿರ ರೂಪಾಯಿಗಳನ್ನು ಡೆಪಾಜಿಟ್ ಮಾಡಬೇಕೆಂದು ಹೇಳಿದ್ದರೆ ಆ ನಂತರ ಆ ಡಿಪಾಜಿಟ್ಟನ್ನು 50 ಸಾವಿರಕ್ಕೆ ಹೆಚ್ಚಿಸಲಾಯಿತು. 1968 ರಲ್ಲಿ ಟೆಂಡರನ್ನು ಕರೆದಾಗ ಟನ್ ಒಂದಕ್ಕೆ 25 ರೂಪಾಯಿಗಳಂತೆ ಸ್ಕ್ರ್ಯಾಪನ್ನು ಸರಬರಾಯಿ ಮಾಡುವುದಕ್ಕೆ ಟೆಂಡರುಗಳು ಬಂದವು. ಅದನ್ನು ಹಾಗೇ ಮುಂದುವರಿಸದೆ ಮತ್ತೆ 1969 ರಲ್ಲಿ ಎರಡನೇ ಸಾರ್ತಿಗೆ ಟೆಂಡರನ್ನು ಕರೆಯಲಾಯಿತು. ಆಗ ಬಂದ ಟೆಂಡರಿನಲ್ಲಿ ಟನ್ನಿಗೆ 29 ರೂಪಾಯಿಗಳನ್ನು ಕೋಟ್ ಮಾಡಿದ್ದರು. ಅದೇಕಾಲಕ್ಕೆ ಬೇರೊಂದು ಕಂಪೆನಿಗೆ ಸೇರಿದ ಮೂರು ಜನಗಳು ಪ್ರತ್ಯೇಕ ಪ್ರತ್ಯೇಕವಾಗಿ ಟೆಂಡರುಗಳನ್ನು ಹಾಕಿದರು. ಆದರೆ ಆ ಮೂರು ಜನಗಳೂ ಒಂದೇ ರೇಟನ್ನು ಅಂದರೆ ಟನ್ನಿಗೆ 35.25 ರೂಪಾಯಿಗಳನ್ನು ಕೋಟ್ ಮಾಡಿದ್ದರು. ಆ ಸಂದರ್ಭದಲ್ಲಿ ಆ ಕಂಟ್ರಾಕ್ಟನ್ನು ಯಾರೋ ಒಬ್ಬ ಮಂತ್ರಿಗಳ ಕಡೆಯ ಮನುಷ್ಯನಿಗೆ ಕೊಡಬೇಕಾಗಿದ್ದುದರಿಂದ ಆ ಟೆಂಡರ್ ಅವಧಿಯನ್ನು ವಿನಾಕಾರಣ ಎರಡಾವರ್ತಿ ಮುಂದೂಡಿದರು. ಹಾಗೆ ಮುಂದೂಡಿದ ಮೇಲೂ ಕಡಮೆ ಟೆಂಡರನ್ನು ಹಾಕತಕ್ಕ ಜನರು ಟೆಂಡರನ್ನು ಹಾಕದೆ ಬಿಡಲಿಲ್ಲ. ಆಗ ಈ ಒಂದೇ ಕಂಪೆನಿಯ ಮೂರುಜನ ಟೆಂಡರುದಾರರೇನಿದ್ದರು ಅವರು ಒಟ್ಟಿಗೆ ಆ ಕಡಮೆ ಟೆಂಡರಿನವನನ್ನು ಹಿಡಿದು ಅವನಿಗೆ ಲಂಚವನ್ನು ಕೊಟ್ಟು ಅವನ ಟೆಂಡರನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಿದರು. ಆದರೆ ಹೀಗೇ ಒಂದೇ ರೇಟನ್ನು ಕೋಟ್‌ಮಾಡಿರತಕ್ಕ ಮೂರು ಜನ ಟೆಂಡರ್‌ದಾರರೂ ಒಂದೇ ಕಂಪೆನಿಗೆ ಸೇರಿದವರೆಂದು ಅವರಿಗೆ ಗೊತ್ತಾಗದೆ ಇದ್ದದು ಬಹಳ ಆಶ್ಚರ್ಯ. ಅಂತೂ ಕಣ್ಣುಮುಚ್ಚಿಕೊಂಡು ಆ ಟೆಂಡರುಗಳನ್ನು ಒಪ್ಪಿಕೊಂಡರು. ಆದರೆ ಯಾವ ಮಂತ್ರಿಗಳನ್ನು ತೃಪ್ತಿಮಾಡಲು ಹೀಗೆ ಮಾಡಿದರು! ಕರ್ಣಾಟಕ ಎಕ್ಸ್‌ಪೋರ್ಟರ್ ಲಕ್ಷ್ಮಣದಾಸ್ ಎನ್ನತಕ್ಕವರಿಗೆ ಸಿಕ್ಕಿರುವ ಕಂಟ್ರಾಕ್ಟಿನಲ್ಲಿ ಮಂತ್ರಿಗಳ ಕೈವಾಡವಿಲ್ಲವೆ? ವಿಚಾರಣೆಮಾಡಿದರೆ ಗೊತ್ತಾಗುತ್ತದೆ.

ಇನ್ನು ಕಬ್ಬಿಣದ ಅದುರನ್ನು ಸರಬರಾಯಿ ಮಾಡತಕ್ಕ ವಿಚಾರದಲ್ಲೂ ಹೀಗೆ ಹಣವನ್ನು ಲೂಟಿ ಮಾಡಿದ್ದಾರೆ. ಅದುರನ್ನು ಟ್ರಾನ್ಸ್‌ಪೋರ್ಟ್‌ಮಾಡಲು ಎಂ. ಎಂ. ಟಿ. ಸಿ. ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದರೆ ಅವರು ಟನ್ ಒಂದಕ್ಕೆ 20, 25ರೂಪಾಯಿಗಳ ಪ್ರಕಾರ ತಂದುಕೊಡುತ್ತಿದ್ದರು. ಯಾವ ಸ್ಟೇಷನ್ನಿಗೆ ಬೇಕಾದರೂ ಸರಬರಾಯಿ ಮಾಡುತ್ತಿದ್ದರು. ಆದರೆ ಅವರನ್ನು ಕೈಬಿಟ್ಟು ಬೇರೆಯವರಿಗೆ ಟೆಂಡರನ್ನು ಕರೆಯದೇನೇ ಕಾಂಟ್ರಾಕ್ಟ್ ಕೊಟ್ಟರು. ಅವರಿಗೆ ಟನ್ ಒಂದಕ್ಕೆ 33.75 ರೂಪಾಯಿಗಳ ರೇಟನ್ನು ಕೊಡಲಾಗಿದೆ. ಎಂ. ಎಂ. ಟಿ. ಸಿ. ಅವರು ಕಡಮೆ ರೇಟಿಗೆ ಸರಬರಾಯಿ ಮಾಡುವುದಾಗಿ ತಿಳಿಸಿದ್ದರೂ ಇವರೇಕೆ ಅಷ್ಟು ದುಬಾರಿ ರೇಟಿಗೆ ಒಪ್ಪಿಕೊಂಡರು? ಒಂದು ಟನ್ನಿಗೆ 13 ರೂಪಾಯಿ ಜಾಸ್ತಿ ಕೊಡುವುದೆಂದರೇನು ಅರ್ಥ? ಅಲ್ಲಿಗೆ 5 ಲಕ್ಷ ಟನ್ ಅದುರಿಗೂ ಟನ್ನಿಗೆ 13 ರೂಪಾಯಿಗಳ ಪ್ರಕಾರ 65 ಲಕ್ಷರೂಪಾಯಿಗಳನ್ನು ದಂಡವಾಗಿ ಕೊಡಬೇಕಾಯಿತು. ಇದಕ್ಕೆಲ್ಲಾ ಮೂಲ ಕಾರಣ ಯಾರೋ ಒಬ್ಬ ಕಂಟ್ರಾಕ್ಟರನು ಯಾರೋ ಒಬ್ಬ ಮಂತ್ರಿಗೆ ಎರಡು ಬಾಟಲ್ ವಿಸ್ಕಿ ಕೊಡಿಸಿ ಅವರಿಗೆ ಬಾಲ್ ಡ್ಯಾನ್ಸ್ ಅರೇಂಜ್ ಮಾಡಿದ್ದರಿಂದ ಕೊಡಲಾಯಿತೆಂದು ತಿಳಿದುಬಂದಿದೆ. ಅಲ್ಲಿನ ಜನರು ಸರ್ಕಾರಕ್ಕೆ ಹೀಗೆಲ್ಲಾ ದ್ರೋಹಗಳನ್ನು ಬಗೆಯುತ್ತಿದ್ದಾರೆ. ಈ ವ್ಯವಹಾರವನ್ನು ಪ್ರತ್ಯಕ್ಷವಾಗಿ ಕಂಡವರಿದ್ದಾರೆ. ಮೊದಲು ಒಂದಾವರ್ತಿ ಟೆಂಡರುಗಳನ್ನು ಕರೆದು ಅವುಗಳನ್ನು ಮತ್ತೆ ಮುಂದೂಡುವುದಕ್ಕೆ ಮಂತ್ರಿಗಳ ಪ್ರಭಾವವೇ ಕಾರಣ. ಟನ್ ಒಂದಕ್ಕೆ 13 ರೂಪಾಯಿಗಳನ್ನು ಕೊಡುವುದಕ್ಕೆ ಅವರು ಹೇಗೆ ಏಕಾಏಕಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಒಪ್ಪಿದರು ! 20 ರೂಪಾಯಿಗಳನ್ನು ಕೊಡತಕ್ಕ ಕಡೆ 33 ರೂಪಾಯಿಗಳನ್ನು ಕೊಟ್ಟರೆ ಯಾವ ಕಂಪೆನಿಯಾದರೂ ಉದ್ಧಾರವಾಗುವುದಕ್ಕೆ ಅವಕಾಶವೆಲ್ಲಿದೆ? ಈ ಪ್ರಕರಣದಲ್ಲಿ ನಡೆದಿರತಕ್ಕ ಎಲ್ಲಾ ಮೋಸ ಕೃತ್ಯಗಳನ್ನೂ ವಿವರಿಸುವುದಕ್ಕಾಗುವುದಿಲ್ಲ. ಎಲ್ಲಿ ನೋಡಿದರೂ ಅಕ್ರಮ ವ್ಯವಹಾರವೇ. ಸಪ್ಲೆಮಾಡಬೇಕೆಂದು ಒಪ್ಪಂದವಾಗಿದ್ದ ಸ್ಕ್ರ್ಯಾಪ್ 12,412 ಟನ್ ಸರಬರಾಯಿ ಆದದ್ದು 7,864 ಟನ್ ಮಾತ್ರ. ಹಾಗಾದರೆ ಇನ್ನುಳಿದ 4,547 ಟನ್ ಸ್ಕ್ರ್ಯಾಪ್ ಏನಾಯಿತು? ಇಲ್ಲಿ ಲಕ್ಷಾಂತರ ರೂಪಾಯಿಗಳನಷ್ಟವುಂಟಾಗಿದೆ. ಕೇವಲ 4 ಜನ ಗುಮಾಸ್ತರನ್ನು ಡಿಸ್‌ಮಿಸ್ ಮಾಡಿದ್ದಾರೆ. ಅದು ಸಾಲದು. ಈ ಸಂಬಂಧದಲ್ಲಿ ಕೂಡಲೆ, ಒಂದು ಎನ್‌ಕ್ವೈರಿಯನ್ನು ನೇಮಕ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಸ್ಕ್ರ್ಯಾಪನ್ನು ಸಪ್ಲೆಮಾಡಿರತಕ್ಕ ಬಗ್ಗೆ ಲಾರಿಗಳ ನಂಬರ್ ಟ್ರಕ್ ನಂಬರುಗಳು ಅಲ್ಲಿರತಕ್ಕ ರಿಜಿಷ್ಟರಲ್ಲಿ ಎಂಟರಾಗಿವೆ. ರೈಲಿನಲ್ಲಿಯೂ ಮತ್ತು ರೋಡ್ ಎರಡರ ಮೂಲಕವೂ ಸರಬರಾಯಿ ಆಗಿದೆ. ಹಣವನ್ನು ಚೆಕ್ ಮೂಲಕ ಪಾವತಿ ಮಾಡಲಾಗಿದೆ. ಹೀಗೆ ಸಾಕಷ್ಟು ಸಾಕ್ಷಿಪುರಾವೆಗಳಿವೆ. ಅದಕ್ಕಾಗಿ ಕೂಡಲೇ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇದೇ ರೀತಿಯಲ್ಲಿ ಕೋಕ್ ಮತ್ತು ಕೋಲುಗಳ ವಿಷಯದಲ್ಲೂ ಮೋಸ ನಡೆದಿದೆ. ಇವುಗಳಲ್ಲಿ ಉಂಟಾಗಿರತಕ್ಕ ನಷ್ಟವನ್ನು ಭರ್ತಿಮಾಡಲು ಪ್ರೊಡಕ್ಷನ್‌ನಲ್ಲಿ ಖೋತಾ ತೋರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಒಟ್ಟು ಭದ್ರಾವತಿ ಕಂಪೆನಿಗೆ ಹೀಗೆ ನಡೆದಿರತಕ್ಕ ಮೋಸಪ್ರಕರಣಗಳಿಂದ 12 ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ. ಇಂಥ ಅಕ್ಷಮ್ಯ ಆಡಳಿತಕ್ಕೆ ಯಾರು ಹೊಣೆ! ಇದಕ್ಕಾಗೇ ನಾನು ಕೂಡಲೆ ತನಿಖೆಯಾಗಬೇಕು ಎಂದು ಹೇಳುತ್ತಿದ್ದೇನೆ. ನಾನೇ ಸಾಕಷ್ಟು ಸಾಕ್ಷ್ಯ ಕೊಡಬಲ್ಲೆ. ಸರ್ಕಾರಿವಲಯದಲ್ಲಿ ನಡೆಸುತ್ತಿರುವ ಕೈಗಾರಿಕೆಗಳ ಬಗ್ಗೆ ಖಾಸಗೀ ಜನ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಉದ್ಯಮಗಳನ್ನೆಲ್ಲಾ ಯಾವತ್ತಿದ್ದರೂ ಒಂದು ದಿನ ಖಾಸಗೀ ಜನರಿಗೇ ಒಪ್ಪಿಸಬೇಕೆಂಬ ಒಂದು ಕೆಟ್ಟಚಟ ಅಥವಾ ಅಂಥ ಒಂದು ಮನೋಭಾವನೆ ನಮ್ಮ ಶ್ರೀಮಾನ್ ನಿಜಲಿಂಗಪ್ಪನವರಲ್ಲಿ ಮೊದಲಿಂದಲೂ ಬೆಳೆದುಕೊಂಡು ಬಂದಿದೆ. ಅದು ಸರಿಯಾದುದಲ್ಲ.

ಇನ್ನು ಶ್ರೀಮಾನ್ ಹುಚ್ಚಮಾಸ್ತಿಗೌಡರು ಈಗಾಗಲೇ ಇದೇ ಸಭೆಯಲ್ಲಿ ನಮ್ಮ ಭದ್ರಾವತಿ ಕಂಪೆನಿಯಿಂದ ಕಾಸ್ಟ್ ಆಫ್ ಪ್ರೊಡಕ್ಷನ್ನಿಗಿಂತ ಕಡಮೆ ದರದಲ್ಲಿ ಸ್ಪೆಷಲ್ ಸ್ಟೀಲನ್ನು ಪೂನಾದಲ್ಲಿರತಕ್ಕ ಒಂದು ಫರ್ಮಿಗೆ ಸರಬರಾಯಿ ಮಾಡುತ್ತಿದ್ದಾರೆಂದು ಆಪಾದನೆ ಮಾಡಿದ್ದಾರೆ. ಮೊದಲನೇ ಒಪ್ಪಂದ ಪ್ರಕಾರ 21 ಲಕ್ಷ ರೂಪಾಯಿಗಳ ಬೆಲೆಬಾಳತಕ್ಕ ಸ್ಟೀಲನ್ನು ಅಗ್ಗದ ದರದಲ್ಲಿ ಸರಬರಾಯಿ ಮಾಡಿದ ಮೇಲೂ ಮತ್ತು ಆ ಟರ್ಮು ಮುಗಿದ ನಂತರೂ ಏಕೆ ಆ ಅಗ್ಗದ ದರದಲ್ಲೇ ಅವನ್ನು ಸರಬರಾಯಿ ಮಾಡುವುದಕ್ಕೆ ಒಪ್ಪಿಕೊಂಡರು? ಹೊರಗಡೆ ರೇಟ್ ಬಹಳ ಜಾಸ್ತಿಯಾಗಿತ್ತು. ಮತ್ತು ಆ ಹಳೇ ದರದಲ್ಲೇ 1971ರ ವರೆಗೂ ಏಕೆ ಸರಬರಾಯಿ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡರು? ಇದರಿಂದ ನಮ್ಮ ಕಂಪೆನಿಗೆ ಒಂದವಾರ್ತಿ 4.81 ಲಕ್ಷ, ಎರಡನೇಸಾರ್ತಿ 1.09 ಲಕ್ಷ, ಮೂರನೇ ಸಾರ್ತಿಗೆ 8.06 ಲಕ್ಷ ಮತ್ತು ನಾಲ್ಕನೇ ಸಾರ್ತಿಗೆ 8.57 ಲಕ್ಷ ಹೀಗೆ ಒಟ್ಟು ಸುಮಾರು 23 ಲಕ್ಷ ರೂಪಾಯಿಗಳು ಲುಕ್ಸಾನಾಗಿದೆ. ಅಂತೂ ಹೀಗೆ ಅಲ್ಲಿರತಕ್ಕ ನಮ್ಮ ಜನರು ಆ ಭದ್ರಾವತಿ ಕಂಪೆನಿಯನ್ನು ದಿನ ದಿನಕ್ಕೂ ಲೂಟಿ ಹೊಡೆಯುತ್ತಿದ್ದಾರೆ.

ಈ ರೀತಿ ವ್ಯವಹಾರಗಳು ನಡೆಯುತ್ತಾ ಇವೆ. ಬಿಲಾಯಿ, ದುರ್ಗಾಪುರ, ರೂರ್ಕೆಲಾ ಅರಲ್ಲೆಲ್ಲಾ ಏಜನ್ಸಿ ಅಪಾಯಿಂಟ್ ಮಾಡಲಿಲ್ಲಾ. ನೀವು ಏಜನ್ಸಿಯನ್ನು ಅಪಾಯಿಂಟ್ ಮಾಡಿದ್ದೀರಾ ಈವೊತ್ತು ನಮ್ಮ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನ ಬೇಡಿಕೆ 1 ಲಕ್ಷ 40 ಸಾವಿರ ಟನ್ ಜಾಸ್ತಿಯಾಗಿದೆ ಅನ್ನುವುದಾದರೆ ಈ ಏಜನ್ಸಿಯನ್ನು ಯಾರೋ ಒಬ್ಬ ಕೇಡಿ ಮನುಷ್ಯನಿಗೆ ಕೊಟ್ಟಿದ್ದೀರಿ. ಈವೊತ್ತು 20 ಲಕ್ಷ ರೂಪಾಯಿ ಲಾಸ್‌ನಲ್ಲಿಲ್ಲವೆಂದು ಆಡಿಟ್‌ನಲ್ಲಿ ತೋರಿಸಿದ್ದಾರೆ. ಆ ಆಡಿಟ್ ರಿಪೋರ್ಟನ್ನು ನೋಡಿದ ಪಕ್ಷದಲ್ಲಿ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ಬಹಳ ಲೋಪದೋಷ ಇದೆ ಅನ್ನುವ ಹಾಗೆ ಕಾಣುತ್ತೆ. ಈವೊತ್ತಿನ ದಿವಸ ಪಬ್ಲಿಕ್ ಸೆಕ್ಟರ್‌ನಲ್ಲಿ ನಂಬಿಕೆ ಕಳೆದು ಹೋಗಿದೆ. ಶ್ರೀಮಾನ್ ರಾಜಶೇಖರಮೂರ್ತಿಯವರು ಆವಾಗ ಹೊಸಪೇಟೆ ಉಕ್ಕಿನ ಕಾರ್ಖಾನೆ ಕೆಲಸವನ್ನು ಕೇಂದ್ರ ಸರ್ಕಾರದವರು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು. ಈವಾಗ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಈವೊತ್ತಿನ ದಿವಸ ಭರತಖಂಡದಲ್ಲಿ 4 ಮಿಲಿಯನ್ ಟನ್ ಸ್ಟೀಲ್ ಬೇಕಾಗಿದೆ. ಸ್ಟೀಲ್ ಪ್ಲಾಂಟನ್ನು

ದಕ್ಷಿಣ ವಲಯದಲ್ಲಿ ತೆಗೆಯುವಾಗ ಮೊದಲನೇ ಪ್ರಿಯಾರಿಟಿ ನಮ್ಮ ಹೊಸಪೇಟೆಗೆ ಕೊಡಬೇಕಾಗಿದೆ. ಈಗ ಅದು ಬಿಟ್ಟು ಮೊದಲನೆ ಪ್ರಿಯಾರಿಟಿ ಸೇಲಂಗೆ ಕೊಟ್ಟು ಎರಡನೇ ಪ್ರಿಯಾರಿಟಿ ವೈಜಾಗ್‌ಗೆ ಕೊಟ್ಟು ಮೂರನೆ ಪ್ರಿಯಾರಿಟಿ ಮೈಸೂರಿಗೆ ಕೊಡಬೇಕೆಂದು ಇಟ್ಟುಕೊಂಡಿದ್ದಾರೆ. ಹೊಸಪೇಟೆಗೆ ಸ್ಟೀಲ್ ಫ್ಯಾಕ್ಟರಿ ಕೊಡಬೇಕು ಎಂದು ಇದ್ದುದಕ್ಕೆ ಗೋವಾ ಕಾಂಪಿಟಿಷನ್ ಇದೆ. ಈವೊತ್ತಿನ ದಿವಸ ದೇಶದ ಸಾಧನಸಂಪತ್ತು ನಿಜವಾಗಿ ಅಭಿವೃದ್ಧಿ ಆಗಬೇಕಾದರೆ, ದೇಶದಲ್ಲಿ ನಿರುದ್ಯೋಗ ಕಡಿಮೆ ಆಗಬೇಕಾದರೆ ನಮ್ಮ ಆರ್ಥಿಕ ಪರಿಸ್ಥಿತಿ ರಾಜ್ಯಕ್ಕೆ ಅನುಕೂಲವಾಗಬೇಕಾಗಿದೆ. ಅಂಥಾದ್ದರಲ್ಲಿ ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದಾರೆ. ಅದನ್ನು ಕಣ್ಣು ತೆರೆದು ನೋಡಬೇಕು.

ಇನ್ನು ಷೆಡ್ಯೂಲ್ (ಎ)ನಲ್ಲಿ 16-17 ಇಂಡಸ್ಟ್ರೀಸ್ ಕೊಟ್ಟಿದ್ದಾರೆ. ನಮ್ಮ ಸರಕಾರ ಈವೊತ್ತು, ಪಬ್ಲಿಕ್ ಸೆಕ್ಟ್ಟರ್‌ನಲ್ಲಿ ನಂಬಿಕೆ ಕಳೆದುಕೊಂಡಿದ್ದ ಪಕ್ಷದಲ್ಲಿ ಅದು ಯಾವುದನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ದೊಡ್ಡ ದೊಡ್ಡ ಕೈಗಾರಿಕೆಗಳು ಸ್ವಾಮ್ಯ ಪಡೆದು ಅವನ್ನು ಪಬ್ಲಿಕ್ ಸೆಕ್ಟ್ಟರ್ ಕೈಗಾರಿಕೆಗಳನ್ನಾಗಿ ಮಾಡಬೇಕು ಎಂದು ಕೇಂದ್ರ ಸರ್ಕಾರ ನಿರ್ಧಾರ ಮಾಡಿದೆ.

[MR. SPEAKER in the Chair]

ಈವೊತ್ತಿನ ದಿವಸ ಸರ್ಕಾರ ಯಾವ ಒಂದು ಉತ್ತಮವಾದ ಕೈಗಾರಿಕೆಗೂ ಬಂಡವಾಳ ಕೊಡುತ್ತಾ ಇಲ್ಲ. ಆದರೆ ಫಿಲಂ ಇಂಡಸ್ಟ್ರೀಸ್‌ಗೆ 20 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ಫಿಲಂ ಇಂಡಸ್ಟ್ರೀಸ್ ಏನೇನು ಉತ್ಪತ್ತಿ ಕೊಡುತ್ತದೆ. ಈ ಜನಗಳು ಇನ್ನೂ ಹೆಚ್ಚು ಫಿಲಂ ತಯಾರು ಮಾಡಲಿ ಎಂದೆ. ಈಗ ಚಿತ್ರದುರ್ಗದಲ್ಲಿರುವ ಕಾಪರ್ ಮೈನಿಂಗ್ ಕಂಪನಿಗೆ ಪ್ರೋತ್ಸಾಹ ಕೊಟ್ಟಿಲ್ಲ. ಈ ವರ್ಷ ಅದು ಬಂಡವಾಳ ಇಲ್ಲದೆ ಸಾಯುತ್ತಾ ಇದೆ. ಅದಕ್ಕೆ ಏತಕ್ಕೆ ಬಂಡವಾಳ ಒದಗಿಸಿಲ್ಲ? ತಾಮ್ರದ ಪರಿಸ್ಥಿತಿ ಕೆಟ್ಟುಹೋಗಿದೆ. ತಾಮ್ರ ದೇಶದಲ್ಲಿ ಕಡಿಮೆ ಇದೆ. ಆ ಕೈಗಾರಿಕೆಯನ್ನು ಡೆವಲಪ್ ಮಾಡಬೇಕು ಎಂದು ಕೇಂದ್ರ ಸರ್ಕಾರದವರೂ ಹೇಳುತ್ತಿದ್ದಾರೆ. 2--3 ವರ್ಷದಿಂದಲೂ ನಾನೂ ಹೇಳುತ್ತಿದ್ದೇನೆ. ಒಂದು ಷೆಡ್ಯೂಲ್ಡ್ ಟೈಂನಲ್ಲಿ ಈ ಕೈಗಾರಿಕೆಯನ್ನು ಪ್ರಾರಂಭಮಾಡಬೇಕು, ಈವೊತ್ತು ಯಾವ ಕೈಗಾರಿಕೆಯೇ ಆಗಲಿ ಅದರ ಅಭಿವೃದ್ಧಿಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಮತ್ತು ದೇಶದ ಏಳಿಗೆಗೆ ಏನು ಬೇಕೋ ಅದಕ್ಕೆ ಬಂಡವಾಳ ಹಾಕಿಲ್ಲ. ಅವೆಲ್ಲಾ ಮಣ್ಣುಪಾಲು ಆಗುತ್ತಾ ಇದೆ. ನೀವು ಅವು ಬಿಟ್ಟು ಫಿಲಂ ಇಂಡಸ್ಟ್ರೀಸ್‌ಗೆ ಸಹಾಯ ಮಾಡಬೇಕು ಎಂದು ಹೇಳುತ್ತೀರಾ? ಅದಕ್ಕೆ 50 ಸಾವಿರ ರೂಪಾಯಿ ಕೊಡುತ್ತೀರಾ? ದೇಶಕ್ಕೆ ಬೇಕಾದ ದೊಡ್ಡ ಕೈಗಾರಿಕೆಗಳಿಗೆ ಏತಕ್ಕೆ ಸಹಾಯ ಮಾಡುತ್ತಾ ಇಲ್ಲ. ಈವೊತ್ತು ಸಣ್ಣ ಕೈಗಾರಿಕೆಗಳನ್ನೇ ತೆಗೆದುಕೊಳ್ಳಿ, ದೊಡ್ಡ ಕೈಗಾರಿಕೆಗಳನ್ನೇ ತೆಗೆದುಕೊಳ್ಳಿ, ಮಧ್ಯಮ ಕೈಗಾರಿಕೆಗಳನ್ನೇ ತೆಗೆದುಕೊಳ್ಳಿ ಯಾವುದಕ್ಕೂ ನೀವು ಸಹಾಯ ಮಾಡುತ್ತಾ ಇಲ್ಲ. ಈಗ ಪವರ್ ಲೂಮ್ಸ್ ತೆಗೆದುಕೊಳ್ಳಿ. ಎಷ್ಟೋ ಪವರ್ ಲೂಮ್ಸ್ ಐಡಲ್ ಆಗಿಬಿದ್ದಿದೆ. ಪ್ರೈವೇಟ್ ಸೆಕ್ಟರ್‌ನಲ್ಲಿ 4-5 ಮತ್ತು ಕೋಆಪರೇಟೀವ್ ಸೆಕ್ಟರ್‌ನಲ್ಲಿ 4-6 ಇವೆಲ್ಲಾ ಐಡಲ್ ಆಗಿ ಬಿದ್ದಿದೆ. ಬಾಂಬೆಯಲ್ಲಿ ಹೋಗಿ ನೋಡಿದರೆ ಸೂರತ್‌ನಲ್ಲಿ ಎಷ್ಟು ಚೆನ್ನಾಗಿ ಆರ್ಗನೈಸ್ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಒಂದು ಪವರ್ ಲೂಮ್ ಕೂಡ ಐಡಲ್ ಇಲ್ಲದೆ ಇರುವ ಹಾಗೆ ನೋಡಿಕೊಂಡಿದ್ದಾರೆ. ಅಲ್ಲಿ ರಾ ಮೆಟೀರಿಯಲ್ಸ್ ಸರಿಯಾಗಿ ಸಪ್ಲೈ ಮಾಡುತ್ತಾ ಇದ್ದಾರೆ. ಮತ್ತು ಮೆಷಿನ್ಸ್ ಕೂಡ ಸರಿಯಾಗಿ ಸಪ್ಲೈ ಮಾಡುತ್ತಾ ಇದ್ದಾರೆ. ಎಲ್ಲಾ ಕಡೆ ಮೂಲೆಮೂಲೆಗೊಂದು ಪವರ್ ಲೂಮ್ ಕೊಟ್ಟು ಪ್ರತಿಯೊಂದು ಚೆನ್ನಾಗಿ ನಡೆಯುವಂತೆ ಮಾಡಿದ್ದಾರೆ. ಆದರೆ ನಮ್ಮ ದೇಶದಲ್ಲಿ ಸರಿಯಾಗಿ ಗಮನ ಕೊಡದೆ ಎಲ್ಲಾ ಕೈಗಾರಿಕೆಗಳೂ ಪತನವಾಗಲು ಶುರುವಾಗಿವೆ.

ಇನ್ನು ಸರ್ಕಾರಿ ಕ್ಷೇತ್ರದಲ್ಲಿರುವ ಕೈಗಾರಿಕೆಗಳೆಲ್ಲಾ ಅಧಿಕಾರಿಗಳ ಪಾಲಾಯಿತು, ಖಾಸಗೀ ಕ್ಷೇತ್ರದಲ್ಲಿ ಪುಡಾರಿಗಳ ಪಾಲಾಯಿತು, ಹಾಗೆಯೇ ಮೈಸೂರಿನ ಜನರ ಹಿತವೆಲ್ಲಾ ಮಣ್ಣು ಪಾಲಾಯಿತು. ಬಂಗಾರದಿಂದ ಕೂಡಿರತಕ್ಕಂಥ ಈ ಸಂಪತ್ತಿನ ದೇಶವನ್ನು ಪಾಪರ್ ಮಾಡಬೇಡಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಕೈಗಾರಿಕಾ ಮಂತ್ರಿಗಳು ಬೇಡಿಕೆ ಇಟ್ಟಿರುವುದನ್ನು ವಿರೋಧಿಸಿ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟ ಪಡುತ್ತೇನೆ.

ನನ್ನ ಮೊದಲನೆ ಪ್ರಶ್ನೆ ಏನೆಂದರೆ ಈ ರಾಜ್ಯದ ಮಂತ್ರಿಗಳಿಗೆ ಮತ್ತು ಮುಖ್ಯವಾಗಿ ಕ್ಯಾಬಿನೆಟ್‌ಗೆ ತಿಳಿಸುವುದು ನಮ್ಮ ರಾಜ್ಯದಲ್ಲಿ ಕೈಗಾರಿಕೆ ಬೆಳವಣಿಗೆ ಆಗಬೇಕಾದರೆ ಯಾವ ರೀತಿ

(ಶ್ರೀ ಎಂ. ಎಸ್. ಕೃಷ್ಣನ್)

ಧೋರಣೆ ಇರಬೇಕು ಮತ್ತು ಯಾವರೀತಿ ನೀತಿ ಇದೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಈ ಧೋರಣೆ ಮತ್ತು ಅವರ ನೀತಿ ಪ್ರಗತಿದಾಯಕವಾದ ನೀತಿಯೋ, ಈ ನೀತಿಯನ್ನು ಅನುಸರಿಸಿದರೆ ನಮ್ಮ ರಾಜ್ಯದಲ್ಲಿ ಈವೊತ್ತಿನ ದಿನ ಕೈಗಾರಿಕೆಗಳು ಬೆಳವಣಿಗೆ ಆಗುತ್ತದೆಯೋ ಎಂಬುದನ್ನು ಪರಿಶೀಲಿಸಿ, ಆ ನೀತಿ ನಿಸ್ಸಂದೇಹವಾಗಿ ಕೈಗಾರಿಕೆಯನ್ನು ಅಭಿವೃದ್ಧಿ ತರುವ ಹಾಗೆ ಇದ್ದರೆ ಈ ಹಣವನ್ನು ಅವರಿಗೆ ಕೊಡಬಹುದು. ಆದರೆ ದುರ್ದೈವದಿಂದ ದಿನ ನಡೆಯುತ್ತಾ ಇರುವ ವಿದ್ಯಮಾನಗಳನ್ನು ನೋಡಿದರೆ ಸರ್ಕಾರ ಹಾಕಿಕೊಂಡಿರುವ ನೀತಿ ಸರಿಯಾದ ನೀತಿಯಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಸರ್ಕಾರದಲ್ಲ ನನಗೆ ತಿಳಿದಮಟ್ಟಿಗೆ ಇಲ್ಲಿರುವುದು ಸಿಂಡಿಕೇಟ್ ಸರ್ಕಾರ, ಇಂಡಿಕೇಟ್ ಸರ್ಕಾರವಲ್ಲ. ಅವರವರಲ್ಲಿ ಏನೇ ಭಿನ್ನಾಭಿಪ್ರಾಯ ಇರಲಿ ಇಲ್ಲಿನ ಸಿಂಡಿಕೇಟ್ ಸರ್ಕಾರದ ನೀತಿ ಇಂಡಿಕೇಟ್ ಆಗದೇ ಇದ್ದಾಗ ಕೇಂದ್ರದಲ್ಲಿ ಯಾವ ರೀತಿ ಇತ್ತೋ ಅದೇ ರೀತಿ ಧೋರಣೆ ಈ ದಿನ ಇದೆ. ಈಗ ಅವರವರಲ್ಲೇ ಭಿನ್ನಾಭಿಪ್ರಾಯ ಬೇರೆ ಬೇರೆ ಇದೆ. ಈಗ ಸಿಂಡಿಕೇಟ್ ಸರ್ಕಾರದ ನೀತಿ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಧ್ಯೇಯ, ಅವರ ನೀತಿ, ಅವರ ವಾದ, ಎಲ್ಲವೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈವಾಗ ಶ್ರೀಮಾನ್ ನಿಜಲಿಂಗಪ್ಪನವರಿಂದ ಹಿಡಿದು ರಾಮ್‌ಸುಭಾಗ್ ಸಿಂಗ್‌ರವರಿಗೂ ಎಲ್ಲರೂ ತಮ್ಮ ನಿಲುವನ್ನು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನಮ್ಮ ದೇಶದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತಿಲ್ಲ ಎಂದು. ಸಾರ್ವಜನಿಕ ಕ್ಷೇತ್ರದಲ್ಲೇ ಆಗಲಿ ಖಾಸಗೀ ಕ್ಷೇತ್ರದಲ್ಲೇ ಆಗಲಿ ಒಂದು ಪ್ರಾಗ್ಮಾಟಿಕ್ ಅಪ್ರೋಚ್ (Pragamatic approach) ಇಟ್ಟುಕೊಳ್ಳುತ್ತೇವೆ ಎಂದು ಸಿಂಡಿಕೇಟ್‌ನವರು ಹೇಳುತ್ತಿದ್ದಾರೆ. ಅದೇರೀತಿ ಅಭಿಪ್ರಾಯವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾತನಾಡುತ್ತಾ ಹೇಳಿದರು. ಶ್ರೀಮಾನ್ ರಾಜಶೇಖರ ಮೂರ್ತಿಯವರು ಕೂಡ "ಪ್ರಾಗ್ಮಾಟಿಕ್ ಔಟ್‌ಲುಕ್" ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಈವೊತ್ತಿನ ದಿವಸ, ವಾಸ್ತವಾಂಶ ನೋಡಿದರೆ, ಮುಖ್ಯವಾಗಿ ನಮ್ಮ ದೇಶದಲ್ಲಿ ಕೈಗಾರಿಕೆ ಬೆಳವಣಿಗೆ ಆಗಬೇಕಾದರೆ ಮೂಲಭೂತವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಬೆಳವಣಿಗೆ ಆಗಬೇಕು ಎಂದು ಏನು ಒಂದು ತತ್ವವನ್ನು ಹಿಂದಿನಿಂದ ಹಾಕಿಕೊಂಡಿದ್ದಾರೋ ಅದನ್ನೆಲ್ಲಾ ಪೂರ್ತಿಯಾಗಿ ಈ ಸರ್ಕಾರ ಕೈಬಿಟ್ಟಿದೆ.

12-30 P.M.

ಎರಡನೇದು, ಸಾರ್ವಜನಿಕ ಕ್ಷೇತ್ರಕ್ಕೆ ಬದಲಾಗಿ ಎಲ್ಲ ರೀತಿಯಲ್ಲೂ ಖಾಸಗೀ ಕ್ಷೇತ್ರಕ್ಕೇ ಸಹಾಯ ಮಾಡಬೇಕು ಎಂದು ಹೇಳುವಂತಹ ಜನವೇ ಹೆಚ್ಚಾಗಿ ಇಂದು ಸಿಂಡಿಕೇಟಿನಲ್ಲಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಹಾಗೂ ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರೂ ಕೂಡ ಇದೇ ರೀತಿಯಾಗಿ ಹೇಳುತ್ತಾರೆ. ಕೈಗಾರಿಕೆಗಳಲ್ಲಿ ಹೆಚ್ಚು ಭಾಗ ಸಾರ್ವಜನಿಕ ಕ್ಷೇತ್ರದಲ್ಲಿ ಬೆಳೆಯಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿರುವಂತಿಲ್ಲ. ಆದರೆ ಇದರಲ್ಲೇ ಈ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯಗಳಿವೆ. ಮಾನ್ಯ ಮಂತ್ರಿಗಳಿಗೆ ಕೈಗಾರಿಕೆಗಳ ಬಗ್ಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನನಗೂ ಸಹ ಇದೆ. ಅದರೆ ಕೈಗಾರಿಕಾಭಿವೃದ್ಧಿ ಮತ್ತು ಇದರ ಸುಧಾರಣೆಯಾಗಬೇಕಾದರೆ ಇದು ಪಬ್ಲಿಕ್ ಸೆಕ್ಟರ್ ತಳಹದಿಯ ಮೇಲೆ ಬೆಳೆಯಬೇಕು ಎನ್ನುವುದನ್ನು ಮಾತಿನಲ್ಲಿ ಒಪ್ಪಿಕೊಳ್ಳುತ್ತಾ, ಕೈಗಾರಿಕೆಯನ್ನು ಪೂರ್ತಿಯಾಗಿ ಬೆಳೆಯಲು ಖಾಸಗಿ ಕ್ಷೇತ್ರಕ್ಕೆ ಬೆಂಬಲ ಕೊಡುವ ನೀತಿಯೇ ನಿಮ್ಮದಾಗಿದೆ. ಇದಕ್ಕಾಗಿ ನಮ್ಮ ಮಾನ್ಯ ಮಂತ್ರಿಗಳು ಪ್ರವಾಸ ಮಾಡಿ, ಬೊಂಬಾಯಿ, ಕಲ್ಕತ್ತಾ ಹಾಗೂ ಇನ್ನಿತರ ಕಡೆಗಳಲ್ಲಿರುವ ಕೈಗಾರಿಕೋದ್ಯಮಿಗಳನ್ನು ಕರೆದುಕೊಂಡು ಇಲ್ಲಿಗೆ ಬಂದು ಕೈಗಾರಿಕೆಗಳನ್ನು ಮಾಡಬೇಕೆಂದು ಅಂಗಲಾಚಿ ಬೇಡಿಕೊಂಡರು. ಇದು ಫಲಕಾರಿಯಾಗಲಿಲ್ಲ. ಇತರ ಕೈಯಲ್ಲಿ ರಾಜ್ಯದ ದುಡ್ಡನ್ನು ಕೊಟ್ಟು ಕೈಗಾರಿಕೆ ಬೆಳೆಸುವ ಸ್ಥಿತಿ ನಾವು ಇಂದು ನೋಡುತ್ತಿದ್ದೇವೆ. ಇವರ ನಡೆವಳಿಕೆ ನಮ್ಮ ಕೈಗಾರಿಕಾ ನೀತಿಗೇ ವಿರೋಧವಾಗುತ್ತದೆ. ಇಂದು ನಾವು ಮುಖ್ಯವಾಗಿ ವಿಮರ್ಶೆ ಮಾಡಬೇಕಾಗಿರುವುದು ಎರಡು ಮುಖ್ಯ ವಿಷಯಗಳ ಮೇಲೆ. ಒಂದು ಯಾವ ರೀತಿ ಸರಕಾರದ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ ಮತ್ತು ಎರಡನೇಯದು ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಏನಿವೆ ಅವನ್ನು ಮುಂದುವರಿಸಿಕೊಂಡು ಯಾವ ರೀತಿ ಮುಂದುವರಿಸಿಕೊಂಡು ಬರುತ್ತಿದ್ದಾರೆ ಎನ್ನುವುದು. ಸರಕಾರದ ಕೈಗಾರಿಕೆಗಳನ್ನು ನಡೆಸುವ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸರಕಾರದ ಬಂಡವಾಳ ಹಾಕಿದ್ದರೂ ಇದು ಯಾವ ರೀತಿ ನಡೆಯುತ್ತಿದೆ ಎನ್ನುವುದು ನಮ್ಮ ಆಡಿಟ್ ರಿಪೋರ್ಟಿನಲ್ಲಿ ಚೆನ್ನಾಗಿ ಗೊತ್ತಾಗುತ್ತದೆ ಮತ್ತು ಆಡಿಟ್ ರಿಪೋರ್ಟಿನಲ್ಲಿ ಇವೆಲ್ಲ ವಿವರಗಳನ್ನೂ ಸ್ಪಷ್ಟವಾಗಿ ಹೇಳಿದ್ದಾರೆ.

ಆಡಿಟ್ ರಿಪೋರ್ಟಿನ ಪುಟ 68–69 ರಲ್ಲಿ ಇವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ವಿವರಗಳೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ. ಸರಕಾರದ ದಿವಾಳಿ ಖೋರತನ ಬಯಲಾಗಿದೆ. ಇದೇ ರೀತಿ ಸರಕಾರ ಎರಡು ಮೂರು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಮತ್ತು ಇದನ್ನು ಅವರು ಒಪ್ಪಿಕೊಳ್ಳುತ್ತಾರೆ. ಎಲ್ಲ ಕೈಗಾರಿಕೆಗಳಲ್ಲೂ ಎಷ್ಟು ನಷ್ಟವಾಗುತ್ತಿದೆ ಎನ್ನುವುದು ಇದರಲ್ಲಿರುವ ಮುಖ್ಯ ಪ್ರಶ್ನೆ. ಇದರ ಬಗ್ಗೆ ಪ್ರಶ್ನೆ ಕೇಳಿದರೆ ಮಾನ್ಯ ಮಂತ್ರಿಗಳು ಅಲ್ಲ ಇಲ್ಲ ಕೆಲವು ಅಧಿಕಾರಿಗಳ ಅದಕ್ಷತೆಯಿಂದ ಅಲ್ಲಲ್ಲಿ ಅಲ್ಪಸ್ವಲ್ಪ ನಷ್ಟವಾಗಿರಬಹುದು ಮತ್ತು ಸ್ವಲ್ಪ ತಕರಾರುಗಳು ಇರಬಹುದು ಎಂದು ಇಲ್ಲಿ ಜಾರಿಸುವ ಮಾತುಗಳನ್ನು ಹೇಳಿಬಿಡುತ್ತಾರೆ ಕೈಗಾರಿಕೆಗಳಿಂದ ತಯಾರಾದ ಸರಕುಗಳನ್ನು ಮಾರಲು ಸರಿಯಾದ ಮಾರ್ಕೆಟ್ಟಿದೆಯೇ ಅದರ ಬಗ್ಗೆ ಪರಿಶೀಲನೆ ನಡೆದಿದೆಯೇ ಎಂದರೆ ಯಾವುದೂ ನಡೆದಿಲ್ಲ ಎನ್ನುವುದು ಗೊತ್ತಾಗುತ್ತದೆ. ಇನ್ನು ರೆಂಕೋ ಕೈಗಾರಿಕೆ ವಿಚಾರ ತೆಗೆದುಕೊಂಡರೆ ಇದರಲ್ಲಿ ಸರಕಾರದ ಬಂಡವಾಳ ಹಾಕಿದ್ದರೂ ತುಂಬಾ ನಷ್ಟವಾಗುತ್ತಿದೆ. ಇದರಲ್ಲೇನೋ ಒಂದು ರೀತಿಯಾದ ಅಕ್ರಮ ಅವ್ಯವಹಾರಗಳು ಆಗಿವೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದೇ ರೀತಿ ಈಗ ಭದ್ರಾವತಿಯಲ್ಲಿರುವ ಮೈಸೂರು ಐರನ್ ಅಂಡ್ ಸ್ಟೀಲ್ ಕಂಪನಿ ಬಗ್ಗೆ ಸರಕಾರದ ಮನೋಭಾವ ಯಾವ ರೀತಿ ಇದೆ ಎನ್ನುವುದರ ಬಗ್ಗೆ ಈಗಾಗಲೇ ನನ್ನ ಮಿತ್ರರಾದ ಶ್ರೀಮಾನ್ ರಾಜಯ್ಯ ಶೆಟ್ಟಿಯವರೂ ಹಾಗೂ ಶ್ರೀಮಾನ್ ಸಿದ್ದವೀರಪ್ಪನವರೂ ಆಡಿಟ್ ರಿಪೋರ್ಟ್‌ನಲ್ಲಿರುವ ವಿಚಾರಗಳನ್ನೂ ಹೇಳಿ ಇದರ ಅಂಕೆ ಅಂಶಗಳನ್ನು ಕೂಡ ಎತ್ತಿ ತೋರಿಸಿದ್ದಾರೆ. ಇದರಲ್ಲೇನೋ ಮೋಸವಾಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರಲ್ಲಾಗಿರುವ ದುರ್ವ್ಯಯ, ಲಂಚಗುಳಿತನ, ಸ್ವಜನ ಪಕ್ಷಪಾತ ಅದರಲ್ಲಿ ತುಂಬಿದೆ ಎನ್ನುವುದು ಆಡಿಟ್ ರಿಪೋರ್ಟಿನ ವರದಿ ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಒಂದೇ ಒಂದು ವಿಚಾರ ಹೇಳಬಹುದು. ನನಗೆ ತಿಳಿದಮಟ್ಟಿಗೆ ಇದರ ಬಗ್ಗೆ ಈ ಸಭೆಯ ಎಸ್ಟಿಮೇಟ್ಸು ಕಮಿಟಿಯವರು (ಅಂದಾಜು ಸಮಿತಿ) ಬಹಳ ಚೆನ್ನಾಗಿ ಆಳವಾಗಿ ವಿಮರ್ಶೆ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಇಲ್ಲಿ ದೀರ್ಘ ವಿಮರ್ಶೆ ಮಾಡಲು ಹೋಗುವುದಿಲ್ಲ. ಎಸ್ಟಿಮೇಟ್ ಕಮಿಟಿಯವರು ಇವುಗಳನ್ನು ಪರಿಶೀಲನೆ ಮಾಡಿ ಏನು ಹೇಳಿದ್ದಾರೆ ಎನ್ನುವುದು ಅವರ ವರದಿಯಲ್ಲಿ ವಿವರವಾಗಿ ಇದೆ. ಆದರೆ ಇದರ ಬಗ್ಗೆ ಮಂತ್ರಿಗಳ ಪ್ರತಿಕ್ರಿಯೆ ಏನು? ಮಾನ್ಯ ಕೈಗಾರಿಕಾ ಮಂತ್ರಿಗಳು ಈ ವರದಿ ಬಗ್ಗೆ ಎಲ್ಲರೂ ಕಮಿಟಿ ಮಾಡುವ ರಿಪೋರ್ಟಿನಂತೆ ಇದೂ ಕೂಡ ಇದೆ ಎಂದು ಸಾಮಾನ್ಯವಾಗಿ ಹೇಳಿದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಂದರೆ ಒಂದು ಮಾನ್ಯ ಸಭೆಯ ಸದಸ್ಯರನ್ನೊಳಗೊಂಡ ಸಮಿತಿಯ ಒಳ್ಳೆಯ ವರದಿಯ ಬಗ್ಗೆ ಮಂತ್ರಿಗಳ ಅಸಡ್ಡೆ ಮನೋಭಾವ ಎಲ್ಲಿಯವರಿಗೆ ಹೋಗಿದೆ ಎನ್ನುವುದು ತಿಳಿಯುತ್ತದೆ. ಇಂತಹವರಿಂದ ಕೈಗಾರಿಕಾ ಬೆಳವಣಿಗೆ ನಿರೀಕ್ಷಿಸಲು ಸಾಧ್ಯವೇನು ?

Sri M. RAJASEKHARA MURTHY.—I have not said so.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ತಾವೇ ಮೊದಲು ನಿರಾಕರಿಸಬಹುದಿತ್ತು. ಹಾಗೆ ಮಾಡಿಲ್ಲ. ನನಗೆ ಬಂದಿರುವ ವರದಿಯು ಹಾಗೂ ಪತ್ರಿಕೆಗಳಲ್ಲಿ ಬಂದಿರುವ ಸ್ಟೇಟುಮೆಂಟು ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ಕೈಗಾರಿಕೆಗಳಲ್ಲಿ ನಂಬಿಕೆ ಇಲ್ಲದಂತೆ ನಿಮ್ಮ ಹೇಳಿಕೆ ಇದೆ ಎನ್ನುವುದು ಇದರಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ರೆಂಕೋ ಕೈಗಾರಿಕೆಯನ್ನೇ ತಾವು ನಿದರ್ಶನವಾಗಿ ತೆಗೆದುಕೊಂಡರೆ ನೀವೇ ಬಂಡವಾಳ ಹಾಕಿ ಸುಮಾರು 80 ಲಕ್ಷದಷ್ಟು ನಷ್ಟವಾಗುತ್ತಿದೆ. ಇದನ್ನು ನಮ್ಮ ಸರಕಾರ ನಡೆಸುವುದು ಬೇಡ. ಇದರ ಬಗ್ಗೆ ಕೇಂದ್ರದ ಮೇಲೆ ಒತ್ತಾಯ ತಂದು ಇದನ್ನು ಬಿ.ಇ.ಎಲ್.ರವರಿಗೇ ಒಪ್ಪಿಸಿ ಬಿಡಿ ಎಂದು ನಾನು ಪದೇ ಪದೇ ಹೇಳಿದ್ದೇನೆ. ಕೇಂದ್ರದವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ ಎಂದಿದ್ದಾರೆ ಮಂತ್ರಿಗಳು. ಮತ್ತು ನಮ್ಮ ಸರಕಾರದಲ್ಲಿ ಕೇಂದ್ರದ ಮೇಲೆ ಪ್ರಭಾವಯುತವಾದ ಶಕ್ತಿ ಉಪಯೋಗಿಸಿ ಒತ್ತಾಯ ತರುವಂಥಹ ಸಮರ್ಥರಿಲ್ಲ ಎಂದು ತಿಳಿಯುತ್ತದೆ. ಇದರಿಂದಾಗಿ ಇಂದು ಎರಡನೆಯ ಬಿ.ಇ.ಎಲ್. ಫ್ಯಾಕ್ಟರಿ ಎನ್ನುವುದು ದಹಲಿಯಲ್ಲೋ ಇಲ್ಲವೇ ಫರೀದಾಬಾದ್‌ನಲ್ಲೋ ಆಗುವ ಹಾಗೆ ಕಾಣುತ್ತದೆ. ಇಲ್ಲಂತೂ ಆಗುವ ಸಾಧ್ಯತೆ ಕಂಡುಬರುತ್ತಿಲ್ಲ. ರೆಂಕೋನಲ್ಲಿನ ಸ್ಥಿತಿ ಚೆನ್ನಾಗಿಲ್ಲ. ಇದರಿಂದಾಗಿಯೇ ತಾವು ಒಂದು ಪ್ರೋಬ್ ಮಾಡಿ ಆಳವಾಗಿ ಇದರ ಎಲ್ಲ ಸಾಧಕ ಬಾಧಕಗಳನ್ನು ಕೂಲಂಕಶವಾಗಿ ವಿಮರ್ಶೆ ಮಾಡಿ ಇದು ಉಳಿಯುವ ಹಾಗೆ ತಕ್ಕ ಕೆಲಸಗಳನ್ನು ಸರಕಾರ ಮಾಡಬೇಕೆಂದು ಹೇಳುತ್ತೇನೆ. ಇದೇ ರೀತಿ ನಮ್ಮ ಪೋರ್ಸಿಲೇನ್ ಫ್ಯಾಕ್ಟರಿ ಬಗ್ಗೆ ಕೂಡ ವಿಚಾರ ಮಾಡುವುದಾದರೆ ಇದೂ ಕೂಡ ಸರಿಯಾದ ಸ್ಥಿತಿಯಲ್ಲಿಲ್ಲ. ಇದರಲ್ಲಿ ಕೂಡ ನಷ್ಟವಾಗುತ್ತಿದೆ. ಇದರ ಬಗ್ಗೆ ಎಲ್ಲ ಅಂಕೆ ಅಂಶಗಳನ್ನೂ ನಾನು ವಿವರವಾಗಿ ಪಡೆದುಕೊಂಡು ಬಂದಿದ್ದೇನೆ. ಇಲ್ಲಿ ಅವಕಾಶವಿಲ್ಲದೇ ಇರುವುದರಿಂದ ಇದರ ವಿವರಗಳನ್ನು ಬೇಕಾದರೆ ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ.

(ಶ್ರೀ ಎಂ. ಎಸ್. ಕೃಷ್ಣನ್)

ಇದರಲ್ಲೂ ಕೂಡ ಬಹಳ ಮುಗ್ಗಟ್ಟು ಬಂದಿದೆ. ಇದರಲ್ಲಿ ಸುಮಾರು 5.2 ಲಕ್ಷ ಬೆಲೆಯ ಒಂದು ಮೆಷಿನರಿಯನ್ನು ಎನ್.ಜಿ.ಕೆ. (ಜಪಾನ್) ಇವರಿಂದ ತರಿಸಿದರು. ಇದು 1964ನೇ ಅಗ್ರಿಮೆಂಟು ಪ್ರಕಾರ ತರಿಸಿದ್ದು. ಈಗ ಈ ಅಗ್ರಿಮೆಂಟನ್ನು ಕೂಡ ಪರಿಶೀಲನೆ ಮಾಡಬೇಕಾಗಿದೆ. ಇನ್ನು ಇಲ್ಲಿರುವ ಜನ ಮೆಷಿನರಿ ಗೊತ್ತಿಲ್ಲದ ಜನ ಎಂದು ಹಳೇ ಮೆಷಿನರಿ ಒಂದನ್ನು 63 ಲಕ್ಷಕ್ಕೆ ತಂದು ನಮ್ಮ ಸರಕಾರಕ್ಕೆ ಟೋಪಿ ಹಾಕಿದ್ದಾರೆ. ಇದೇ ರೀತಿಯ ಮೆಷಿನರಿಯನ್ನು ಮದ್ರಾಸಿನವರಿಗೆ 30 ಲಕ್ಷಕ್ಕೆ ಕೊಟ್ಟು ನಮ್ಮ ಸರಕಾರಕ್ಕೆ ಹೆಚ್ಚು ಹಣಕ್ಕೆ ಮಾರಿದ್ದಾರೆ. ಇಲ್ಲಿ ಇನ್ಸುಲೇಟರುಗಳನ್ನು ಮಾಡುವ ಹಾಗೆ ಮದ್ರಾಸಿನಲ್ಲೂ ಇನ್ಸುಲೇಟರುಗಳನ್ನು ಮಾಡುತ್ತಿದ್ದಾರೆ. ಇದಕ್ಕಾಗಿ ಡ್ರೈ ಗ್ರೈಂಡಿಂಗು ಎಕ್ವಿಪ್‌ಮೆಂಟು ಎನ್ನುವ ಮೆಷಿನರಿಯನ್ನು ಯು ಎಸ್ ಎ ಕಡೆಯಿಂದ ಮದ್ರಾಸಿನವರು 25 ಲಕ್ಷಕ್ಕೆ ತರಿಸಿದ್ದರು. ಇದೇ ಮೆಷಿನರಿಯನ್ನು ಇಲ್ಲಿ ತರಿಸಲು ಸುಮಾರು 50 ಲಕ್ಷ ಕೊಟ್ಟು ತರಿಸಲಾಗಿದೆ. ಇದರಿಂದ ಸರಕಾರಕ್ಕೆ ನಷ್ಟವಾಗಿದೆ. ಇದರಲ್ಲಿ ಯಾರ್ಯಾರಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆಯಾಗಿದೆ ಎನ್ನುವುದನ್ನು ಸರಕಾರ ತೀವ್ರವಾಗಿ ವಿಚಾರಣೆ ಮಾಡಲು ಒಂದು ಪ್ರೋಬ್ ನಡೆಸಬೇಕು. ಇದು ಅಗತ್ಯ. ಇಂತಹ ಒಂದಲ್ಲ ಹಲವಾರು ನಿದರ್ಶನಗಳನ್ನು ಕೊಡಬಹುದು. ಇದರ ಬಗ್ಗೆ ಟೆಕ್ನಿಕಲ್ ಒಪೀನಿಯನ್ ಪಡೆಯಲು ಅನುಕೂಲವಾಗುತ್ತೆ ಎಂದು ಹೊರಗಿಂದ ಇಲ್ಲಿಗೆ ಅಧಿಕಾರಿಗಳನ್ನು ಕರೆಸಿ ಅವರಿಗೆ ತಿಂಗಳಿಗೆ 7,000 ರೂಪಾಯಿಗಳ ವರಮಾನ ಬರುವಂತೆ ಏರ್ಪಾಡು ಮಾಡಿದ್ದಾರೆ. ಪೋರ್ಸಿಲೇನ್ ಫ್ಯಾಕ್ಟರಿಯಲ್ಲಿ ಇನ್ನೂ ರಾಯಲ್ಟಿ ಕೂಡ ಕೊಡುತ್ತಿದ್ದಾರೆ. ಅನ್ಯಾಯಗಳು ಮೋಸ ಹೆಚ್ಚಾಗಿದೆ. ಇದರಿಂದಾಗಿ ಇಲ್ಲಿ ಕೂಡ ಒಂದು ರೀತಿಯಾದ ಮುಗ್ಗಟ್ಟು ಬಂದಿದೆ. ಆದಷ್ಟು ಬೇಗ ಇದರ ಬಗ್ಗೆ ವಿಚಾರಣೆ ನಡೆಸಲು ಏರ್ಪಾಡು ಮಾಡಬೇಕು. ಮತ್ತು ಸರಕಾರ ಬೇಗನೆ ವಿಚಾರಣೆ ನಡೆಸಿ, ಇಂತಹ ಕೈಗಾರಿಕೆಗಳನ್ನು ಉಳಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಮ್ಮ ಕೈಗಾರಿಕೆಯಲ್ಲಿ ರೀ ಓರಿಯಂಟೇಷನ್ ಆಗಬೇಕು. ಇದು ಸಮಾಜವಾದವಲ್ಲ. ಕೈಗಾರಿಕೆಗಳು ಬೆಳೆಯುವಂತೆ ಸರಕಾರ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri ABDUL KHUDDUS ANWAR.—Mr. Speaker, Sir, while opposing the demands for industries, I beg to bring a few points for information of this Hon. House. The industries that are working in the Mysore State are not in a happy position. Almost every industry is incurring loss. The Bhadravathi Iron and Steel Works which was a major industry which was earning a profit of more than 195 lakhs prior to 1966. Now it is losing to the tune of nearly Rs. 7 to 8 crores. I want to bring to the notice of the Hon. Minister that L.D. Plant which was giving a production of 200 tons every day is shut down. It is a very sorry state of affairs the officers who are known to be the Technical Officers are not in a position to maintain this L. D. Plant. The Technical Officer concerned is putting forth some plea or the other for shutting down this plant. They are given a salary of some thousands. All of them have come from a foreign country and call themselves experts. The Refractories Plant supplied along with L.D. Plant, for the manufacture of Tar-Dolomite bricks was not at all put into operation, and before it was started it was scrapped by the foreign expert. So as to say that India is not in a position to supply refractories and must get these refractories from foreign, and thus stop the production of L. D. for a period of six or eight months, thus loosing a production of 60,000 tons of steel and in value of Rs. 1½ crores loss to the concern. This is all due to the bad planning and lack of foresight and misdeeds of the man who was there as P. D. General Manager in Collaboration with the foreigners. They require over 600 tons of refractories. Nobody is coming forward to supply such huge quantity and ultimately we have to

depend upon foreign countries. This alarming situation was created by a Foreign Expert–Technical Director, production has suffered a lot on account of this shut down.

With regards rolling of mild steel sections and billets for the use of Agriculturists and Re-rollers, which we were doing since last 30 years by supplying these cut-ends and roll spoils to the merchants, consumers and re-rollers to a tune of 45 thousand tons are deprived of their requirements on the pretext that they have switched over to alloy-Steel without carrying to the needs of the general public, or making alternative arrangements to supply the requirements of the consumers, and thus hundreds of workers are likely to be thrown out of jobs.

Sir, may I ask the concerned Minister that in the foreign countries from where our expert Mr. Huth is coming is adopting the same. Technique of charging the mild steel and again converting it into carbon and manganese steel, and sell it at a rate less than Rs. 1,200 per ton., if the same mild steel is sold it will get a value of Rs. 1,100 per ton and thus put the factory to a loss of Rs. 1½ crores. On account of this suicidal policy to day the rate of mild steel in open market has gone up to Rs. 1,500 per ton ; which an ordinary agriculturist or a common man will not be in a position to purchase and expert Mr. Huth says that we cannot make Carbon–Manganese Steel from out of scrap, which is being used by Japan and other countries and produce alloy steel.

All these 30 years we were able to manufacture these carbon and manganese steel from out of purchased scrap and Open Hearth and Electric Furnaces are very handy for manufacture of Alloy steel and even in the worlds steel production. These furnaces are very much suited for producing alloy steel and L.D. is quite suited for carbon and manganese steel. When we were successful during all these 30 years, why should our experts still think that they cannot make alloy steel, either they do not know the technique or they want this to convert into another Hindustan steels and thus roll–off our money. When I was the Superintendent there, we were earning a profit of 30 to 35 lakhs. But now you are losing. When that is the position, would you consider the Technical Director who has come from outside is competent ? Will you kindly go into the matter whether our people are not competent to be in-charge of the Works and deliver the goods to the best satisfaction of the people ? This consortium is eating Rs. 18 lakhs—20 lakhs every year. These people have taken months together for erection of the plant, whereas our people would have finished within the schedule. Our people have actually erected the plant within the shortest possible time. You can judge who is better. You are simply wasting the money on these people who are no better than our people. As a matter of fact our people are better than these technical advisers. This is my pessonal experience. With these few words I conclude. Thank you, Sir.

ಶ್ರೀ ಎಸ್. ಪುಟ್ಟಸ್ವಾಮಿ.—ಸ್ವಾಮಿ, ನನಗೆ ಈಗ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಸಾಧ್ಯವಿಲ್ಲ. ಈಗಾಗಲೇ ಮಾನ್ಯ ಸಿದ್ಧವೀರಪ್ಪನವರು 40 ನಿಮಿಷಗಳ ಕಾಲ ಮಾತನಾಡಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಿಂದೆ ಶ್ರೀ ಜೆ. ಬಿ. ಮಲ್ಲಾರಾಧ್ಯರು ಇದ್ದಾಗ ಅವರೊಬ್ಬರೇ 4 ಗಂಟೆಗಳ ಕಾಲ ಮಾತನಾಡುತ್ತಿದ್ದರು. ಆದ್ದರಿಂದ ಮಾನ್ಯ ಸಿದ್ಧವೀರಪ್ಪನವರು 40 ನಿಮಿಷ ಮಾತನಾಡಿದ್ದರೆ ಅದು ಜಾಸ್ತಿಯಾಗುವುದಿಲ್ಲ.

ಅಧ್ಯಕ್ಷರು.—ಟೈಮ್ ಬಗ್ಗೆ ಅಗ್ರಿಮೆಂಟ್ ಆಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೇಷ್ಮೆ ಬಗ್ಗೆ ಒಬ್ಬರೂ ಸಹ ಮಾತನಾಡಿಲ್ಲ. ಆದ್ದರಿಂದ ಒಬ್ಬರಿಗಾದರೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

Mr. SPEAKER.—The Hon. Leader of Congress (R) Party was a party to this agreement.

Sri H. SIDDAVEERAPPA.—We were not a party to the agreement.

Mr. SPEAKER.—Mr. Siddaveerappa was a party to that.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ರೇಷ್ಮೆ ಇಲಾಖೆ 10-15 ಲಕ್ಷ ಜನರ ಜೀವನಕ್ಕೆ ಸಂಬಂಧಪಟ್ಟಿದ್ದು. ಈ ಇಲಾಖೆ ಬಗ್ಗೆ ಒಬ್ಬರೂ ಸಹ ಮಾತನಾಡಿಲ್ಲ. ಆದ್ದರಿಂದ ಮಾನ್ಯ ಪುಟ್ಟಸ್ವಾಮಿಯವರಿಗಾಗಲೀ ಅಥವಾ ಶ್ರೀಮತಿ ನಾಗರತ್ನಮ್ಮನವರಿಗಾಗಲೀ ಮಾತನಾಡುವುದಕ್ಕೆ 10 ನಿಮಿಷವಾದರೂ ಅವಕಾಶ ಕೊಡಿ.

ಅಧ್ಯಕ್ಷರು.—ನಿಮ್ಮ ಪಾರ್ಟಿಯ ಸಿದ್ಧವೀರಪ್ಪನವರು ಈಗಾಗಲೇ 40 ನಿಮಿಷ ಮಾತನಾಡಿದ್ದಾರೆ. ಮತ್ತೊಬ್ಬರು 10 ನಿಮಿಷ ಮಾತನಾಡಿದ್ದಾರೆ. ಆದ್ದರಿಂದ ನಾನು ಈಗ ಏನು ಮಾಡುವುದಕ್ಕೂ ಸಹ ಆಗುವುದಿಲ್ಲ.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಸ್ವಾಮಿ, ರೇಷ್ಮೆ ಕೈಗಾರಿಕೆ ಬಹಳ ಪ್ರಾಮುಖ್ಯವಾದದ್ದು. ಈ ವಿಚಾರದಲ್ಲಿ ಯಾರೂ ಮಾತನಾಡಿಲ್ಲ. ಯಾರೂ ಸಹ ಮಾತನಾಡದಿದ್ದರೆ ಮುಖ್ಯವಾದ ಒಂದು ಇಲಾಖೆಯನ್ನು ಮರೆತಹಾಗಾಗುತ್ತದೆ. ಆದ್ದರಿಂದ ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ಮಾತನಾಡಲು 10 ನಿಮಿಷ ಅವಕಾಶವನ್ನು ಕೊಡಿ.

Mr. SPEAKER.—Is the Hon. Member justified in making this request as a Whip of the party.

Sri H. SIDDAVEERAPPA.—Sir, this is the first time in the history of Mysore Legislature that such a procedure has been followed.

Mr. SPEAKER.—Then the Hon. Member may Suggest Some other Procedure and if it is reasonable we shall accept it.

Sri H. SIDDAVEERAPPA.—Sir, I should say, this time the interests of the State have been lost. Sericulture is an important industry, and Mysore has the biggest place in India in this industry. Please permit at least one person to speak who comes from that area.

Mr. SPEAKER.—The Hon. Member took 40 minutes himself. Was it not a fact that 3 hours time was allotted for this Demand with the consent of the Hon. Member?

Sri H. SIDDAVEERAPPA.—I have not taken adequate time to do justice. That is why we suggested earlier to simply put the Demand to vote and be done with it.

Sri R. DAYANANDA SAGAR.—Sir, this is not fair. About Rs. 10 crores have been mismanaged in Sericulture industry and you want to give only half-a-day for discussion of this Demand.

Mr. SPEAKER.—The entire House including Sri Siddaveerappa agreed to it.

Sri H. SIDDAVEERAPPA.—Sir, please do not bring in my name. I am not a party to it.

Smt. K. S. NAGARATHNAMMA.—Sir, this is really bad. Nobody has spoken about sericulture.

Sri G. DUGGAPPA.—Sir, this is a very important subject. Nobody has made any reference about sericulture. I am sure the Hon. Minister will also agree that an opportunity be given to a member coming from that area.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರಪಂಚದಲ್ಲಿ ಉತ್ಪತ್ತಿಯಾಗತಕ್ಕಂಥ ರೇಷ್ಮೆ ಬೆಳೆಯಲ್ಲಿ 80 ಪರ್ಸೆಂಟ್ ರೇಷ್ಮೆಯನ್ನು ಮೈಸೂರು ರಾಜ್ಯದಲ್ಲಿ ಬೆಳೆಯುತ್ತಾರೆ ಇದರ ಗತಿ ಏನು ಮಾಡಿದ್ದೀರಿ ಎಂಬುದನ್ನು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ಹೀಗೆ ಮಾಡುತ್ತಿರುವುದು ನ್ಯಾಯವೇ ?

Mr. SPEAKER.—If the Hon. Minister is agreeable, I have no objection.

Sri B. B. SAYANAK.—Sir, I rise to a Point of Order. When the Minister is standing to commence his reply, four Hon. Members are standing and speaking. Is the House in order ?

Mr. SPEAKER.—I uphold the Point of Order.

Sri D. DEVARAJ URS.—Sir, with your permission, I would like to say a few words. I know sericulture has a very important part to play in industries. With regard to the timing, I wish to submit that rightly or wrongly we have been pushed into a position whereby we have been asked to discuss on such important Demands within such a short period. I appeal to the Chief Minister, through you Sir, that the method we have adopted for discussing Budget demands, will have to be changed hereafter.

Mr. SPEAKER.—I totally agree with the Hon. Member. But, my suggestion was not accepted.

ಶ್ರೀ ಬಿ. ಪಿ. ಗಂಗಾಧರ್.—ಬಿಸಿನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್‌ನಲ್ಲಿ ನೀವು 4-6 ಜನಗಳು ಸೇರಿ ಏನೋ ಒಂದು ತೀರ್ಮಾನ ಮಾಡುತ್ತೀರಿ, ಇದರಲ್ಲಿ ಏನಾಗಿದೆ ಎಂದರೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶವೇ ಸಿಕ್ಕುತ್ತಿಲ್ಲ.

Sri D. DEVARAJ URS.—The second point is, today being Saturday, we should have sat only in the morning. But, since the House was adjourned day-before-yesterday, we have agree to sit in the afternoon as well. The request of the Hon. Members is to give ten minutes for one person to speak, either to Smt. Nagarathnamma or Sri Puttaswamy, and it may be accepted.

Mr. SPEAKER.—If the Minister is agreeable, I have no objection. But is it not the duty of the hon. members to abide by what was agreed upon ?

Sri H. SIDDAVEERAPPA.—We have to resist if what is done is improper.

Mr. SPEAKER.—The hon. Member cannot say it is improper.

Sri C. K. RAJAIAH SETTY.—Sir, the Hon. Member may be permitted to speak. We can continue the same subject in the afternoon

Mr. SPEAKER.—It is not possible to continue it in the afternoon. Is the Hon' ble Minister agreeable to give some time to the hon. member?

Sri M. RAJASHEKARA MURTHY.—Yes, Sir.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದಿಟ್ಟಿರತಕ್ಕ ಕೈಗಾರಿಕೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ನಾನು ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇನೆ. ನಾನು ಈಗಾಗಲೇ ಈ ಮನೆಗೆ ಸದಸ್ಯನಾಗಿ ಚುನಾಯಿತನಾಗಿ ಬಂದಮೇಲೆ ರೇಷ್ಮೆ ಕೈಗಾರಿಕೆಯ ಮೇಲೆ ಎರಡು ಬಾರಿ ಭಾಷಣ ಮಾಡುತ್ತಾ ಈ ರೇಷ್ಮೆ ಕೈಗಾರಿಕೆಯನ್ನು ಪೂರ್ಣವಾಗಿ ಕೈಗಾರಿಕಾ ಇಲಾಖೆಗೆ ಸೇರಿಸಿ ಎಂದು ಒಂದು ಸಲಹೆಯನ್ನು ಕೊಟ್ಟಿದ್ದೆ. ಸರ್ಕಾರದವರು ಅದನ್ನು ಆಲೋಚನೆ ಮಾಡಿದಹಾಗೆ ಕಾಣುವುದಿಲ್ಲ, ಅಥವಾ ಈ ಕೈಗಾರಿಕೆಯನ್ನು ವ್ಯವಸಾಯದ ಇಲಾಖೆಗೆ ಸೇರಿಸಿ ಅದರ ಮುಖಾಂತರ ಅದರ ಅಭಿವೃದ್ಧಿಯನ್ನು ಸಾಧನೆ ಮಾಡಿ ಎಂದು ಹೇಳಿದ್ದೆ. ಇದರ ಬಗ್ಗೆಯೂ ಸರ್ಕಾರದವರು ಆಲೋಚನೆ ಮಾಡಿದಹಾಗೆ ಕಾಣುವುದಿಲ್ಲ. ಹಿಪ್ಪನೇರಳೆ ಸೊಪ್ಪನ್ನು ಬೆಳೆದು ಅದರಿಂದ ರೇಷ್ಮೆಹುಳುವನ್ನು ಸಾಕಿ ಅದರ ಗೂಡಿನಿಂದ ರೇಷ್ಮೆಯನ್ನು ಉತ್ಪನ್ನ ಮಾಡತಕ್ಕದ್ದರಲ್ಲಿ ನಮ್ಮ ಮೈಸೂರು ರಾಜ್ಯ ಇಡೀ ಪ್ರಪಂಚದಲ್ಲೇ ಅಗ್ರಸ್ಥಾನವನ್ನು ಪಡೆದಿದೆ. ಮತ್ತು ಇಡೀ ಪ್ರಪಂಚದಲ್ಲಿ ರೇಷ್ಮೆಯನ್ನು ಬೆಳೆಯುವುದರಲ್ಲಿ 80 ಪರ್ಸೆಂಟ್ ರೇಷ್ಮೆಯನ್ನು ನಮ್ಮ ಮೈಸೂರು ರಾಜ್ಯದಲ್ಲಿ ಬೆಳೆಯುತ್ತಾರೆ. ಆದ್ದರಿಂದ ರೇಷ್ಮೆಯ ಉತ್ಪತ್ತಿಗೆ ಮೂಲವಾಗಿರತಕ್ಕಂಥ ರೇಷ್ಮೆ ಹುಳುವನ್ನು ಸಾಕುವುದಕ್ಕೆ ಪ್ರಾಧಾನ್ಯವಾಗಿರತಕ್ಕ ಹಿಪ್ಪನೇರಳೆ ಸೊಪ್ಪನ್ನು ಮತ್ತು ಅದರ ತಳಿಯನ್ನು ಅಭಿವೃದ್ಧಿಮಾಡತಕ್ಕ ಕೆಲಸವನ್ನು ಮಾಡಬೇಕು. ರೇಷ್ಮೆಯ ಹೊಸ ಹೊಸ ರೀತಿಯ ತಳಿಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆ ಮಾಡಬೇಕು. ಹಿಪ್ಪನೇರಳೆಯನ್ನು ಬೆಳೆಯತಕ್ಕ ರೈತರಿಗೆ ನೀರಾವರಿ ಬಾವಿಗಳನ್ನು ಮತ್ತು ಪಂಪುಸೆಟ್ಟುಗಳನ್ನು ಒದಗಿಸಬೇಕೆಂದು ಎಷ್ಟು ಸಾರಿ ಹೇಳಿದರೂ ಕೂಡ ಸರ್ಕಾರದವರು ಆ ಕಡೆ ಸ್ವಲ್ಪವೂ ಗಮನವನ್ನು ಕೊಟ್ಟಿಲ್ಲ. ಆದ್ದರಿಂದ ರೈತರು ಹಿಪ್ಪನೇರಳೆ ಬೆಳೆಯುವುದಕ್ಕೆ ಅನುಕೂಲವಾಗುವಂತೆ ಸರ್ಕಾರದವರು ನೀರಾವರಿ ಬಾವಿಗಳನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ.

ಸರ್ಕಾರದವರು ನಡೆಸುತ್ತಾ ಇರತಕ್ಕ ಸಿಲ್ಕ್ ಫಿಲೇಚರುಗಳು ಏನಿವೆ ಅವುಗಳಲ್ಲಿ ಒಂದು ವರ್ಷಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಆ ಫಿಲೇಚರುಗಳಲ್ಲಿ ಸರ್ಕಾರದವರು ಹಾಕಿರತಕ್ಕ ಬಂಡವಾಳ ಕುಗ್ಗುತ್ತಾ ಹೋಗುತ್ತಿದೆ. ಆದಕಾರಣ ಈ ಫಿಲೇಚರುಗಳನ್ನು ಒಂದೊಂದು ಯೂನಿಟ್ ಮಾಡಿ ಅದಕ್ಕೆ ಒಬ್ಬೊಬ್ಬ ಮ್ಯಾನೇಜರನ್ನು ನೇಮಕ ಮಾಡಿದರೆ ಆ ಫಿಲೇಚರುಗಳನ್ನು ಸರಿಯಾದ ರೀತಿಯಲ್ಲಿ ನಡೆಸಿ ಹೆಚ್ಚು ಉತ್ಪತ್ತಿ ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಈ ವ್ಯವಸ್ಥೆಯನ್ನು ತಕ್ಷಣ ಮಾಡುವುದಾದರೆ ಆ ಫಿಲೇಚರುಗಳಲ್ಲಿ ಆಗತಕ್ಕಂಥ ನಷ್ಟವನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ರೇಷ್ಮೆ ಕೈಗಾರಿಕೆಯ ಇಲಾಖೆಯಲ್ಲಿ ಅಧಿಕಾರಿಗಳು ಲಂಚತೆಗೆದುಕೊಳ್ಳುವುದನ್ನು ಸರ್ಕಾರದವರು ತಡೆಗಟ್ಟಬೇಕು ಫಿಲೇಚರುಗಳಲ್ಲಿ ರೇಷ್ಮೆ ನೂಲನ್ನು ಕದ್ದು ಮಾರಾಟ ಮಾಡುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಇದನ್ನು ಸರಿಪಡಿಸಬೇಕು. ರೇಷ್ಮೆ ಗೂಡುಗಳ ಮಾರಾಟ ಮತ್ತು ಕೊಂಡುಕೊಳ್ಳುವುದರಲ್ಲಿ ಸರ್ಕಾರಕ್ಕೆ ಆಗತಕ್ಕಂಥ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

1-00 P. M.

ಇನ್ನೊಂದು ವಿಷಯ ಏನೆಂದರೆ ರಾಜ್ಯಮಟ್ಟದಲ್ಲಿ ಸರ್ಕಾರ ಉತ್ಪನ್ನ ಮಾಡತಕ್ಕ ರೇಷ್ಮೆಯನ್ನು ಮಾರಾಟ ಮಾಡುವುದಕ್ಕೆ ಮತ್ತು ಖಾಸಗಿಯಾಗಿ ರೈತರು ಮಾಡಿದ್ದನ್ನು ಮಾರಾಟ ಮಾಡುವುದಕ್ಕೆ ಒಂದು ರಾಜ್ಯಮಟ್ಟದ ಸಹಕಾರಿ ಸಂಘವನ್ನು ತೆರೆದಿದ್ದಾರೆ. ಇದಕ್ಕೆ ಸರ್ಕಾರದವರೂ ಬಂಡವಾಳವನ್ನು ಕೊಟ್ಟಿದ್ದಾರೆ. ಅದಲ್ಲದೆ ಬ್ಯಾಂಕಿನಿಂದಲೂ ಕೂಡ ಸರ್ಕಾರದವರು ಲಕ್ಷಾಂತರ ರೂಪಾಯಿಯನ್ನು ಇವರಿಗೆ ಕೊಡಿಸಿದ್ದಾರೆ. ಈ ಸೊಸೈಟಿ ಹೇಗೆ ನಡೆಯುತ್ತದೆ ಅಂದರೆ, ಮೊನ್ನೆ ನಾಡಗೌಡರ ಇಲಾಖೆಯ ಡಿಮ್ಯಾಂಡ್ ಬಂದಾಗ ಅವರು ಆ ಸಹಕಾರಿ ಇಲಾಖೆಯನ್ನು ವಹಿಸಿಕೊಂಡ ಮೇಲೆ ಏನೇನಾಗಿದೆ ಎಂದು ಮಾನ್ಯ ಸದಸ್ಯರೆಲ್ಲ ಹೇಳಿದರೋ, ಸಹಕಾರಿ

ತತ್ವವೇ ಹೋಗಿದೆ ಎಂದು ಏನು ಹೇಳಿದರೋ, ಅದೇ ರೀತಿ ಇಲ್ಲಿಯೂ ಆಗಿದೆ. 1966–67 ರಿಂದ ಈ ಸಹಕಾರಿ ಸಂಘದ ಇಂಟರ್ನಲ್ ಆಡಿಟ್ ಮಾಡಿಲ್ಲ, ಲೆಕ್ಕಪತ್ರಗಳನ್ನು ತನಿಖೆ ಮಾಡಿಲ್ಲ, ಸರ್ಕಾರದ ಸೆಕ್ರೆಟರಿಯವರಿದ್ದರೂ ಎರಡು ವರ್ಷದಿಂದ ಜನರಲ್ ಬಾಡಿ ಮೀಟಿಂಗ್ ಕೂಡ ಮಾಡಿಲ್ಲ. ಅದರಲ್ಲಿರತಕ್ಕ ಡೈರೆಕ್ಟರ್ಸ್ ಮತ್ತು ಅಧ್ಯಕ್ಷರು, ತಮ್ಮ ತಮ್ಮ ಸ್ವಂತ ವ್ಯಾಪಾರ ಮಾಡುವುದಕ್ಕೋಸ್ಕರ, ಇದರಿಂದ ಅಡ್ವಾನ್ಸ್ ತೆಗೆದುಕೊಂಡು ಖರ್ಚು ಮಾಡುತ್ತಿದ್ದಾರೆ. ಇಲ್ಲಿರತಕ್ಕ ರೇಷ್ಮೆಯನ್ನು ಅವರೇ ತೆಗೆದುಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಅದರ ಬಗ್ಗೆ ತನಿಖೆ ನಡೆಸಬೇಕೆಂದು ಸಂಬಂಧಪಟ್ಟ ಮಂತ್ರಿಯವರಿಗೆ ಕಾಗದ ಬರೆದರೂ ಏನೂ ಕ್ರಮ ತೆಗೆದುಕೊಂಡಿಲ್ಲ. ಸೊಸೈಟಿಗೆ ಸಂಬಂಧಪಟ್ಟ ಮಂತ್ರಿಯವರಿಗೂ ಜನರಲ್‌ಬಾಡಿ ಮೀಟಿಂಗ್ ಮಾಡಿಲ್ಲ, ಲೆಕ್ಕ ಪತ್ರ ತನಿಖೆ ಮಾಡಿಲ್ಲ, ಅಲ್ಲಿ ಅನ್ಯಾಯ ಬಹಳ ನಡೆಯುತ್ತಿದೆ, ಬ್ಯಾಂಕಿನಿಂದ ಕೊಟ್ಟ ಹಣ ಪೋಲಾಗುತ್ತಿದೆ, ಸರ್ಕಾರದ ಬಂಡವಾಳ ಪೋಲಾಗುತ್ತಿದೆ, ಅದರ ತನಿಖೆ ನಡೆಸಿ ಸರ್ಕಾರವೇ ಅದರ ಆಡಳಿತವನ್ನು ವಹಿಸಿಕೊಳ್ಳಬೇಕೆಂಬ ವ್ಯವಸ್ಥೆ ಮಾಡಬೇಕೆಂದು ಕಾಗದ ಬರೆದರೂ ಸಹ ಅವರು ಯಾವುದನ್ನೂ ಮಾಡಿಸದೆ ಸುಮ್ಮನೆ ಇದ್ದಾರೆ. ಇದಕ್ಕೆ ಕಾರಣವಾದರೂ ಏನೆಂದು ಅರ್ಥವಾಗುವುದಿಲ್ಲ. ಆದ್ದರಿಂದ ರೇಷ್ಮೆಗೆ ಬೇಕಾದ ಸೊಪ್ಪು ಬೆಳೆಸತಕ್ಕ ವಿಚಾರದಲ್ಲಿ ಮತ್ತು ನೂಲು ಮಾರಾಟ ಮಾಡತಕ್ಕ ವಿಷಯದಲ್ಲಿ ಖುದ್ದು ಪರಿಶೀಲನೆ ಮಾಡುವ ಬಗ್ಗೆ ಒಬ್ಬ ಅಧಿಕಾರಿಯನ್ನು ನೇಮಿಸಿ ರೇಷ್ಮೆ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳುತ್ತಾರೆಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಚಿನ್ನದ ನಾಡು, ಗಂಧದ ಬೀಡು, ಆಗಿದ್ದ ಮೈಸೂರು ರಾಜ್ಯ ಕೈಗಾರಿಕೆಯಲ್ಲೂ ಪ್ರಮುಖವಾದ ಪಾತ್ರವನ್ನು ವಹಿಸಿ ಮಾದರಿ ಮೈಸೂರಾಗಿತ್ತು. ಸ್ವಾತಂತ್ರ್ಯ ಬಂದ ಮೇಲೆ ಕಳೆದ ಒಂದು ದಶಕದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸದೇ ರಾಜ್ಯ ಬೆಂಗಾಡಾಗುತ್ತಿದೆ. ಅದಕ್ಕೆ ಕಾರಣ ಇಷ್ಟೇ. ಸರಕಾರ ಸಮರ್ಪಕವಾದ ರೀತಿಯಲ್ಲಿ ಕೈಗಾರಿಕೆಯ ಪ್ರಗತಿಯನ್ನು ಯೋಜಿತ ರೀತಿಯಲ್ಲಿ ಸಾಧಿಸಿಲ್ಲ. ನಾನು ಇದಕ್ಕೆ ಒಂದು ಸೂಚನೆಯನ್ನು ಕೊಡುತ್ತೇನೆ. ಸ್ಟೇಟ್ ರೋಸ್ಟರ್ ಆಫ್ ಪೊಟೆನ್ಶಿಯಲ್ ಎಕ್ಸಿಕ್ಯೂಟಿವ್ಸ್ ಅಂಡ್ ಟೆಕ್ನಿಷಿಯನ್ಸನ್ನು ತಯಾರು ಮಾಡಬೇಕು. ಆ ರೀತಿ ಮಾಡಿಕೊಂಡು ಕೈಗಾರಿಕೆಗಳಲ್ಲಿ ಯೋಗ್ಯತೆ ಇರುವಂತಹ, ಅರ್ಹತೆ ಇರುವಂತಹ ಆಡಳಿತಗಾರರನ್ನು ಅದಕ್ಕಾಗಿಯೇ ವಿಶೇಷವಾಗಿ ನೇಮಿಸಿದ ನೇಮಕಾತಿ ಆಯೋಗದ ಮೂಲಕ ನೇಮಿಸಬೇಕು. ರಾಜಕೀಯ ದೃಷ್ಟಿಯಿಂದ ಸ್ವಜನ ಪಕ್ಷಪಾತದ ದೃಷ್ಟಿಯಿಂದ ಅಧಿಕಾರಿಗಳನ್ನು ನೇಮಿಸಿಕೊಂಡರೆ, ಭದ್ರಾವತಿಯಲ್ಲಿ ಆದ ನಷ್ಟದಂತೆ ತುಂಬಲಾರದ ನಷ್ಟ ವಾಗುತ್ತದೆ. ಈ ರೀತಿ ಸರ್ಕಾರದವರು ಮಾಡಿದುದರಿಂದ ಈ ತನಕ ಕೈಗಾರಿಕೆಗಳಲ್ಲಿ ಹಿಂದುಳಿದಿದೇವೆ. 1966 ರಿಂದ 68ರ ವರೆಗೆ ಒಬ್ಬ I. A. S. ಅಧಿಕಾರಿಯನ್ನು M. S. I. L. ನ ಆಡಳಿತ ಮಂಡಳಿಯ ವೈಸ್ ಚೇರ್‌ಮನ್ ಮಾಡಿದುದರಿಂದ ಆ ಕಾರ್ಖಾನೆಯಲ್ಲಿ 4–5 ಕೋಟಿ ರೂಪಾಯಿವರೆಗೆ ನಷ್ಟವಾಗಿದೆ. ಅದನ್ನು ಇನ್ನು 10 ವರ್ಷವಾದರೂ ತುಂಬುವುದಕ್ಕಾಗುವುದಿಲ್ಲ. ಇದರಲ್ಲಿ ಸರ್ಕಾರದವರು ದುರಾಡಳಿತವನ್ನು ದುರುದ್ದೇಶದಿಂದಲೇ ಮಾಡಿದ್ದಾರೆಂದು ಹೇಳಬಹುದು. ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಪ್ರಗತಿ ಸಾಧಿಸಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಲೇ ಇದ್ದಾರೆ. ಅವರು ಕಳಿಸಿರತಕ್ಕ ಆಡಿಟ್ ರೆಪೋರ್ಟ್‌ನಲ್ಲಿ ಕಳೆದ ಮೂರು ವರ್ಷಗಳಿಂದಲೂ ನಷ್ಟವಾಗುತ್ತಾ ಇದೆ ಎಂಬುದು ಸ್ಪಷ್ಟವಾಗಿದೆ. ಗಂಧದ ಎಣ್ಣೆಯ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಗಂಧದ ಎಣ್ಣೆಯ ಬಗ್ಗೆ ಹೇಳುವುದಾದರೆ, ಈ ದಿನ ಇದರ ನಕಲಿಮಾಲು ಮಾಡಿ ಮೈಸೂರು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಪ್ರಪಂಚದಲ್ಲೇ ಹೆಸರಿನಲ್ಲಿ ಏಕಸ್ವಾಮ್ಯ ಪಡೆದಿರುವ ಗಂಧದೆಣ್ಣೆ ಕೈಗಾರಿಕೆಗೆ ಭಾರಿ ಧಕ್ಕೆಯುಂಟಾಗಿದೆ. ಸರ್ಕಾರದವರು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಆದ್ದರಿಂದ ಈ ಸ್ಪೂರಿಯಸ್ ಪ್ರೊಡಕ್ಟ್ಸ್ ಮಾಡುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ 1966–67ರಲ್ಲಿ 10.31 ಲಕ್ಷ, 1967–68 ರಲ್ಲಿ 24.90 ಲಕ್ಷ ಮತ್ತು 68–69ರಲ್ಲಿ 19.99 ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆಂದು ಹೇಳುತ್ತಾರೆ. ಸರಕಾರದವರು ಕೈಗಾರಿಕಾ ಇಲಾಖೆಗೆ ಒಬ್ಬ ದಕ್ಷರಾದ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಅವರು ಬಹಳ ಸತ್ಯಸಂಧರು ಒಳ್ಳೆಯವರು ಮತ್ತು ಯೋಗ್ಯತೆ ಉಳ್ಳವರು. ಅವರ ಬಗ್ಗೆ ಜನತೆ ಗೌರವಾಭಿಮಾನವಿಟ್ಟಿದೆ. ಆದರೆ ಜಾಯಿಂಟ್‌ಡೈರೆಕ್ಟರ್ಸ್ ಮತ್ತು ಡೆಪ್ಯುಟಿ ಜಾಯಿಂಟ್ ಡೈರೆಕ್ಟರ್ಸ್ ಕೆಲವರು ಇದ್ದಾರೆ. ಅವರು ಹಣವನ್ನು ಸಂಪಾದನೆ ಮಾಡುವುದಕ್ಕೋಸ್ಕರವೇ ಈ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದಾರೆ ಎನಿಸುತ್ತದೆ. 19.51 ಲಕ್ಷ ರೂಪಾಯಿ ಬ್ಲಾಕ್ ಲೋನ್ ಕೊಟ್ಟಿದ್ದಾರೆ. ಇದರಲ್ಲಿ ಬಹು ಭಾಗ ಈ ಅಧಿಕಾರಿಗಳ ಜೇಬಿಗೆ ಹೋಗಿದೆ ಎಂದು ಹೇಳಬಹುದು. ಇವರು ಮಂತ್ರಿ

ಯವರ ಸಂಬಂಧಿಕರಾಗಿರುವುದರಿಂದ ಯಾವ ಶಿಕ್ಷಾ ಕ್ರಮದ ಹೆದರಿಕೆ ಇಲ್ಲದೆ ಈ ಹಣವನ್ನು ದುರುಪಯೋಗಮಾಡಿಕೊಳ್ಳುತ್ತಿದ್ದಾರೆ. ಇವರು ತಮ್ಮ ಅಧಿಕಾರವನ್ನೂ ದುರುಪಯೋಗ ಮಾಡಿಕೊಂಡು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಮೀಸಲಾಗಿರುವ ಹಣವನ್ನು ಪೋಲು ಮಾಡುತ್ತಿದ್ದಾರೆ; ಮತ್ತು ಬೇಕಾದಷ್ಟು ಸಂಪಾದನೆ ಮಾಡುತ್ತಿದ್ದಾರೆ. ಇದರ ಬಗ್ಗೆ ಮಂತ್ರಿಯವರು ಗಮನ ಕೊಟ್ಟು ಅವರನ್ನು ಬೇರೆ ಕಡೆಗೆ ವರ್ಗವಾದರೂ ಮಾಡಿ, ಸಣ್ಣ ಕೈಗಾರಿಕೆಗಳ ಉದ್ಧಾರವನ್ನು ಮಾಡಬೇಕು. ಇದರಿಂದ ನಮ್ಮ ರಾಜ್ಯವು ಕೈಗಾರಿಕೆಗಳ ಭೂಪಟದಲ್ಲಿ ಮಾದರಿ ಮೈಸೂರಾಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ನಮ್ಮ ರಾಜ್ಯದಲ್ಲಿ ಕೈಗಾರಿಕಾ ಪೊಟೆನ್‌ಶಿಯಾಲಿಟೀಸ್‌ನ್ನು ನೋಡಿಕೊಂಡು ಅವುಗಳ ಆಧಾರದ ಮೇಲೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಈ ದಿನ ರಾಜ್ಯದ ಶೇಕಡಾ 18 ರಷ್ಟು ಪ್ರದೇಶದಲ್ಲಿ ಅರಣ್ಯ ಸಂಪತ್ತು ಇದೆ. ಆ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ರಾಜ್ಯ ಅಭಿವೃದ್ಧಿ ಪಡಿಸಲು ಫಾರೆಸ್ಟ್ ಬೇಸ್‌ಡ್ ಕೈಗಾರಿಕೆಗಳ ಕಡೆ ಕೂಡ ಹೆಚ್ಚಿನ ಗಮನವನ್ನು ಕೊಡಬೇಕು. ಅದೇ ರೀತಿ ಅಗ್ರೋ ಇಂಡಸ್ಟ್ರೀಸ್ ಕೂಡ ಹೆಚ್ಚು ಪ್ರಗತಿ ಹೊಂದಿಲ್ಲ. ಆದ್ದರಿಂದ ನಮ್ಮ ರಾಜ್ಯದಲ್ಲಿ ಈ ಪೊಟೆನ್‌ಶಿಯಾಲಟೀಸನ್ನು ಗಣನೆ ಮಾಡಿಕೊಂಡು ಕೈಗಾರಿಕೆಗಳನ್ನು ಹೆಚ್ಚು ಸ್ಥಾಪಿಸಿ ಅಭಿವೃದ್ಧಿಗೊಳಿಸಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಡಿಮ್ಯಾಂಡ್ ಮೇಲೆ ಮಾತನಾಡಿದಂಥ ಇಬ್ಬರು ಸದಸ್ಯರು ಬಹಳ ಉಪಯುಕ್ತವಾದ ಸಲಹೆಗಳನ್ನು ಈ ರೇಷ್ಮೆ ಕೈಗಾರಿಕೆಯ ವಿಷಯದಲ್ಲಿ ಕೊಟ್ಟಿದ್ದಾರೆ. ಅವರು ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಮೊಟ್ಟ ಮೊದಲನೆಯದಾಗಿ ವಂದಿಸುತ್ತೇನೆ.

ನಮ್ಮ ಸಂಸ್ಥಾನದಲ್ಲಿ ಬಹುಪಾಲು ಅಂದರೆ ಸೇಕಡ 80 ಭಾಗದಷ್ಟು ರೇಷ್ಮೆ ಬೆಳೆಯುತ್ತಾರೆ. ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ 10 ಲಕ್ಷ ಸಂಸಾರಗಳು ಇದರಿಂದ ಜೀವನ ನಡೆಸುತ್ತಿದ್ದಾರೆ. ಈ ಕೈಗಾರಿಕೆ ಎಷ್ಟು ಪ್ರಗತಿಯಾಗಬೇಕಾಗಿತ್ತೋ ಅಷ್ಟು ಪ್ರಗತಿಯಾಗಲಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ಇದನ್ನು ಬೇರೆ ದೇಶಗಳಲ್ಲಿ ವ್ಯವಸಾಯ ಇಲಾಖೆಗೆ ಸೇರಿಸಿದ್ದಾರೆ. ಆದರೆ ಮೈಸೂರಿನಲ್ಲಿ ಇಂಡಸ್ಟ್ರಿ ಡಿಪಾರ್ಟ್‌ಮೆಂಟಿನಲ್ಲಿ ಇದು ಒಂದು ಬ್ರಾಂಚಾಗಿ ಉಳಿದುಕೊಂಡು ಅಗ್ರೋ ಬೇಸ್ಡ್ ಇಂಡಸ್ಟ್ರಿಯಾಗಿದೆ. ಅಗ್ರಿಕಲ್‌ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಯಾವ ರೀತಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾರೆ, ಏನಾದರೂ ಸಂಶೋಧನೆ ನಡೆಸಿದ್ದಾರೆಯೇ ಎಂದು ನೋಡಿದರೆ, ಆ ಕಡೆ ಹೆಚ್ಚಿನ ಸಾಧನೆ ಮಾಡಲಿಲ್ಲ, ಉತ್ತಮವಾದ ತಳಿ ಬೀಜಗಳನ್ನು ರೈತರಿಗೆ ಒದಗಿಸಿಕೊಡುವುದಕ್ಕಾಗಲಿಲ್ಲವೆಂಬ ದೃಷ್ಟಿಯಿಂದ ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ. ಬಹುಶಃ ಜಪಾನಿನಲ್ಲಿ, ರಷ್ಯಾದಲ್ಲಿ, ಮತ್ತು ಇತರ ಕಡೆಗಳಲ್ಲಿರುವ ಹಾಗೆ ಕೇಂದ್ರ ಸರ್ಕಾರದಲ್ಲಿ ಅಗ್ರಿಕಲ್‌ಚರ್ ಮಿನಿಸ್ಟ್ರಿಗೆ ಈ ಸಬ್ಜೆಕ್ಟ್ ಕೊಡುವುದು ಒಳ್ಳೆಯದು ಎಂದು ಯೋಚನೆ ಮಾಡುತ್ತಿದ್ದಾರೆ. ಅದು ಆದ ಮೇಲೆ ಪ್ರಾಂತ ಸರ್ಕಾರಗಳು ಯೋಚನೆ ಮಾಡಬೇಕಾಗಿ ಬರುತ್ತದೆ. ಇನ್ನು ಮೈಸೂರು ಸಂಸ್ಥಾನದಲ್ಲಿ 250 ರಿಂದ 300 ಗಜದವರೆಗೆ ನೂಲು ಒಂದು ಗೂಡಿನಲ್ಲಿ ಇರುತ್ತದೆ. ಟ್ರಿಬಲ್ ಮತ್ತು ಡಬ್ಬಲ್ ಕ್ರಾಸಿಂಗ್ ಮಾಡುವುದರಿಂದ 550 ಗಜದವರೆಗೂ ನೂಲು ಬರುತ್ತದೆ. ಈ ರೀತಿಯಾದಂಥ ತಳಿಗಳನ್ನು ಅಭಿವೃದ್ಧಿ ಮಾಡಿ ಹೆಚ್ಚು ಹೆಚ್ಚಿಗೆ ಉತ್ಪತ್ತಿ ಮಾಡುವುದರಿಂದ ಅದರಿಂದ ಸ್ವಲ್ಪ ಮಟ್ಟಿಗೆ ಉತ್ತಮವಾದ ರೇಷ್ಮೆ ಬರುತ್ತದೆ ಅದರಿಂದಲೇ ನಾವು ತೃಪ್ತಿಯಾಗುವುದಿಲ್ಲ. ಇವತ್ತು ಹೆಚ್ಚಿನ ರೀತಿಯಲ್ಲಿ ಸಂಶೋಧನೆ ನಡೆಸಿ ನಿಮಗೆ ಸಹಕಾರ ಮಾಡಬೇಕೆಂದು ಈಗ ತಾನೆ ಒಬ್ಬ ಡೈರಕ್ಟರನ್ನು ಅಲ್ಲಿಗೆ ಹಾಕಿದ್ದೇವೆ. ಈ ಸಂಶೋಧನಗಾಗಿ ಮೈಸೂರು ದೇಶದ ಮತ್ತು ಪರದೇಶದ ತಳಿಗಳನ್ನು ಬೇರೆಬೇರೆಯಾಗಿ ಮಾಡಿದ್ದೇವೆ. ಮೈಸೂರು ತಳಿಯನ್ನು ಕುಣಿಗಲ್ ಮತ್ತು ಬಿಡದಿ ಭಾಗಗಳಲ್ಲಿ ಬೆಳೆಯಬೇಕೆಂದೂ ಬಾವಿಗಳ ಸೌಕರ್ಯ ಮತ್ತು ಇತರ ಸೌಕರ್ಯಗಳನ್ನು ಒದಗಿಸುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ರೇಷ್ಮೆ ಕೈಗಾರಿಕೆಯ ಮೂಲತಃ ಪ್ರಶ್ನೆ ಇರುವುದು ನಮ್ಮ ರಾಜ್ಯದಲ್ಲಿ ಇಲ್ಲಿರುವ ತೊಂದರೆ ಏನೆಂದರೆ, ಮೂಲ ಬೀಜೋತ್ಪತ್ತಿ ಕೇಂದ್ರ ಭದ್ರವಾಗಿಲ್ಲದೇ ಇರುವುದು. ಸೆಕೆಂಡ್ ಸ್ಟೇಜ್ ಸೀಡ್ ಮಲ್ಟಿಪ್ಲಿಕೇಷನ್ ಅವಶ್ಯಕ ಎಂಬುದಾಗಿ ನಾನು ತಿಳಿದಿದ್ದೇನೆ. ಸುಮಾರು 200 ಎಕರೆಗಳಲ್ಲಿ ಅದನ್ನು ಮಾಡಬೇಕೆಂದಿದ್ದೇವೆ. ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಇದ್ದಾಗ ಕೇವಲ 50 ಎಕರೆಗಳಲ್ಲಿ ಇದನ್ನು ಪ್ರಯತ್ನ ಮಾಡಿದರು. ಅವರು

ಉಳಿದ 150 ಎಕರೆಗಳಲ್ಲಿ ಪ್ರಯತ್ನ ಮಾಡಲಿಲ್ಲ. ಅದನ್ನು ಇದುವರೆಗೆ ಡೆವಲಪ್ ಮಾಡದೆ ಕೇವಲ 10 –15 ಎಕರೆಗಳಲ್ಲಿ ಈಗ ಮೂಲಬೀಜವನ್ನು ಒದಗಿಸುವುದಕ್ಕೇ ತೊಂದರೆಯಾಗಿದೆ. ಆದ್ದರಿಂದ ಅದನ್ನು ಬೇಗನೆ ಪರಿಹಾರ ಮಾಡುವ ಕಾರ್ಯಕ್ರಮ ಇದೆಯೋ ಇಲ್ಲವೋ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಮೂಲ ಬೀಜಗಳಲ್ಲಿ ಬಹುವಾಗಿ ಫಾರಿನ್ ಸೀಡುಗಳನ್ನು ಉಪಯೋಗಿಸುತ್ತಿದ್ದೇವೆ. ಈಗ ಅಂಥಾ 24 ಸಣ್ಣ ಫಾರಮ್ಸ್ ಇವೆ. ಮೈಸೂರಿನಲ್ಲಿ 8 ಫಾರಮ್ಸ್ ಇವೆ. ದೊಡ್ಡ ಫಾರಂಗಳಲ್ಲಿ ಇನ್ನೂ ಹೆಚ್ಚು ಉತ್ಪತ್ತಿ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆದ್ದರಿಂದ ಈಗ ಅವರ ವಿತರಣೆಗಳಿಗೆ ಹೋಗದೆ ಮೂಲ ತಳಿಯನ್ನು ಉತ್ಪಾದನೆ ಮಾಡುವುದು ಮುಖ್ಯವಾಗಿದೆ. ಹಣಕಾಸಿನ ತೊಂದರೆಯಾಗಿ ಅದು ಈಗ ಅಲ್ಪ ಸ್ವಲ್ಪವಾಗಿ ನಡೆಯುತ್ತಿದೆ. ಅದರಿಂದ ಉತ್ಸಾಹ ಕಡಿಮೆಯಾಗಿದೆಯೆಂದು ಅಲ್ಲ. ಹಣವನ್ನು ಇದಕ್ಕೆ ಒದಗಿಸಬೇಕೆಂದು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಇಲಾಖೆಗೆ ಹಣವಿಲ್ಲ, ಉಳಿದ ಇಲಾಖೆಗಳಿಗೆ ಹಣವಿದೆಯೇ ?

ಶ್ರೀ ಬಿ. ರಾಚಯ್ಯ.—ಈಗ ಖಾಸಗಿ ಮತ್ತು ಸರ್ಕಾರದ ಕಾರ್ಖಾನೆಗಳು ಇವೆ. ಸರ್ಕಾರದ ಪರವಾಗಿ 46 ಗ್ರೈನ್‌ಡೇಜುಗಳನ್ನು ತೆಗೆದಿದ್ದೇವೆ, 11 ಖಾಸಗೀ ಗ್ರೈನ್‌ಡೇಜುಗಳನ್ನು ತೆಗೆದಿದ್ದಾರೆ. ಇದುವರೆಗೆ 500 ಜನರಿಗೆ ಲೈಸೆನ್ಸ್ ಕೊಟ್ಟಿದ್ದೇವೆ. ನಮ್ಮ ಸಂಸ್ಥಾನದಲ್ಲಿ 10 ಕೋಟಿ ರೂಪಾಯಿಗಳನ್ನು ಪಡೆದು ಇದನ್ನು ಕ್ರಾಸ್ ಬ್ರೀಡ್ ಮೊಟ್ಟೆಗಳನ್ನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆ ಖಾಸಗಿಯವರು ಮತ್ತು ಸರ್ಕಾರದವರು ಈ ಮೊಟ್ಟೆಗಳನ್ನು ಹೆಚ್ಚಿಗೆ ತೆಗೆಯುತ್ತಿದ್ದಾರೆ. ರೋಗರಹಿತವಾದ ಮೊಟ್ಟೆಗಳನ್ನು ಕೊಟ್ಟರೆ ಡಬ್ಬಲ್ ಕ್ರಾಸಿಂಗ್ ಮತ್ತು ಟ್ರಿಬ್ಬಲ್ ಕ್ರಾಸಿಂಗ್ ಮಾಡಿಸಿ ಅವುಗಳ ಶಕ್ತಿಯನ್ನು ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ರಷ್ಯನ್ ಡೆಲಿಗೇಟ್ಸ್ ಬಂದಿದ್ದರು. ಅವರ ಸಹಾಯವನ್ನು ಪಡೆದು ಮಲ್ಬರಿ ರಿಪ್ಲೇಸ್ ಮಾಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಬ್ಯಾಂಕಿನ ಸಹಾಯವನ್ನು ಕೇಳುತ್ತಿದ್ದಾರೆ. ಇರ್ರಿಗೇಷನ್ ವೆಲ್ಸನ್ನು 2 ಲಕ್ಷ 12 ಸಾವಿರ ಎಕರೆಗಳಿಗೆ ಅನುಕೂಲವಾಗುವ ಹಾಗೆ ಮಾಡಬೇಕೆಂದಿದ್ದಾರೆ. 42 ಸಾವಿರ ಎಕರೆಗಳವರೆಗೂ ಅನುಕೂಲವಾಗುವಂತೆ ಬಾವಿಗಳಿಂದ ನೀರು ಬರುತ್ತದೆ. ಇನ್ನೂ ಒಂದು ಲಕ್ಷ 60 ಸಾವಿರ ಎಕರೆಗಳಿಗೆ ನೀರು ಒದಗಿಸುವುದಕ್ಕೆ ಒಂದು ಬೃಹದ್ ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ. ಇದಕ್ಕೋಸ್ಕರ ಮೈಸೂರು ಸ್ಟೇಟ್ ಬ್ಯಾಂಕಿನವರು ಮುಂದೆ ಬಂದಿದ್ದಾರೆ. ಆದರೆ ಸೆಕ್ಯೂರಿಟಿ ಸಿಗದೇ ಇರುವುದರಿಂದ ನಿಧಾನವಾಗುತ್ತಿದೆ. ಅದಕ್ಕೋಸ್ಕರ ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರ ಅವರಿಗೆ ಬ್ಯಾಂಕಿಗೆ ಗ್ಯಾರಂಟಿ ಕೊಟ್ಟು ಹಣ ಸಹಾಯಕ್ಕಾಗಿ ಪ್ರಯತ್ನ ಮಾಡಬೇಕೆಂದು ಸರ್ಕಾರ ಸಿದ್ಧವಾಗಿದೆ. ಅವರಿಗೆ ಸೆಕ್ಯೂರಿಟಿ ಇರಲಿ ಇಲ್ಲದೇ ಇರಲಿ, ತಕ್ಕ ಸೌಕರ್ಯಗಳನ್ನು ಒದಗಿಸಬೇಕು. ಈ ಕಾರಣದಿಂದ ಡೆಲ್ಲಿಗೆ ಹೋಗಿ ಕೇಂದ್ರ ಸರ್ಕಾರದ ಹತ್ತಿರ ಗ್ಯಾರಂಟಿ ಕೊಡುವುದಕ್ಕೆ ಒಪ್ಪಿದ್ದೇನೆ. ನಮ್ಮ ದೇಶದಲ್ಲಿ ಈಗ ರಫ್ತು ಜಾಸ್ತಿಯಾಗುತ್ತಿದೆ. ಜಪಾನಿನಲ್ಲಿ ಅದರ ಉತ್ಪತ್ತಿ ಕಡಿಮೆಯಾಗಿರುವುದರಿಂದ ಅವರು ಇದನ್ನು ಹೆಚ್ಚಿಗೆ ತರಿಸಿಕೊಳ್ಳುತ್ತಾ ಇದ್ದಾರೆ. ಕೇಂದ್ರ ಸರ್ಕಾರದವರು ಇದಕ್ಕೆ ಬೇಕಾದಷ್ಟು ಹಣವನ್ನು ಒದಗಿಸುವುದಕ್ಕೆ ಸಿದ್ಧರಾಗಿದ್ದಾರೆ. 33 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಹಿಂದೆ ಪ್ರೊವೈಡ್ ಮಾಡಿದ್ದು ಈಗ 100 ಕೋಟಿ ರೂಪಾಯಿಗಳನ್ನು ಕೊಟ್ಟು ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರ ನಮ್ಮ ಬ್ಯಾಂಕುಗಳ ಮುಖಾಂತರ ಮತ್ತು ಇಲಾಖೆಗಳ ಮುಖಾಂತರ ಬಾವಿ ಕಟ್ಟಿಸುವುದಕ್ಕೆ ಮಲ್ಬರಿ ರಿಪ್ಲೇಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದರ ಬಗ್ಗೆ ಕಾರ್ಯಕ್ರಮ ನಡೆಯುತ್ತಿದೆ. ಈ ವರ್ಷ ಬೇಸಿಗೆಯಲ್ಲಿ ಒಂದು ಸಾವಿರ ಬಾವಿಗಳನ್ನು ಸ್ಟೇಟ್ ಬ್ಯಾಂಕಿನ ಸಹಾಯದಿಂದ ಮಲ್ಬರಿ ಏರಿಯಾಗಳಲ್ಲಿ ಕಟ್ಟಿಸುತ್ತಿದ್ದಾರೆ.

ಶ್ರೀ ವಿ. ಎಲ್. ಪಾಟೀಲ್.—ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ನಮ್ಮ ಸರ್ಕಾರದವರು ಹೇಳದೇ ಇದ್ದರೂ ಅದನ್ನು ಕೊಡುತ್ತಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ನಮ್ಮ ಸರ್ಕಾರದ ಅಧಿಕಾರಿಗಳಿಂದ ಏನೇನು ಸಹಾಯ ಒದಗಬೇಕೋ, ಎನ್‌ಕಂಬ್ರನ್ಸ್ ಸರ್ಟಿಫಿಕೇಟ್ ಮತ್ತು ಟೆಕ್ನಿಕಲ್ ಫೀಜಬಲಿಟಿ ಒದಗಿಸಬೇಕೋ ಅದನ್ನು ಒದಗಿಸಿ ಕೊಡುತ್ತಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಮುಂದಿನವರ್ಷ 70—71 ನೇ ಸಾಲಿನಲ್ಲಿ ಈ ಬಾಬಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೀರಿ ಎಂಬುದನ್ನು ಹೇಳಿದರೆ ಆಗ ಲೆಕ್ಕ ತೆಗೆದುಕೊಂಡು ನೋಡಬಹುದು.

ಶ್ರೀ ಬಿ. ರಾಚಯ್ಯ.—ನಮ್ಮ ಸರ್ಕಾರದಿಂದ ಕೊಟ್ಟಿರುವ ಹಣ ಕಡಿಮೆ. ಕೆಲವು ಇನ್ಸ್ಟಿಟ್ಯೂಷನ್‌ಗಳಿಂದ, ಫೈನಾನ್ಸ್ ಹೆಚ್ಚಿಗೆ ಪಡೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದೇವೆ. ಬ್ಯಾಂಕಿನವರು ಗ್ಯಾರಂಟಿ ಇಲ್ಲದೆ ಕೊಡುವುದಿಲ್ಲ. ಕೇಂದ್ರಸರ್ಕಾರದವರು ಮಲ್ಬರಿ ಡೆವಲಪ್‌ಮೆಂಟ್‌ಗೋಸ್ಕರ ಗ್ಯಾರಂಟಿ ಕೊಡುತ್ತೇವೆ ದು ಅಷ್ಯೂರೆನ್ಸ್ ಕೊಟ್ಟಿರುವುದರಿಂದ ನಾವು ಆ ರೀತಿ ಮಾಡುತ್ತಿದ್ದೇವೆ.

Sri H. SIDDAVEERAPPA.—You could have taken aid from the Planning Commission.

Sri R. DAYANANDA SAGAR.—The Central Government was willing to give sufficient amount to the State Government for this scheme. Is it not a fact ?

ಶ್ರೀ ಬಿ. ರಾಚಯ್ಯ.—11 ಕೋಟಿ ರೂಪಾಯಿಗಳನ್ನು ಕೇಂದ್ರ ಸರಕಾರದವರು ಸೆರಿಕಲ್ಚರ್ ಡೆವಲಪ್‌ಮೆಂಟ್‌ಗೋಸ್ಕರ ಕೊಡುವುದಕ್ಕೆ ಒಪ್ಪಿದ್ದಾರೆ. ಅದರಲ್ಲಿ ಮೈಸೂರು ಸರಕಾರದವರು 5 ಕೋಟಿ ರೂಪಾಯಿಗಳ ಮ್ಯಾಚಿಂಗ್ ಗ್ರಾಂಟನ್ನು ಒದಗಿಸಿಕೊಡಬೇಕಾಗಿದೆ. ದೇವರಾಜ ಅರಸರವರ ಕಾಲದಲ್ಲಿಯೂ ಅದನ್ನು ಒದಗಿಸಿಕೊಡುವುದಕ್ಕೆ ಆಗಲಿಲ್ಲ, ಸಿದ್ದವೀರಪ್ಪನವರ ಕಾಲದಲ್ಲಿಯೂ ಒದಗಿಸಿಕೊಡುವುದಕ್ಕಾಗಲಿಲ್ಲ. ಇನ್ನು ಕಳೆದ ಸಾರಿ ಒಂದು ವರ್ಷ ಟೈಂ ಕೊಡಿ ಎಂದು ಕೇಳಿದೆ. ಒಂದು ವರ್ಷದ ಟೈಂನಲ್ಲಿ ಫಿಲೇಚರ್ ನಷ್ಟವನ್ನು ಎಷ್ಟು ರೆಡ್ಯೂಸ್ ಮಾಡಿದ್ದೇವೆ ಎನ್ನುವ ವಿಚಾರ ಹೇಳುತ್ತೇನೆ. 9 ತಿಂಗಳಲ್ಲಿ ಲಾಸ್ ಕಡಿಮೆ ಮಾಡಿದ್ದೇವೆ. 21 ಲಕ್ಷ ರೂಪಾಯಿಗಳು ಮಾತ್ರ ಲಾಸ್ ಆಗಿದೆ ಒಟ್ಟಿನಲ್ಲಿ ಕಡಿಮೆ ಆಗಿದೆ. ಗೂಡಿನ ಬೆಲೆ ಹೆಚ್ಚಾಗಿದೆ. ಮುಖ್ಯವಾಗಿ ಈ ಫಿಲೇಚರಿಂದ ಆಗತಕ್ಕ ಲಾಸ್ ಏನಿದೆ ಅದನ್ನು ಕಡಿಮೆ ಮಾಡುವುದಕ್ಕೆ ಏನೇನು ಪ್ರಯತ್ನ ಮಾಡ ಬೇಕೆಂದು ಸಲಹೆ ಮಾಡಿದ್ದಾರೆ ಅದನ್ನು ಮಾಡುತ್ತೇವೆ. ಕಕೂನ್ ಮಾರ್ಕೆಟ್‌ನಲ್ಲಿ ದಳ್ಳಾಳಿಗಳ ಹಾವಳಿ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಆರ್. ದಯಾನಂದ ಸಾಗರ್.—ಬೇರೆ ಕಡೆ ಎಲ್ಲ ಲಾಭ ಬರುತ್ತದೆ.

ಶ್ರೀ ಬಿ. ರಾಚಯ್ಯ.—ಪಾಂಬಳ್ಳಿಯಲ್ಲಿ ಲಾಭದ ಮಟ್ಟಕ್ಕೆ ಬರುತ್ತಿದೆ. ಸಪರೇಟ್ ಯೂನಿಟ್ ಹಾಕಿರುವುದರಿಂದ ಸ್ವಲ್ಪಮಟ್ಟಿಗೆ ಕಾಂಪಿಟಿಷನ್ ಸ್ಪಿರಿಟ್ ಬರುವಂತೆ ಮಾಡಿದ್ದೇವೆ ಮತ್ತು ಅವಕ್ಕೆ ಒಂದು ಕಾರ್ಪೊರೇಷನ್ ಮಾಡಿ ಅಲ್ಲಿ ಸ್ವಯಂ ಆಡಳಿತ ಪದ್ಧತಿ ಅನುಸರಿಸಬೇಕೆಂಬ ಉದ್ದೇಶ ಸರಕಾರಕ್ಕೆ ಇದೆ. ಮಾರ್ಕೆಟ್ಟಿನಲ್ಲಿ ನಮ್ಮ ಸಿಲ್ಕಿಗೆ ಹೆಚ್ಚಿನ ರೀತಿಯಲ್ಲಿ ಬೆಲೆ ದೊರೆಯುತ್ತಾ ಇರುವುದರಿಂದ ಈ ವರ್ಷ 40 ಸಾವಿರ ಎಕರೆಯಲ್ಲಿ ಮಲಬರಿ ಕಲ್ಟಿವೇಷನ್ ಹೆಚ್ಚಿಸಬೇಕು ಎನ್ನುವ ಉದ್ದೇಶ ಸರಕಾರಕ್ಕೆ ಇದೆ. ಸ್ಪನ್ ಸಿಲ್ಕಿನಿಂದ ಹಿಂದಿನ ವರ್ಷಕ್ಕಿಂತ ಈ ವರ್ಷ ಜಾಸ್ತಿ ಲಾಭ ಬಂದಿದೆ. ಕೊಳ್ಳೆಗಾಲದ ಫಿಲೇಚರ್ ಸಿಲ್ಕ್ ಫ್ಯಾಕ್ಟರಿಯಲ್ಲಿ ಲಾಭ ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವೆಂಕಟರಾಯಪ್ಪ.—ಕೋಲಾರದಲ್ಲಿ ಸರ್ಕಾರಿ ಮಾರ್ಕೆಟ್ ಸ್ಥಾಪನೆ ಆಗಿ ಒಂದು ವರ್ಷವಾಗಿದೆ ಎಷ್ಟು ಗೂಡನ್ನು ವ್ಯಾಪಾರಮಾಡಿದ್ದಾರೆ, ಖಾಸಗಿ ಮಾರ್ಕೆಟ್‌ನಲ್ಲಿ ಎಷ್ಟು ವ್ಯಾಪಾರ ಆಗಿದೆ? ಒಂದು ವೇಳೆ ಸರಕಾರಿ ಮಾರ್ಕೆಟ್‌ನಲ್ಲಿ ವ್ಯಾಪಾರ ಆಗದಿದ್ದರೆ ಈ ತಿದ್ದುಪಡಿಗೆ ಗವರ್ನರ್ ರವರ ಒಪ್ಪಿಗೆ 1969 ರಲ್ಲಿ ಬಂದಿದ್ದರೂ ಇದುವರೆಗೂ ಜಾರಿಗೆ ಕೊಡದೆ ಇರಲು ಕಾರಣ ಏನು ? ರೇಷ್ಮೆ ಸಂಶೋಧನೆ ಇಲಾಖೆ ಕೆಲಸಮಾಡುತ್ತಾ ಇದೆ. ಒಳ್ಳೆಯ ಫಲಿತಾಂಶ ಬಂದಿದೆ ಎಂದು ಹೇಳುತ್ತೀರಿ, ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿಯಲ್ಲಿ ರೇಷ್ಮೆ ಬೆಳೆ ಕೆಡುತ್ತಾ ಇರಲಿಲ್ಲ. ಈ ಸಾರಿ ಸೇಕಡಾ 50 ಭಾಗ ಕೆಡುತ್ತಾ ಇದೆ. ಇದಕ್ಕೆ ಏನು ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕುಣಿಗಲ್ ಏರಿಯಾದಲ್ಲಿ ಕೆಲವು ಕಡೆ ಹುಳುಗಳನ್ನು ಸುಡಿಸಿದ್ದೇವೆ. ಹುಳು ಸಾಕಬಾರದು ಎಂದು ಮುಂಜಾಗ್ರತೆಕ್ರಮವನ್ನು ತೆಗೆದುಕೊಂಡಿದ್ದೇವೆ. ಮೈಸೂರು ಸಂಶೋಧನೆಯಲ್ಲಿ ಎಕ್ಸ್. ಎಸ್. 4 ಮತ್ತು ಎಕ್ಸ್. ಎಸ್. 3 ಹೊಸ ತಳಿಗಳನ್ನು ಮಾಡಿ ಆಗಲೇ ಪ್ರಚಾರ ಮಾಡುತ್ತಿದ್ದೇವೆ. ಉತ್ತಮ ಗೂಡು ಬರುತ್ತಿದೆ. ಖಾಸಗೀ ಮಾರ್ಕೆಟ್‌ಗಳು ನಡೆಯುತ್ತಿರುವುದು ನಿಜ

ಕಾನೂನಿನಲ್ಲಿ ತೊಡಕು ಇದ್ದು ಕಳೆದ ಸಲ ಶಾಸನ ಸಭೆಯಲ್ಲಿ ತಿದ್ದುಪಡಿ ತಂದು ಮಾನ್ಯ ಸದಸ್ಯರು ಒಪ್ಪಿಗೆ ಕೊಟ್ಟಿದ್ದರಿಂದ ಅದನ್ನು ಜಾರಿಗೆ ತಂದಿದ್ದೇವೆ. ಪೋಲೀಸ್ ಇಲಾಖೆಯವರ ಮತ್ತು ಖಾಸಗೀ ಜನರ ಸಹಕಾರ ಬೇಕಾಗಿದೆ. ಖಾಸಗೀಯಾಗಿ ನಡೆಸುತ್ತಿರುವ ಕರ್ಬ್ ಮಾರ್ಕೆಟ್ಟನ್ನು ನಿಲ್ಲಿಸ ಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಅವರ ಮೇಲೆ ಚಾರ್ಜ್‌ಷೀಟ್ ಹಾಕಬೇಕು, ಇದರಲ್ಲಿ ಕಷ್ಟ ಇರುವುದರಿಂದ, ಪೂರ್ಣವಾಗಿ ಅದನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮಾನ್ಯ ಸಭಾಸದಸ್ಯರ ಮತ್ತು ಇತರರ ಸಹಾಯ ಹೆಚ್ಚಿಗೆ ಬೇಕು ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ರಾಜಶೇಖರ ಮೂರ್ತಿ (ಕೈಗಾರಿಕಾ, ಪ್ರಚಾರ ಮತ್ತು ವಾರ್ತಾ ಶಾಖೆಗಳ ಮಂತ್ರಿಗಳು).—ಸ್ವಾಮಿ, ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸದಸ್ಯರ ಭಾಷಣಗಳನ್ನು ಬಹಳ ಆಸಕ್ತಿಯಿಂದ ಕೇಳಿದ್ದೇನೆ. ಕೆಲವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಕೆಲವರು ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ, ಮತ್ತು ಸತ್ಯಾಂಶಕ್ಕೆ ದೂರವಾದ ಅಪಾದನೆಗಳನ್ನು ಮಾಡಿದ್ದಾರೆ. ಈ ಎಲ್ಲಾ ವಿಷಯಗಳಿಗೂ ಕೂಡ ಉತ್ತರ ಕೊಡಲಿಕ್ಕೆ ಕಾಲ ಸಾಕಷ್ಟು ಇಲ್ಲ. ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಿದ್ಧವೀರಪ್ಪನವರು ಪ್ರಾರಂಭದಲ್ಲಿ ಭಾಷಣ ಮಾಡುತ್ತಾ ಮೈಸೂರು ದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆ ಸಾಕಷ್ಟು ಆಗಿಲ್ಲ, ಸರಕಾರದವರು ಎಲ್ಲಾ ಪ್ಲಾಟ್‌ಫಾರಂಗಳ ಮೇಲೆ ದೊಡ್ಡ ದೊಡ್ಡ ಭಾಷಣ ಮಾಡುತ್ತಾರೆ, ಭಾಷಣದಲ್ಲಿಯೇ ಅವರ ಕಾರ್ಯವಾಗಿದೆ ಎಂದು ಹೇಳಿದರು. ಬಹುಶಃ ಈ ವಿಚಾರವನ್ನು ಆಳವಾಗಿ ಅಭ್ಯಾಸ ಮಾಡಿದರೆ ಈ ವಾದದಲ್ಲಿ ತಿರುಳಿಲ್ಲ, ಟೊಳ್ಳುವಾದ ಎಂದು ಗೊತ್ತಾಗುತ್ತದೆ. ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ 1958-59ನೇ ಇಸವಿಯಲ್ಲಿ ಪಬ್ಲಿಕ್ ಸೆಕ್ಟರ್ ಇನ್‌ವೆಸ್ಟ್‌ಮೆಂಟ್ 48.43 ಕೋಟಿ ಇದ್ದುದು 1967-68ರಲ್ಲಿ 191.41 ಕೋಟಿಗೆ ಜಾಸ್ತಿಯಾಗಿದೆ. ಅಡಿಷನಲ್ ಇನ್‌ವೆಸ್ಟ್‌ಮೆಂಟ್ ಪಬ್ಲಿಕ್ ಸೆಕ್ಟರ್‌ನಲ್ಲಿ 142.98 ಕೋಟಿ; ಪ್ರೈವೇಟ್ ಸೆಕ್ಟರ್‌ನಲ್ಲಿ 1958-59 ರಲ್ಲಿ ಇನ್‌ವೆಸ್ಟ್‌ಮೆಂಟ್ 27.75. 967-68 ರಲ್ಲಿ 132.61 ಕೋಟಿ; ಅಡಿಷನಲ್ ಇನ್‌ವೆಸ್ಟ್‌ಮೆಂಟ್ ಇನ್ ಪ್ರೈವೇಟ್ ಸೆಕ್ಟರ್ 104.86 ಕೋಟಿ ಒಟ್ಟು ಪಬ್ಲಿಕ್ ಸೆಕ್ಟರ್ ಮತ್ತು ಪ್ರೈವೇಟ್ ಸೆಕ್ಟರ್ ಟೋಟಲ್ ಮಾಡಿದರೆ. 1958-59 ರಲ್ಲಿ 76.18 ಕೋಟಿ ಮತ್ತು 1967-68ರಲ್ಲಿ 324.02 ಕೋಟಿ ಜಾಸ್ತಿಯಾಗಿದೆ. Additional investment in both public and private sectors in the course of ten years 247.[illegible]7 ಕೋಟಿ ಜಾಸ್ತಿ ಆಗಿದೆ. ಕೈಗಾರಿಕೆ ತೆಗೆದುಕೊಳ್ಳುವಾಗ ಲಾರ್ಜ್ ಅಂಡ್ ಮೀಡಿಯಂ ಇಂಡಸ್ಟ್ರೀಸ್, 25 ಲಕ್ಷಕ್ಕಿಂತ ಜಾಸ್ತಿ ಇನ್‌ವೆಸ್ಟ್‌ಮೆಂಟ್ ಆಗಿರತಕ್ಕ ಇಂಡಸ್ಟ್ರೀಸ್ ಮಾತ್ರ ತೆಗೆದುಕೊಂಡಿದ್ದೇವೆ. 10 ವರ್ಷಗಳಲ್ಲಿ ಪ್ರೈವೇಟ್ ಸೆಕ್ಟರ್ ಪಬ್ಲಿಕ್ ಸೆಕ್ಟರ್ ಇನ್‌ವೆಸ್ಟ್‌ಮೆಂಟ್ ಜಾಸ್ತಿಮಾಡಿರುವುದು ಇದರಿಂದ ಖಚಿತವಾಗಿ ಗೊತ್ತಾಗುತ್ತದೆ. ಅಷ್ಟೇ ಅಲ್ಲ ಈ ಎರಡು ವರ್ಷಗಳಲ್ಲಿ ಹಿಂದೆ ಎಂದೂ ಆಗದಂಥ ಅದ್ಭುತವಾಗಿ ಕೈಗಾರಿಕೆ ಬೆಳವಣಿಗೆ ಆಗಿದೆ ಅದಕ್ಕೆ ಅಂಕಿ ಅಂಶಗಳನ್ನು ಸಹ ಕೊಡುತ್ತೇನೆ. 1968 ರಿಂದ 1970ರ ವರೆಗೆ ಪಬ್ಲಿಕ್ ಸೆಕ್ಟರ್ ಹೊಸದಾಗಿ ಇನ್‌ವೆಸ್ಟ್ ಆಗಿರತಕ್ಕದ್ದು, ಪ್ರೊಡಕ್ಷನ್ ಹೋಗಿರತಕ್ಕದ್ದು, ಎಕ್ಸ್‌ಪಾನ್‌ಷನ್ ಕಂಪ್ಲೀಟ್ ಆಗಿರುವುದು, ಎಕ್ಸ್‌ಪಾನ್‌ಷನ್ ಆಗುತ್ತಾ ಇರುವುದು, ಹೊಸದಾಗಿ ಕೈಗಾರಿಕೆ ತೆಗೆದುಕೊಂಡಿರುವುದು, ಎಲ್ಲಾ ಸೇರಿ ಲಿಸ್ಟ್ ತಯಾರು ಮಾಡಿದ್ದೇವೆ. ಇಂಡಸ್ಟ್ರೀ ವೈಜ್ ಅಂಕಿ ಅಂಶಗಳನ್ನು ಕೊಡುತ್ತೇನೆ ಪಬ್ಲಿಕ್ ಸೆಕ್ಟರ್ 132.3 ಕೋಟಿ, ಪ್ರೈವೇಟ್ ಸೆಕ್ಟರ್ 233.20 ಕೋಟಿ, ಕೋ ಆಪರೇಟಿವ್ ಸೆಕ್ಟರ್ 26 ಕೋಟಿ ಪ್ರಪೋಸಡ್ ಔಟ್‌ಲೇ ಎರಡು ವರ್ಷಗಳಲ್ಲಿ 11 ಕೈಗಾರಿಕೆಗಳಲ್ಲಿ ಕೈಕೊಂಡಿದ್ದೇವೆ. Total capital outlay involved in these industries in three sectors is ......

Sri S. SIVAPPA.—Is it proposed or actual investment?

ಶ್ರೀ ಎಂ. ರಾಜಶೇಖರಮೂರ್ತಿ.—ಪ್ರಪೋಸ್ಡ್ ಇರತಕ್ಕದ್ದು ಬಹಳ ಕಡಿಮೆ. ಅಂಡರ್ ಕನ್‌ಸಿಡರೇಷನ್ 129 ಕೋಟಿ. ಅಕ್ಚುಯಲ್ ಔಟ್‌ಫ್ಲೋ ಕೆಲವಕ್ಕೆ ಇದೆ. ಕೆಲವಕ್ಕೆ ಹೇಳುವುದಕ್ಕಾಗುವುದಿಲ್ಲ. They are at various stages of implementation. It is not possible to give exact figures in regard to those industries. The figure varies. ಎರಡು ವರ್ಷಗಳಲ್ಲಿ 11 ಕೈಗಾರಿಕೆಗಳಲ್ಲಿ ಕೆಲವನ್ನು ತೆಗೆದುಕೊಂಡಿದ್ದೇವೆ. ಕೆಲವನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ಕೆಲವು ಇಂಪ್ಲಿಮೆಂಟ್ ಆಗುತ್ತಾ ಇವೆ. ಎಲ್ಲಾ ಒಟ್ಟು ಸೇರಿ ಇನ್‌ವೆಸ್ಟ್‌ಮೆಂಟ್ 391 ಕೋಟಿ ರೂಪಾಯಿ ಆಗುತ್ತದೆ. ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ಇನ್‌ವೆಸ್ಟ್ ಆಗಿರುವುದು ಹಿಂದೆ ಎಂದು ಆಗಿರಲಿಲ್ಲ. ಕೈಗಾರಿಕೆಗಳು ಸ್ಥಾಪನೆ ಆಗಿಲ್ಲ, ಮಂತ್ರಿಗಳು ಏನೇನೋ ಭಾಷಣ ಮಾಡುತ್ತಿರುತ್ತಾರೆ ಬರೀ ಮಾತಿನಲ್ಲಿ ಹೇಳುತ್ತಿರುತ್ತಾರೆ ಎಂದು ಹೇಳುವುದು ಸತ್ಯಕ್ಕೆ ದೂರವಾದುದು.

ಶ್ರೀ ಕೆ. ಹೆಚ್. ಪಾಟೀಲ್.—391 ಕೋಟಿ ರೂಪಾಯಿನಲ್ಲಿ ಸ್ಟೇಟದು ಎಷ್ಟು, ಸೆಂಟರದು ಎಷ್ಟು, ಜನರಲ್ ಕಾಂಟ್ರಿಬ್ಯೂಷನ್ ಎಷ್ಟು ಎಂದು ಪರ್ಟಿಕ್ಯುಲರ್ಸ್ ಕೊಟ್ಟರೆ ಉಪಕಾರ ವಾಗುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ವರ್ಷ 20 ಲಕ್ಷ ರೂಪಾಯಿಗಳು ಬಜೆಟ್ಟಿನಲ್ಲಿ ಕೊಟ್ಟಿರುವುದು.

1–30 P.M.

ಶ್ರೀಮಾನ್ ಸಿದ್ಧವೀರಪ್ಪನವರು ಭಾಷಣ ಮಾಡುತ್ತಾ, ಇವಕ್ಕೆಲ್ಲಾ ಕ್ಯಾನ್ಸರ್ ತಗಲಿದೆ ಕೆಲವು ಇಂಡಸ್ಟ್ರೀಸ್ ಸಿಕ್ ಆಗಿವೆ, ಕೆಲವು ಲಿಕ್ವಿಡೇಷನ್ ಸ್ಟೇಜ್‌ನಲ್ಲಿ ಇವೆ ಎಂದು ಹೇಳಿದರು. ಶ್ರೀಮಾನ್ ಸಿದ್ಧವೀರಪ್ಪನವರು ಹಿಂದೆ ಮಿನಿಸ್ಟರ್ ಆಗಿದ್ದರು, ಇವನ್ನೆಲ್ಲಾ ಬಹಳ ಆಳವಾಗಿ ಅಭ್ಯಾಸ ಮಾಡಿದ್ದಾರೆ, ಅಂಥವರ ಬಾಯಿಲ್ಲಿ ಇಂಥಾ ಮಾತು ಬಂತಲ್ಲಾ ಎಂದು ನನಗೆ ಬಹಳ ವ್ಯಸನವಾಗುತ್ತಾ ಇದೆ. ಅವರ ಬಗ್ಗೆ ನನಗೆ ಗೌರವ ಇದೆ, ಅವರ ನನ್ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದರು ಅದಕ್ಕೆ ನಾನು ವಂದಿಸುತ್ತೇನೆ. ಆದರೆ ಕೆಲವು ವಿಚಾರಗಳನ್ನು ಹೇಳುವಾಗ ಪ್ರೊಡಕ್ಟಿವಿಟಿ ಆಫ್ ಇಂಡಸ್ಟ್ರಿ, ವರ್ಕಿಂಗ್ ರಿಸೋರ್ಸಸ್ ಆಫ್ ಇಂಡಸ್ಟ್ರೀಸ್ ಬಗ್ಗೆ ನಿಜವಾದ ಅಂಶ ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ, ಚೆನ್ನಾಗಿ ತಿಳಿದುಕೊಂಡಿರತಕ್ಕವರ ಬಾಯಲ್ಲಿ ಈ ರೀತಿ ಟೀಕೆ ಬಂತಲ್ಲಾ ಎಂದು ವ್ಯಸನವಾಗುತ್ತದೆ. 8 ಇಂಡಸ್ಟ್ರೀಸ್‌ನಲ್ಲಿ ನಷ್ಟ ವಾಗುತ್ತಾ ಇತ್ತು, ಈ ಸಾಲಿನ ಅವುಗಳ ಪೈಕಿ 3 ಕಂಪೆನಿಗಳಲ್ಲಿ ಲಾಭ ಬಂದಿವೆ. ಅವು ಯಾವುವು ಎಂದರೆ ಮೈಸೂರು ಷುಗರ್ ಕಂಪೆನಿ, ಸ್ಟೇಲ್ಸ್ ಇಂಟರ್‌ನ್ಯಾಷನಲ್—ಇವರಬಗ್ಗೆ ಬಹಳವಾಗಿ ಮಾತನಾಡಿದ್ದಾರೆ ಹೋದ ವರ್ಷ ನಷ್ಟವಾಗುತ್ತಾ ಇದ್ದುದನ್ನು ಈ ಸಾರಿ ಮೇಕ್‌ಅಪ್ ಮಾಡಿ 9 ಲಕ್ಷ ರೂಪಾಯಿ ಲಾಭ ಮಾಡಿದ್ದಾರೆ. ನಾಲ್ಕೂವರೆ ಲಕ್ಷ ರೂಪಾಯಿ ಇನ್‌ಕಂ ಟ್ಯಾಕ್ಸ್ ಕೊಟ್ಟಿದ್ದಾರೆ. ಮೈಸೂರು ಕ್ರೋಮ್‌ಟ್ಯಾನಿಂಗ್ ಕಂಪೆನಿ ಕೂಡ ಲಾಭ ಮಾಡಿದೆ. ಉಳಿದ ಇಂಡಸ್ಟ್ರೀಸ್‌ಗಳು ಎಂದರೆ ರೆಂಕೋ, ಐರನ್ ಅಂಡ್ ಸ್ಟೀಲ್ ವರ್ಕ್ಸ್, ಎನ್.ಜಿ.ಇ.ಎಫ್, ಈ ರೀತಿ ಉಳಿದ 4 ಫ್ಯಾಕ್ಟರಿಗಳು ಇದಿವೆ ಇವುಗಳಲ್ಲಿ ಈ ವರ್ಷ ನಷ್ಟ ಬಹಳಮಟ್ಟಿಗೆ ಕಡಿಮೆಯಾಗಿದೆ. ಶೇಕಡ ಐವತ್ತಕ್ಕಿಂತ ಹೆಚ್ಚಾಗಿ ನಷ್ಟವನ್ನು ಕಡಿಮೆ ಮಾಡಲಾಗಿದೆ ಎಂದು ಹೇಳುತ್ತಾರೆ. ರೆಂಕೋ, ಮೈಸೂರು ಐರನ್ ಅಂಡ್ ಸ್ಟೀಲ್ ಮತ್ತು ಎನ್. ಜಿ. ಎಫ್ ಈ ಮೂರು ಕಂಪೆನಿಗಳು ಮುಂದಿನ ವರ್ಷ ಲಾಭ ಮಾಡಲಿಕ್ಕೆ ಹೋಗುತ್ತವೆ ಎಂದು ಮಾನ್ಯ ಸದಸ್ಯ ರಿಗೆ ಹೇಳುತ್ತೇನೆ. ಈ ಕಂಪೆನಿಗಳು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನೆಂದರೆ

I want the House to understand the correct reasons why the company is running under a loss. In the first place, the expansion is not yet complete. During 1967-68 and 1968-69 there was heavy capital investment in the company. The fully expended company has not yet gone into production. Then again the ratio between equity and debt gives a distorted picture in the balance sheet. In all other steel companies in the world this ratio is 1:1 but in the case of Mysore Iron & Steel Co. Ltd. it is 2:1. Out of a total investment of Rs. 60 crores, 19 crores is equity capital and 40 crores is the debt. If the company has to pay interest, it has to pay interest on the 40 crores. the depreciation and interest alone is much more than the actual loss the company is incurring. If the fully expanded unit goes into production next year, in the first year this company is going to make a profit. This is not the only company which runs at a loss.

Sri S. SIVAPPA.—Who is responsible for over capitalisation?

Sri M. RAJASEKHARA MURTHY.—Nobody. Take the case of Hindustan Steel. During 1968-69 it has run at a loss. They are all capital-intensive industries.

ಶ್ರೀ ಹಂಜಿ ಶಿವಣ್ಣ.—ಮಾನ್ಯಮಂತ್ರಿಗಳು ಕನ್ನಡದಲ್ಲಿ ಮೊದಲು ಉತ್ತರ ಕೊಡಲು ಪ್ರಾರಂಭ ಮಾಡಿದರು, ಈಗ ಇಂಗ್ಲೀಷಿನಲ್ಲಿ ಕೊಡುತ್ತಾ ಇದ್ದಾರೆ. ಕನ್ನಡದಲ್ಲಿ ಮಾತನಾಡುವುದರಿಂದ ಅವರಿಗೆ ಅಗೌರವವಾಗುವುದಾದರೆ ಮೊದಲೇ ಅವರು ಇಂಗ್ಲೀಷಿನಲ್ಲಿ ಮಾತನಾಡಬಹುದಾಗಿತ್ತು.

ಶ್ರೀ ಎಂ. ರಾಜಶೇಖರಮೂರ್ತಿ.—ಹಿಂದೂಸ್ತಾನ್ ಸ್ಟೀಲ್ ಲಿಮಿಟೆಡ್‌ರವರು ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ಹಾಕಿ ಕೂಡ 1968 ರಿಂದ 69ರ ವರೆಗೂ ನಷ್ಟವಾಗಿದೆ. 1968–69ರ ಕೊನೆವರೆಗೂ 62 ಕೋಟಿ 35 ಲಕ್ಷ 50 ಸಾವಿರ ರೂಪಾಯಿ ನಷ್ಟವಾಗಿದೆ. ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿ, ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪೆನಿ ಇವುಗಳಲ್ಲೆಲ್ಲಾ ಹಾಗೇ ಆಗಿದೆ. ಹೊಸದಾಗಿ ಯಾವುದೇ ಕಂಪೆನಿ ಸ್ಥಾಪನೆಯಾಗಲಿ ಅಲ್ಲಿ ಪ್ರೊಡಕ್ಷನ್ ಚೆನ್ನಾಗಿ ಆಗಿ ಲಾಭ ಬರಬೇಕಾದರೆ 8 ರಿಂದ ಹತ್ತು ವರ್ಷ ಬೇಕು. ಪ್ರಪಂಚದಲ್ಲಿ ಯಾವ ಕಾರ್ಖಾನೆಯ ಚರಿತ್ರೆ ನೋಡಿದರೂ ಕೂಡ ಪ್ರಾರಂಭದಲ್ಲಿ ಲಾಭ ಮಾಡುವುದಕ್ಕೆ ಆಗಿಲ್ಲ. ಮೈಸೂರಿನ ಉತ್ಪಾದನಾ ಕಾರ್ಖಾನೆಗಳು ಇವೆ, ಅಲ್ಲೂ ಕೂಡ ಮೊದಲನೆ ವರ್ಷದಲ್ಲೇ ಲಾಭ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀಮಾನ್ ಸಿದ್ದವೀರಪ್ಪನವರು ಟ್ರೇಡ್ ಏಜೆಂಟ್ ಬಗ್ಗೆ ಮಾತನಾಡಿದರು, ಟ್ರೇಡ್ ಏಜೆಂಟರ ಅವಶ್ಯಕತೆ ಇಲ್ಲ, ಬ್ರಿಟಿಷ್ ಹೈಕಮಿಷನ್ ಇವೆ, ಅವರು ಆ ಕೆಲಸ ಮಾಡಬಹುದು ಎಂದು ಹೇಳಿದರು. ಅವರಿಗೆ ಗೊತ್ತಿದೆ, ಅವರು ಮಂತ್ರಿಗಳಾಗಿದ್ದಾಗ ನಾನೂ ಕೂಡ ಈ ಸಭೆಯಲ್ಲಿ ಸದಸ್ಯನಾಗಿದ್ದೆ. ಅವರ ಕಾಲದಲ್ಲಿ ಟ್ರೇಡ್ ಏಜೆಂಟ್ ಆಫೀಸು ಕಂಟಿನ್ಯೂ ಆಗಬೇಕೇ ಬೇಡವೇ ಎಂಬ ಜಿಜ್ಞಾಸೆ ಬಂದಾಗ ಅವರು ಕೇಂದ್ರಸರ್ಕಾರದವರೊಡನೆ ಬಹಳಮಟ್ಟಿಗೆ ಒತ್ತಾಯ ಮಾಡಿ ಈ ಆಫೀಸು ಕಂಟಿನ್ಯೂ ಆಗಬೇಕೆಂದು ಹೇಳಿದರು.

ಶ್ರೀ ಎಚ್. ಸಿದ್ದವೀರಪ್ಪ.—15 ವರ್ಷ ಆಯಿತು.

ಶ್ರೀ ಎಂ. ರಾಜಶೇಖರಮೂರ್ತಿ.—ಅವರ ಕಾಲದಲ್ಲಿ ಆದಂತಹ ಪತ್ರವ್ಯವಹಾರ ನನ್ನಲ್ಲಿ ಇದೆ. ಅವರು ಒತ್ತಾಯಮಾಡಿ ಕಂಟಿನ್ಯೂ ಆಗಬೇಕೆಂದು ಕೇಂದ್ರಸರ್ಕಾರದವರನ್ನು ಒತ್ತಾಯ ಮಾಡಿದ್ದರ ಮೇಲೆ ಟ್ರೇಡ್ ಏಜೆಂಟರನ್ನು ಕಂಟಿನ್ಯೂ ಮಾಡಿದ್ದಾರೆ, ಅದು ಈಗಲೂ ಕೂಡ ಕಂಟಿನ್ಯೂ ಆಗುತ್ತಾ ಇದೆ.

Sri H. SIDDAVEERAPPA.—Much water has flown under the bridge during this period.

Sri M. RAJASEKHARA MURTHY.—His statements in the letter were not washed away in the stream.

ಶ್ರೀ ಎಸ್. ಶಿವಪ್ಪ.—ಟ್ರೇಡ್ ಏಜೆಂಟ್ ಇರುವುದರಿಂದ ಏನು ಲಾಭ ಇದೆ, ಅದನ್ನು ಹೇಗೆ ಸಮರ್ಥನೆ ಮಾಡುತ್ತೀರಿ ಎಂಬುದನ್ನು ಹೇಳಿ. ಅವರ ಅವಶ್ಯಕತೆ ಇದೆಯೇ ಎಂಬುದನ್ನು ಹೇಳಿ.

Sri M. RAJASEKHARA MURTHY.—To market our goods abroad and to purchase the capital equipment that are needed by our industries we require it.

Sri S. SIVAPPA.—Is there no other agency through which the Government can purchase their requirements?

Sri M. RAJASEKHARA MURTHY.—We will be having no other agency of our own.

Sri S. SIVAPPA.—Can this Government not purchase through other agencies?

Sri M. RAJASEKHARA MURTHY.—What is the harm in having our own agency?

(SRI M. RAJASEKHARA MURTHY)

ಮಾನ್ಯ ಸಿದ್ದವೀರಪ್ಪನವರು ಐ.ಡಿ.ಸಿ. ವಿಚಾರ ಹೇಳಿದರು. 66 ಲಕ್ಷ ರೂಪಾಯಿಗಳನ್ನು ಕಂಪೆನಿ ಕೆಲಸಕಾರ್ಯಗಳಿಗೆ ಕೊಡಲಾಗಿದೆ. ಒಟ್ಟು 24 ಲಕ್ಷ ರೂಪಾಯಿಗಳನ್ನು ಕಮಿಷನ್ ಕೊಡಲಾಗಿದೆ, ಕೆಲವಕ್ಕೆ ಶೇಕಡ 2, ಕೆಲವಕ್ಕೆ ಶೇಕಡ ಒಂದೂವರೆ ಹೀಗೆ ಕೆಲಸದಮೇರೆ ಕೊಡಲಾಗಿದೆ, ಕ್ಯಾಪಿಟಲ್ ಔಟ್‌ಲೇ ನೋಡಿದರೆ. 7 ಪರ್ಸೆಂಟ್ ಪ್ರಕಾರ ಕಮಿಷನ್ ವರ್ಕ್‌ಔಟ್ ಆಗುವುದು. 77 ಸಾವಿರ ಟನ್ ಉಕ್ಕು ತಯಾರುಮಾಡುವ ಕಾರ್ಖಾನೆಗೆ ಕೊಟ್ಟಿರುವುದು ಕನ್‌ಸಲ್‌ಟೆನ್ಸಿಗಾಗಿ ಕೊಟ್ಟಿರುವುದು 24 ಲಕ್ಷ ರೂಪಾಯಿಗಳು ಸ್ಪೆಷಲ್ ಸ್ಟೀಲ್ ತಯಾರುಮಾಡಲು ಕನ್‌ಸಲ್ಟೆಂಟ್ ನೇಮಕಮಾಡಲಾಗಿದೆ.

Sri H. SIDDAVEERAPPA.—Ultimately, it comes to more than 2·2. The Government started like that; ultimately the figure works out to 2·2.

Sri M. RAJASEKHARA MURTHY.—It has to be taken on the total value of the project.

Sri M. SIVAPPA.—The Hon. Minister is giving confusing figures. Commission has not been paid on the total project; it has been paid on certain items. The Government has to calculate only on those items on which commi sion is paid. I also want to know the competency of the Consulting Agency. Have not the Government got experienced technical hands? Is it the first time that such works are handled?

Sri M. RAJASEKHARA MURTHY.—Why does not the hon. Member allow me to complete my speech? I have not yet completed my reply on the subject. ದುರ್ಗಾಪುರದಲ್ಲಿರುವುದು 66 ಸಾವಿರ ಟನ್ ಸ್ಪೆಷಲ್ ಸ್ಟೀಲ್ ಆದರೆ ಕಮಿಷನ್ ಕೊಟ್ಟಿರುವುದು 88 ಲಕ್ಷ ರೂಪಾಯಿ. ನಮ್ಮಲ್ಲಿ 77 ಸಾವಿರ ಟನ್ ಸ್ಟೀಲ್ ತಯಾರುಮಾಡುವುದು ·7 ಪರ್ಸೆಂಟ್ ವರ್ಕ್‌ಔಟ್ ಆಗುವುದು. ಇದನ್ನು ಬಿಲ್ಡಪ್ ಮಾಡಬೇಕು ಎಂದು ಕೇಂದ್ರಸರ್ಕಾರದ ಮಂತ್ರಿಗಳು ಕೂಡ ಹೇಳಿದ್ದಾರೆ, ಇದು ಅವಶ್ಯಕ. ಆ ಕಂಪೆನಿಯಲ್ಲಿ ಐದಾರು ಚೀಫ್ ಎಂಜನಿಯರುಗಳಿದ್ದಾರೆ, ಅವರಿಗೆ ಸಾಕಷ್ಟು ಅನುಭವವಿದೆ.

ಶ್ರೀ ಎಸ್. ಶಿವಪ್ಪ.—ಅವರಿಗೆ ಸ್ಟೀಲ್ ಫ್ಯಾಕ್ಟರಿ ನಡೆಸಿರುವ ಅನುಭವವೇನಿದೆ?

ಶ್ರೀ ಅಬ್ದುಲ್ ಖುದ್ದೂಸ್ ಅನ್ವಾರ್.—ಇಲಾಖೆ ಎಂಜನಿಯರುಗಳೇನು ಮಾಡುತ್ತಿದ್ದಾರೆ?

Mr. SPEAKER.—At every word and sentence, if Members go on Interrupting the Minister's Speech how could he reply?

Sri H. SIDDAVEERAPPA.—I have got the Audi Report (commercial) 1970 with me. Under the heading 'Performance', it is stated that the commission was expected to be 0·75 per cent but it actually worked out to 2·2 per cent. They wanted 7. 73 lakhs but now it has come to Rs. 31.60 lakhs.

Sri M. RAJASEKHARA MURTHY.—Originally the cost of the project was Rs. 10 7 crores; subsequently it came to Rs. 32 crores. He is calculating on Rs. 10·7 crores; it should be calculated for the revised project and not for the original project. The Department has given full clarifications.

Sri S. SIVAPPA.—The only course left to us is to demand a judicial enquiry. Bhadravathi Iron & Steel Ltd., is a premier factory. The Hon. Minister is not giving convincing answers and is confusing the House; we are not satisfied by his answer. There is an authenticated

Audit Report on this. This House is not going to be satisfied unless there is judical enquiry.

Mr. SPEAKER.—The Hon. Member has to take the answer for what it is worth.

Sri S. SIVAPPA.—Crores of rupees are involved here and the Government is hesitating to face a judicial enquiry.

Sri M. RAJASEKHARA MURTHY.—There is no need for a judicial enquiry for this. There is nothing wrong in it. The hon. Members referred to M.S.K. Mills also. It was on the point of being closed for want of working capital. ಅನೇಕ ಕೂಲಿಕಾರರಿಗೆ ತೊಂದರೆಯಾಗುವುದೆಂಬ ಉದ್ದೇಶದಿಂದ ಸರ್ಕಾರ ಅದಕ್ಕೆ ಸಾಲ ಮತ್ತು ಗ್ಯಾರಂಟಿ ಕೊಟ್ಟು ನಡೆಸಬೇಕಾಯಿತು. ಸರಕಾರ ಹಣ ಸಹಾಯಮಾಡದಿದ್ದರೆ ಆ ಕಾರ್ಖಾನೆ ಮುಚ್ಚಲ್ಪಟ್ಟು ಅನೇಕ ಕೂಲಿಗಳು ಹೊಟ್ಟೆಗಿಲ್ಲದೆ ಬೀದಿಯಲ್ಲಿ ಅಲೆಯಬೇಕಾಗಿ ಬರುತ್ತಿತ್ತು. ಆ ದೃಷ್ಟಿಯಿಂದ ಹಣ ಸಹಾಯ ಮಾಡಲಾಗಿದೆ, ಅದು ನಡೆಯುತ್ತಿದೆ. ಈಗ ಹೊಸಬರು ಬಂದು ಚೆನ್ನಾಗಿ ನಡೆಸುತ್ತಿದ್ದಾರೆ, ಅದನ್ನು ಎಕ್ಸ್‌ಪ್ಯಾಂಡ್ ಮಾಡಬೇಕು, ರಿನೋವೇಟ್ ಮಾಡಬೇಕು ಎಂದು ಯೋಚನೆಮಾಡುತ್ತಿದ್ದಾರೆ, ಅದಾದನಂತರ ಲಾಭದಾಯಕವಾಗುವುದು.

ಎಸ್ಟಿಮೇಟ್ಸ್ ಕಮಿಟಿ ವರದಿಯ ವಿಚಾರ ಕೆಲವರು ಪ್ರಸ್ತಾಪಮಾಡಿದರು, ಅದರಮೇಲೆ ಕೈಕೊಂಡಿರುವ ಕ್ರಮವೇನು ಎಂದು ಕೇಳಿದರು. ಅದನ್ನು ಅನುಭವವಿರುವ ಆಫೀಸರುಗಳಿಗೆ ಕಳಿಸಿ ಅದನ್ನು ಓದಿ ವರದಿಮಾಡುವಂತೆ ತಿಳಿಸಿತ್ತು, ವರದಿಮಾಡಿದ್ದಾರೆ. ಆ ವಿಚಾರವೆಲ್ಲಾ ಮುಂದಿನ ಬೋರ್ಡ್ ಮೀಟಿಂಗಿನಲ್ಲಿ ಬರುವುದು, ಕಂಪೆನಿಯ ಹಿತದೃಷ್ಟಿಯಿಂದ ಒಳ್ಳೆಯ ಸಲಹೆಗಳೇನಿವೆ ಅವನ್ನು ಕಾರ್ಯಗತಮಾಡಲು ಸಿದ್ಧವಾಗಿದ್ದೇವೆ.

ಈ ವರ್ಷ ಬೆಂಗಳೂರಿನಲ್ಲಿ ಒಂದು ಪ್ರಿಇನ್‌ಸ್ಪೆಕ್ಷನ್ ಸೆಂಟರನ್ನು ತೆರೆದಿದ್ದೇವೆ ಇದುವರೆಗೆ ಮೈಸೂರಿನಿಂದ ಹೊರಗಡೆಗೆ ಎಕ್ಸ್‌ಪೋರ್ಟ್ ಮಾಡಬೇಕಾದರೆ ಸಾಮಾನು ಮದ್ರಾಸಿಗೆ ಹೋಗಬೇಕಾಗಿತ್ತು. ಎಕ್ಸ್‌ಪೋರ್ಟ್ ಮಾಡಲು ಅನುಕೂಲವಾಗಲೆಂದು ರಾಜ್ಯ ಸರಕಾರ ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಿ ಈಗ ಬೆಂಗಳೂರಿನಲ್ಲೇ ಒಂದು ಸೆಂಟರ್ ಓಪನ್ ಮಾಡಿರುವುದರಿಂದ ರಫ್ತು ಮಾಡುವುದಕ್ಕೆ ಅನುಕೂಲವಾಗಿದೆ.

ಇದಲ್ಲದೆ ಇಲ್ಲಿ ಇಂಡಿಯನ್ ಸ್ಟ್ಯಾಂಡರ್ಡ್ ಇನ್‌ಸ್ಟಿಟ್ಯೂಟ್ ಎಂಬ ಸ್ಪೆಷಲ್ ಸೆಂಟರನ್ನು ಓಪನ್ ಮಾಡಿದ್ದೇವೆ. ಅಲ್ಲಿ ಕೆಲವು ಮಾಡಲ್ ಮಾಡುವರು ಮಾಲು ತಯಾರು ಮಾಡುವರು, ಇದರಿಂದ ಕ್ವಾಲಿಟಿ ಕಂಟ್ರೋಲ್ ಮಾಡಲು ಬಹಳಮಟ್ಟಿಗೆ ಕಂಪೆನಿಗಳಿಗೆ ಅನುಕೂಲವಾಗಿದೆ, ಐ.ಎಸ್.ಐ. ಸ್ಟ್ಯಾಂಡರ್ಡ್ ಇದ್ದರೆ ಮಾರುಕಟ್ಟೆಯಲ್ಲಿ ಅನುಕೂಲವಾಗುವುದು, ಫಾರಿನ್ನಿಗೆ ರಫ್ತು ಮಾಡಲು ಅನುಕೂಲವಾಗುವುದು. ಈ ಇನ್‌ಸ್ಟಿಟ್ಯೂಟ್ ಬೆಂಗಳೂರಿಗೆ ಬಂದುದರಿಂದ ಬಹಳ ಸಹಾಯವಾಗಿದೆ.

ಹೊರಗಡೆಯಿಂದ ಬರುವ ಎಂಟರ್‌ಪ್ರಿನ್ಯುಯರ್ಸ್‌ಗೆ ಅನುಕೂಲವಾಗಲೆಂದು ಒಂದು ಇನ್‌ಫರ್ಮೇಷನ್ ಸೆಂಟರನ್ನು ತೆರೆಯಲಾಗಿದೆ. ಅದರಿಂದ ಕೈಗಾರಿಕಾ ಇಲಾಖೆಗೆ ಮಾತ್ರವಲ್ಲದೆ ಇತರ ಇಲಾಖೆಗಳಿಗೆ ಸಂಬಂಧಪಟ್ಟಂತೆಯೂ ಅನುಕೂಲವಾಗುವುದು, ಮುನಿಸಿಪಲ್ ಲೈಸೆನ್ಸ್, ಕಾರ್ಖಾನೆ ಲೈಸೆನ್ಸ್, ಮುಂತಾದುವನ್ನು ಹೇಗೆ ಪಡೆಯಬೇಕು, ಮಾರಾಟತೆರಿಗೆಗೆ ಬೇಕಾದ ಫಾರಂ ಎಲ್ಲಿ ಸಿಕ್ಕುವುದು ಮುಂತಾದ ಎಲ್ಲ ಸಮಾಚಾರಗಳನ್ನೂ ಈ ಸೆಂಟರ್ ಒದಗಿಸುವುದು ಫಾರಂಗಳನ್ನು ಉಚಿತವಾಗಿ ಒದಗಿಸುವುದು. ಇದಲ್ಲದೆ ಕೈಗಾರಿಕೆಗಳ ಬಗ್ಗೆ ಅಂಕಿಅಂಶ ಶೇಖರಿಸಲು ಮತ್ತು ಅದನ್ನು ಅಪ್‌ಟುಡೇಟ್ ಮಾಡಲು ಪ್ರಯತ್ನಮಾಡಲಾಗಿದೆ. ಕೈಗಾರಿಕೆಗಳಲ್ಲಿ ಮ್ಯಾನೇಜ್‌ಮೆಂಟ್ ಮುಖ್ಯವಾದುದು, ಅದು ಎಷ್ಟು ಚೆನ್ನಾಗಿದ್ದರೆ ಅಷ್ಟು ಲಾಭದಾಯಕವಾಗುವುದು. ಇದಕ್ಕಾಗಿ ಡೆಪ್ಯುಟೇಷನ್ ಬೇಸಿಸ್‌ಮೇಲೆ ಆಫೀಸರುಗಳು ಕೆಲಸಮಾಡುತ್ತಿದ್ದಾರೆ.

ಅದಕ್ಕೋಸ್ಕರ ಸಪರೇಟ್ ಇಂಡಸ್ಟ್ರಿಯಲ್ ಕೇಡರ್ ಮಾಡಬೇಕೆಂದು ಸರ್ಕಾರದ ಆಲೋಚನೆಯಲ್ಲಿದೆ. ಆದರೂ ಕೂಡ ಅದು ಒಳ್ಳೆಯದೆಂದು ಕಂಡುಬಂದರೆ ಈ ವಿಚಾರದಲ್ಲಿ ಶೀಘ್ರವಾಗಿ ನಾವು ಕಾರ್ಯಕ್ರಮವನ್ನು ತೆಗೆದುಕೊಂಡು ಸಪರೇಟ್ ಇಂಡಸ್ಟ್ರಿಯಲ್ ಕೇಡರ್ ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ,

(SRI M. RAJASEKHARA MURTHY)

ಅನೇಕ ವಿಚಾರಗಳ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅವೆಲ್ಲಕ್ಕೂ ಉತ್ತರ ಕೊಡುವುದಕ್ಕೆ ಕಾಲಾವಕಾಶವಿಲ್ಲ. ಒಂದು ವಿಷಯವನ್ನು ಮಾತ್ರ ನಾನು ಹೇಳುತ್ತೇನೆ. ಶ್ರೀಮಾನ್ ಸಿದ್ಧವೀರಪ್ಪನವರು ಮಾತನಾಡುತ್ತಾ, ಕರ್ನಾಟಕ ಟ್ರೇಡರ್ಸ್ ಮಾಲೀಕರು ಭದ್ರಾವತಿಯ ಕಾರ್ಖಾನೆಯ ಕೆಲವು ಸಾಮಾನುಗಳನ್ನು ಹೊರ ದೇಶಕ್ಕೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಎಂದು ತೆಗೆದುಕೊಂಡು ಅದನ್ನು ಇಂಡಿಯಾದೇಶದಲ್ಲಿಯೇ ಮಾರಾಟ ಮಾಡಿದ್ದಾರೆ ಎಂದು ಹೇಳಿದರು. ಅವರು ಅಲ್ಲಿಂದ ಹೊರ ದೇಶಕ್ಕೆ ಏನೇನು ಎಕ್ಸ್‌ಪೋರ್ಟ್ ಮಾಡಿದ್ದಾರೆ, ಷಿಪಿಂಗ್ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟ ಫಾರಂಗಳು ಬಿಲ್‌ಗಳು ಇವುಗಳನ್ನೆಲ್ಲಾ ತರಿಸಿಕೊಂಡು ನಾವು ನೋಡಿದ್ದೇವೆ. ಅವರು.........

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ ನನಗೆ ಒಂದು ಸ್ಪಷ್ಟೀಕರಣ ಬೇಕಾಗಿದೆ. ನಾನು ಈ ಸಭೆಯಲ್ಲಿ ಇಲ್ಲದೆ ಇರುವಾಗ ಬೇರೆ ಯಾರಾದರೂ ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕು. 41 ಸಣ್ಣ ಕೈಗಾರಿಕೆಗಳಲ್ಲಿ ನಡೆದಿರತಕ್ಕ ವ್ಯವಹಾರಗಳನ್ನು ಟೈಪ್ ಮಾಡಿಸಿ ಮುಖ್ಯ ಮಂತ್ರಿಗಳಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅದರ ಪ್ರತಿ ನನಗೂ ಒಂದು ಬಂದಿದೆ. ಇದರಲ್ಲಿ ಇಬ್ಬರು ಡೈರೆಕ್ಟರು ಇದ್ದಾರೆ. ಮತ್ತು ಜಾಯಿಂಟ್ ಡೈರೆಕ್ಟರೂ ಇದ್ದಾರೆ. ಅವರು ಅದರಲ್ಲಿ ಎಷ್ಟೋ ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ ಎಂದು ಬ್ರೇಕ್ ಅಪ್ ಫಿಗರ್ಸ್ ಕೊಟ್ಟಿದ್ದಾರೆ. ಯಾರು ಅರ್ಜಿಯನ್ನು ಕೊಟ್ಟಿದ್ದಾರೆಯೋ ಅವರು ಅದನ್ನು ಪ್ರೂವ್ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಆದ್ದರಿಂದ ಮುಖ್ಯ ಮಂತ್ರಿಗಳಿಗೆ ಕೊಟ್ಟಿರತಕ್ಕ ಅರ್ಜಿಯಲ್ಲಿ ಅದಕ್ಕೆ ಸಂಬಂಧಪಟ್ಟವರು ಏನೇನು ಆಪಾದನೆಗಳನ್ನು ಮಾಡಿದ್ದಾರೆ ಅದನ್ನು ವಿಚಾರಣೆ ಮಾಡಬೇಕು. ಸತೀಸ್‌ಚಂದ್ ಎನ್ನತಕ್ಕ ಡೈರೆಕ್ಟರು ಒಬ್ಬರು ಇದ್ದಾರೆ. ಅವರ ಬಗ್ಗೆ 4—5 ಪುಟಗಳಷ್ಟು ಬರೆದಿದ್ದಾರೆ. ಇದನ್ನು ವಿಚಾರ ಮಾಡಬೇಕು. ಈ ಆಪಾದನೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳಿದರೆ ಒಳ್ಳೆಯದು. ಸ್ಪೆಸಿಫಿಕ್ ಆಗಿ ಯಾರಾದರೂ ಚಾರ್ಜಸ್ ಮಾಡಿದರೆ, ಅದನ್ನು ಅವರು ಪ್ರೂವ್ ಮಾಡಿದರೆ ಅದನ್ನು ನಾನು ವಿಚಾರ ಮಾಡುತ್ತೇನೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಇದು ಒಂದು ವಿಚಾರ ಮಾಡಬೇಕಾದಂತಹ ವಿಷಯ.

ರೆಂಕೋ ಫ್ಯಾಕ್ಟರಿಯನ್ನು ಮಾರಾಟ ಮಾಡುತ್ತಾರೆ ಎನ್ನುವ ಊಹಾಪೋಹ ಎದ್ದಿದೆ. ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡಬೇಕು. ಶ್ರೀಮಾನ್ ಕೊರಾವಲೆಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷರಾಗಿದ್ದಾಗ ಕೈಗಾರಿಕೆಯ ಬಗ್ಗೆ ಕೆಲವು ವಿಷಯಗಳನ್ನು ಆಡಿಟ್ ರಿಪೋರ್ಟ್‌ನಲ್ಲಿ ಬರೆದಿದ್ದಾರೆ. ಕೇಂದ್ರದಲ್ಲಿ ಇದ್ದಹಾಗೆ ಇಲ್ಲಿಯೂ ಕೂಡ ಶ್ರೀಮಾನ್ ಫೋರ್ಪಡೆಯವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯನ್ನು ಮಾಡಬೇಕು, ಅವರು ಪಬ್ಲಿಕ್ ಸೆಕ್ಟರ್ ಕೈಗಾರಿಕೆಗಳ ಕೆಲಸಗಳನ್ನು ವಿಚಾರಣೆ ಮಾಡಿ ಒಂದು ವರದಿಯನ್ನು ಕೊಡಬೇಕು, ಎಂದು ಶ್ರೀಮಾನ್ ಕೊರಾವಲೆಯವರು ಬರೆದಿದ್ದರು. ಆ ಕಮಿಟಿಯನ್ನು ಮಾಡಿ ಅವರಿಗೆ ಕೊಡಬೇಕಾದ ಸ್ಟಾಫ್ ವಗೈರೆಯನ್ನು ಕೊಟ್ಟಿದ್ದಾರೆಯೋ ಏನೋ ಗೊತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ಕೊಡಬೇಕಾದ ಸ್ಟಾಫ್ ಅನ್ನು ಕೊಟ್ಟಿದೆ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ರಾಜ್ಯದಲ್ಲಿ ಸಾಕಷ್ಟು ಕೈಗಾರಿಕೆಯನ್ನು ಅಭಿವೃದ್ಧಿ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಕೈಗಾರಿಕೋದ್ಯಮಿಗಳನ್ನು ಆಹ್ವಾನ ಮಾಡುವುದಕ್ಕೆ ನಮ್ಮ ಸರ್ಕಾರದವರು ಮುಂಬೈ ಮತ್ತು ಕಲ್ಕತ್ತಾಕ್ಕೆ ಹೋಗುವುದನ್ನು ನಾನು ಒಪ್ಪುವುದಿಲ್ಲ. ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಅವುಗಳನ್ನು ಅಭಿವೃದ್ಧಿ ಮಾಡದೇ ಹೋದರೆ ನಿರುದ್ಯೋಗವನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ಅದು ಬಹಳ ಕಷ್ಟವಾಗುತ್ತದೆ. ಈಗ ನಮ್ಮಲ್ಲಿರುವ ಕೈಗಾರಿಕೆಗಳಲ್ಲಿ ಲುಕ್ಸಾನು ತೋರಿಸಿ ಅವುಗಳನ್ನು ಬೇರೆಯವರಿಗೆ ಮಾರಾಟಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಸಮಾಜವಾದದ ಹೆಸರಿನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಅದರಲ್ಲಿ ಫೇಲಾಗಿದ್ದಾರೆ. ಇದು ಆಡಳಿತದ ಅದಕ್ಷತೆಯನ್ನು ಅವಲಂಬಿಸಿದೆ.

ಈಗ 41 ಜನ ಕೈಗಾರಿಕೋದ್ಯಮಿಗಳು ಏನು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಈ ಕೈಗಾರಿಕೆ ಇಲಾಖೆಯ ಜಾಯಿಂಟ್ ಡೈರೆಕ್ಟರು 5 ಸಾವಿರ ರೂಪಾಯಿಗಳಿಂದ 30 ಸಾವಿರ

ರೂಪಾಯಿಗಳವರೆಗೂ ಲಂಚವನ್ನು ಪಡೆದುಕೊಳ್ಳುತ್ತಾರೆ ಎಂದು ಅರ್ಜಿಯಲ್ಲಿ ಬರೆದಿದ್ದಾರೆ. ಹೀಗಿರುವಾಗ ಇಂಥಾದ್ದನ್ನು ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಪಬ್ಲಿಕ್ ಎಜಿಟೇಷನ್ ಆಗಬಹುದು ಎನಿಸುತ್ತದೆ. ಅವರು ಸ್ಪೆಸಿಫಿಕ್ ಆಗಿ ಅಲಿಗೇಷನ್ ಮಾಡಿದ್ದಾರೆ. ಅವರು ತಮ್ಮ ಅರ್ಜಿಯಲ್ಲಿ ಬರೆದಿದ್ದಾರೆ ಆ ಬಗ್ಗೆ ನಾವು ಸಾಕ್ಷಿ ಹೇಳುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದ್ದಾರೆ. ಅವರು ಎಲ್ಲಾ ವಿಷಯಗಳನ್ನು ತಿಳಿದು ಅರ್ಜಿಯನ್ನು ಬರೆದಿದ್ದಾರೆ. ಆದ್ದರಿಂದ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಾಗಲೀ ಅಥವಾ ಶ್ರೀಮಾನ್ ರಾಜಶೇಖರ ಮೂರ್ತಿಯವರಾಗಲೀ ಉತ್ತರ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇವೆ.

Sri K. H. PATIL.—Sometimes the allegations are so serious that even the Minister concerned is not in a position to reply. In such matters I request that the matter should be investigated by the Chief Minister. It is the Chief Minister alone who can reply to Sri Gopala Gowda and none else.

2-00 P.M.

Sri M. RAJASEKHARA MURTHY.—The reason for REMCO incurring loss is because of accumulation of meters which were laying unsold. They having 8 lakhs metres which were not sold ; 5 Units were closed and only 3 units were working. Now the prices have gone up and next year it is possible to reach break-even point Even the General Body has requested the Board and the Government, to take effective steps in this direction, and see the losses are avoided. The Managing Director has recommended some arrangement to be made. Due to the action taken, and higher prices of Metres the Factory is going to get profit. Formerly we thought there was no need to take further action. We moved the Government of India to take over, so that we can do something. But the Government of India was not willing to take it over. Now it will be continued as it is and there is no question of giving it away to private sector. It will be continued as a public Sector Industry. The Company is slowly recovering. With this reply, I request the Hon. Members to vote unanimously.

ಶ್ರೀ ಎ. ಪಿ. ಅಪ್ಪಣ್ಣ (ಕೈಗಾರಿಕೆ ಶಾಖೆಯ ಉಪಮಂತ್ರಿಗಳು).—ಮಾನ್ಯ ಸಭಾಪತಿಗಳೇ, ನಾನು ಬರೀ ಸಣ್ಣ ಕೈಗಾರಿಕೆ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಈ ಸಭೆಯ ಚರ್ಚೆಯಲ್ಲಿ ಭಾಗವಹಿಸಿದ ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ಚೆನ್ನಾಗಿ ಮಾತನಾಡಿದ್ದು ಕಂಡು ಬರುವುದಿಲ್ಲ. ಅಲ್ಲದೆ ಸಮಯದ ಅಭಾವ ಕೂಡ ಈಗ ಇದೆ. ಶ್ರೀಮಾನ್ ಜ್ವಾಲಯ್ಯನವರು ಒಂದು ಮಾತು ಒತ್ತಿ ಹೇಳಿದರು. ಸಣ್ಣ ಕೈಗಾರಿಕೆ ವಿಚಾರದಲ್ಲಿ ಬಹಳ ಕಡಿಮೆ ಹಣ ಒದಗಿಸಿದೆ, ದೊಡ್ಡ ಕೈಗಾರಿಕೆಗೆ ಹೆಚ್ಚು ಹಣ ಕೊಡುತ್ತಾರೆ, ಆದುದರಿಂದ ಸಣ್ಣ ಕೈಗಾರಿಕೆ ಸರಿಯಾಗಿ ಪ್ರಗತಿಯಾಗುತ್ತಿಲ್ಲ ಎಂದು ಅವರು ಆಪಾದನೆ ಮಾಡಿದರು. ನಾವು ಸಣ್ಣ ಕೈಗಾರಿಕೆಯ ಪ್ರಗತಿ ಪರಿಶೀಲಿಸಿ ನೋಡುವಾಗ ಬಡ್ಜೆಟ್ಟಿನಲ್ಲಿ ಎಷ್ಟು ಹಣ ಕೊಡುತ್ತೇನೆ ಎಂಬ ದೃಷ್ಟಿಯಿಂದ ಅದನ್ನು ನೋಡಿದರೆ ಅದು ಸಾಲದು. ಕೇಂದ್ರ ಸರಕಾರದಿಂದ ಬರುವ ಹಣ, ರಾಜ್ಯ ಸರಕಾರ ಸ್ಥಾಪಿಸಿದ ಅನೇಕ ಕಾರ್ಪೊರೇಷನ್ನಿನಿಂದ ಬರುವ ಹಣ ಒಟ್ಟಿಗೆ ತೆಗೆದುಕೊಂಡರೆ, ಈ ಭಾಗಕ್ಕೆ ಹರಿಯುವ ಹಣ ಹೆಚ್ಚಾಗಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ವರ್ಷ 1969—70ರಲ್ಲಿ ಸ್ಟೇಟ್ ಏಡ್ ಇಂಡಸ್ಟ್ರೀಸ್‌ಗೆ 28 ಲಕ್ಷ ರೂ. ಕೊಟ್ಟಿದ್ದಾರೆ ಫೈನಾನ್ಸ್ ಕಾರ್ಪೊರೇಷನ್ನಿನಿಂದ 60 ಲಕ್ಷ ರೂಗಳನ್ನು ಸಣ್ಣ ಕೈಗಾರಿಕೆಗೆ ಸಾಲ ಕೊಟ್ಟಿದ್ದಾರೆ. ಇದಲ್ಲದೆ ಬ್ಯಾಂಕ್ ಮೂಲಕ 10 ಕೋಟಿ ಸಣ್ಣ ಕೈಗಾರಿಕೆಗೆ ಕೊಟ್ಟಿರುವುದು ಕಡಿಮೆಯಾಗಲಾರದು. ಸಣ್ಣ ಕೈಗಾರಿಕೆಯ ಪ್ರಯೋಜನಕ್ಕೆ ಕೇಂದ್ರ ಸರಕಾರ ನಿರ್ಮಿಸಿದ ನ್ಯಾಷನಲ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಿಂದ 4.5 ಕೋಟಿ ರೂ. ಬೆಲೆ ಬಾಳುವ ಮೆಷಿನರಿ ಹೈಯರ್

(ಶ್ರೀ ಎ. ಪಿ. ಅಪ್ಪಣ್ಣ)

ಪರ್ಚೇಜ್ ನೋಟ್ ಕೊಟ್ಟಿದ್ದಾರೆ 1969—70ರಲ್ಲಿ 61 ಲಕ್ಷ ರೂಪಾಯಿ ರೆಕಮೆಂಡ್ ಮಾಡಿ ಮೆಷಿನರಿ ಕೊಡಲಿಕ್ಕೆ ಒಪ್ಪಿಕೊಂಡಿದೆಯೆಂಬ ಅಂಶವನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿಯ ಪ್ರಗತಿ ಯಾವ ರಾಜ್ಯಕ್ಕಿಂತಲೂ ಕಡಿಮೆ ಇಲ್ಲ ಎನ್ನುವ ವಿಚಾರವನ್ನು ತಮ್ಮ ಮುಂದೆ ಇಡಲು ಇಚ್ಛೆಪಡುತ್ತೇನೆ. ಈ ಭಾಗಕ್ಕೆ ಎಷ್ಟರ ಮಟ್ಟಿಗೆ ಪ್ರೋತ್ಸಾಹ ಕೊಡಬೇಕೋ ಅಷ್ಟು ಕೊಟ್ಟಿದೆ. ಇವನ್ನು ಇನ್ನೂ ಇಂಟೆನ್ಸಿವ್ ಆಗಿ ಮಾಡುತ್ತೇವೆ. ಕಳೆದ ವರ್ಷ ಎರಡು ಜಿಲ್ಲೆಗಳಲ್ಲಿ ಪ್ರೋತ್ಸಾಹ ಕೊಟ್ಟು ಇದನ್ನು ಇಂಟೆನ್ಸಿವ್ ಆಗಿ ಮಾಡಿದ್ದೇವೆ. ಐದು ವರ್ಷದ ಹಿಂದೆ ನಮ್ಮ ರಾಜ್ಯದಲ್ಲಿ ನಾಲ್ಕು ಸಾವಿರ ಸ್ಮಾಲ್ ಸ್ಕೇಲ್ ಯುನಿಟ್ ಇದ್ದರೆ ಇವತ್ತು ಎಂಟು ಸಾವಿರ ಇವೆ. ಅಂದರೆ ಪ್ರಗತಿ ಡಬ್ಬಲ್ ಆಗಿದೆ ಎಂದು ಹೇಳಬಹುದು. ನಮ್ಮಲ್ಲಿ ನೂರಕ್ಕೆ ನೂರರಷ್ಟು ಪ್ರಗತಿಯಾಗಿದೆ ಎಂದು ನಾನು ಪ್ರತಿಪಾದನೆ ಮಾಡುವುದಿಲ್ಲ. ಇಷ್ಟು ಪ್ರಗತಿ ಸಾಧಿಸಿದ್ದರೂ ಇನ್ನೂ ಪ್ರಗತಿ ಸಾಧಿಸಲಿಕ್ಕೆ ಅವಕಾಶ ಇದೆ. ಪ್ರೈಸ್ ಪ್ರಿಫರೆನ್ಸ್ ವಿಚಾರದಲ್ಲಿ ಹೆಚ್ಚು ಪ್ರೋತ್ಸಾಹ ಕೊಡುತ್ತಿಲ್ಲ ಎಂದು ಶ್ರೀ ಜ್ವಾಲನಯ್ಯನವರು ಒಂದು ಮಾತು ಹೇಳಿದರು. 52 ಐಟಂಗಳು ಸ್ಮಾಲ್ ಸ್ಕೇಲ್ ಸೆಕ್ಟರಿನಲ್ಲಿ ಮಾಡಲಾಗುತ್ತಿದೆ. ಈ ಸಂಖ್ಯೆಯನ್ನು ಇನ್ನೂ ಏರಿಸಬೇಕು ಎಂಬ ವಿಚಾರ ಇದೆ. ಸಣ್ಣ ಕೈಗಾರಿಕೆಯಿಂದ ಹೆಚ್ಚು ಸಾಮಗ್ರಿಗಳನ್ನು ನೇರವಾಗಿ ಖರೀದಿ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ಇನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಶಿವಪ್ಪನವರ, ಶ್ರೀ ಜ್ವಾಲನಯ್ಯನವರ, ಶ್ರೀ ಎಚ್. ಡಿ. ದೇವೇಗೌಡರ ಬಂಧು ಮಿತ್ರರಿಗೆ ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಸರಕಾರ ಕೊಟ್ಟಿದೆ ಎಂಬ ಅಪಾದನೆಯನ್ನು ಶ್ರೀಮಾನ್ ನಂಜೇಗೌಡರು ಮಾಡಿದರು.

ಶ್ರೀ ಎಸ್. ಶಿವಪ್ಪ.—ಆಗ್ಗೆ ನಾನು ಸಭೆಯಲ್ಲಿ ಇರಲಿಲ್ಲ. ಆ ಅಪಾದನೆಯನ್ನು ನಾನು ಚಾಲೆಂಜು ಮಾಡುತ್ತೇನೆ. It is a mischievous allegation. I want to challenge that I want an enquiry to be held. The Hon. Member who has made that allegation may come to my village and verify whether any of my relatives are favoured by Government. On account of my being a M. L. A. my whole family has suffered because I do not like to have any favour from anybody. I do not want to go to their rescue. The hon. Member must accept my challenge for an enquiry. You must hold an enquiry.

ಶ್ರೀ ಎ. ಪಿ. ಅಪ್ಪಣ್ಣ.—ಅವರು ಹೇಳತಕ್ಕ ಮಾತುಗಳಲ್ಲಿ ಅರ್ಥವಿಲ್ಲ ಎಂಬುದನ್ನು ಸಮರ್ಥನೆ ಮಾಡುವುದಕ್ಕೆ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಶ್ರೀಮಾನ್ ದೇವೇಗೌಡರಾಗಲಿ ಜ್ವಾಲನಯ್ಯನವರಾಗಲಿ ಯಾರೂ ಈ ವಿಚಾರದಲ್ಲಿ ಅವರ ಸಂಬಂಧಪಟ್ಟವರಿಗೆ ಇಲ್ಲವೇ ಅವರಿಗೆ ಪರಿಚಯವಿರತಕ್ಕವರಿಗೆ ಕೋಟಾ ಕೊಡಬೇಕೆಂದು ಸರ್ಕಾರದವರ ಮೇಲೆ ಯಾವ ಸಂದರ್ಭದಲ್ಲೂ ಅವರು ಯಾವ ಪ್ರಭಾವವನ್ನೂ ಬೀರಿಲ್ಲ. ಹಾಗೂ ಒಂದು ವೇಳೆ ಅವರ ಇಷ್ಟಮಿತ್ರರಿಗೆ ಏನಾದರೂ ಕೋಟಾ ದೊರೆತಿದ್ದರೆ ಅದು ಸರ್ಕಾರದ ಪ್ರಭಾವದಿಂದ ಖಂಡಿತ ಅಲ್ಲ ಎಂದು ಹೇಳುತ್ತೇನೆ. ಒಂದುವೇಳೆ ವಿರೋಧಪಕ್ಷದ ನಾಯಕರ ತಮ್ಮ ವಿರೋಧಪಕ್ಷದ ನಾಯಕರು ರಾಜಕೀಯಕ್ಕೆ ಪ್ರವೇಶಮಾಡುವ ಮುನ್ನವೇ ಬಹಳ ವರ್ಷಕಾಲಗಳಿಂದ ಈ ತಗಡನ್ನು ತರಿಸಿ ಅವರ ವ್ಯವಹಾರ ಮಾಡುತ್ತಿದ್ದರೆ ಈ ದಿವಸ ಅವರು ವಿರೋಧಪಕ್ಷದ ನಾಯಕರಾಗಿದ್ದುದರಿಂದ ಅವರ ತಮ್ಮನಿಗೆ ಕೋಟಾ ಸಿಕ್ಕಿತು ಎಂದು ವಾದಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾಗಲೀ ಶ್ರೀಮಾನ್ ಜ್ವಾಲನಯ್ಯನವರಾಗಲೀ ಅಥವಾ ಶ್ರೀ ದೇವೇಗೌಡರಾಗಲಿ ಇವರಾರೂ ಸರ್ಕಾರಕ್ಕೆ ಕೋಟಾ ಕೊಡತಕ್ಕ ವಿಚಾರದಲ್ಲಿ ಒತ್ತಾಯ ಮಾಡಲಿಲ್ಲ ಎಂಬುದನ್ನು ನಾನು ಸಾರಿ ಸಾರಿ ಹೇಳುತ್ತೇನೆ. ಆದರೆ ಆಕಸ್ಮಿಕವಾಗಿ ಆ ಕೋಟಾ ದೊರೆತಿರತಕ್ಕವರು ಇಲ್ಲಿನ ಕೆಲವು ಸದಸ್ಯರಿಗೆ ಸಂಬಂಧವುಳ್ಳವರಾಗಿರಬಹುದು. ಆದರೆ ಆ ಸಂಬಂಧವನ್ನು ಗಮನದಲ್ಲಿಟ್ಟು ಸರ್ಕಾರದವರು ಈ ಕೋಟಾ ಕೊಟ್ಟಿಲ್ಲವೆಂದು ನಾನು ಖಚಿತವಾಗಿ ಹೇಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ತಮಗೆ ತಿಳಿಯದಂತೆ ಆ ಸಂಬಂಧೀಕರಿಗೆ ಕೋಟಾ ಸಿಕ್ಕಿರಬಹುದು ಎಂದು ತಾವು ಹೇಳುತ್ತಿದ್ದೀರಲ್ಲವೇ?

ಶ್ರೀ ಎ. ಪಿ. ಅಪ್ಪಣ್ಣ.—ಇರಬಹುದು. ಆದರೆ............

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕರ್ಣಾಟಕ ಟ್ರೇಡರ್ಸಿಗೆ 25 ಲಕ್ಷ ರೂಪಾಯಿಗಳ ಸ್ಟೇಯಿನ್‌ಲೆಸ್ ಸ್ಟೀಲಿನ ಕೋಟಾವನ್ನು ಇಂಪೋರ್ಟು ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶವಿದೆ. ಅವರು ನೂರು ರೂಪಾಯಿಗಳ ಬೆಲೆಯ ಮಾಲನ್ನು 285 ರೂಪಾಯಿಗಳಿಗೆ ಮಾರಾಟ ಮಾಡಿ ಅದರಲ್ಲಿ 85 ರೂಗಳನ್ನು ಅನ್ ಅಕೌಂಟೆಡ್ ಆಗಿ ಪಡೆದು ಉಳಿದ ಹಣವನ್ನು ಅಂದರೆ 200 ರೂಪಾಯಿಗಳನ್ನು ಚೆಕ್ ರೂಪದಲ್ಲಿ ಪಡೆದಿದ್ದಾರೆಂಬ ವಿಷಯ ಎಲ್ಲೆಲ್ಲೂ ಜನಜನಿತವಾಗಿದೆ. ಇದರ ಸತ್ಯಾಂಶವೇನು ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ಹೇಳಬೇಕು.

ಶ್ರೀ ಎ. ಪಿ. ಅಪ್ಪಣ್ಣ.—ಇನ್ನು ಕೆಲವು ನಿಮಿಷಗಳಲ್ಲಿ......

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುವುದಿಲ್ಲವೇ?

ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಗೋಪಾಲಗೌಡರೂ ಮತ್ತು ಎನ್. ಎ. ಚನ್ನೇಗೌಡರೂ ಒಂದು ಮಾತನ್ನು ಹೇಳಿದ್ದಾರೆ; ಅದೇನು ಎಂದರೆ 41 ಜನ ಉದ್ಯಮದಾರರು ಒಟ್ಟಾಗಿ ಸೇರಿಕೊಂಡು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದಾರೆ ಎಂದು. ಆದರೆ ಆ ಕಾಗದದಲ್ಲಿ 41 ಜನರು ರುಜುಮಾಡಿದ್ದಾರೋ ಇಲ್ಲವೋ ಎಂಬ ವಿಷಯ ನನಗೆ ತಿಳಿಯದು. ಆದರೆ ಆ ಕಾಗದದ ಪ್ರತಿ ನನಗೂ ಒಂದು ಬಂದಿದೆ. ಮತ್ತು ಕೈಗಾರಿಕಾ ಸಚಿವರಿಗೂ ಒಂದು ಬಂದಿದೆ. ಆ ಎರಡರಲ್ಲೂ 41 ಜನರ ರುಜುಗಳಿಲ್ಲ. ಹಾಗೆ ಈ ಮಾನ್ಯ ಸಭೆಯ ಸದಸ್ಯರುಗಳಿಗೂ ಕಳುಹಿಸಿರತಕ್ಕ ಕಾಗದದಲ್ಲಿ ರುಜುಗಳಿಲ್ಲ. ಹೀಗೆ ಒಂದು ಆರೋಪಣೆ ಮಾಡುವುದಕ್ಕೆ ಒಂದು ಅವಕಾಶವೂ ಉಂಟು. ಹಿಂದಕ್ಕೆ ಯಾರು ಈ ಕೈಗಾರಿಕೆಯ ಹೆಸರಿನಲ್ಲಿ ಲಾಭಪಡೆಯುತ್ತಿದ್ದರು ಅವರಿಗೆ ಈಗ ಇದರ ಅವಕಾಶ ತಪ್ಪಿದೆ. ಆ ಸಿಟ್ಟಿಗೆ ಹೀಗೆಲ್ಲಾ ಮಾಡುವುದಕ್ಕೆ ಒಂದು ಅವಕಾಶ ಕೆಲವರಿಗುಂಟು. ಅಂಥ ಕೆಲವು ಜನ ಸೇರಿಕೊಂಡು ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್ ಮತ್ತು ಇನ್ನೂ ಕೆಲವು ಅಧಿಕಾರಿಗಳು 5 ಸಾವಿರದಿಂದ 30 ಸಾವಿರದವರೆಗೂ ಲಾಭ ಸಂಪಾದನೆ ಮಾಡುತ್ತಿದ್ದಾರೆಂದು ಬರೆದಿದ್ದಾರೆ. ಕೊನೆಯಲ್ಲಿ ಯುವರ್ಸ್ ಫೈತ್‌ಫುಲ ಅಷ್ಟು ಮಾತ್ರ ಇದೆಯೇ ವಿನಾ ಅದರಲ್ಲಿ ಯಾರ ರುಜುವೂ ಇರುವುದಿಲ್ಲ. ಈ ವಿಚಾರ ನಮ್ಮ ಗಮನಕ್ಕೆ ಬಂದನಂತರ ನಾವು ಅದರ ಸತ್ಯಾಸತ್ಯವನ್ನು ಹಾಗೂ ಅವರಲ್ಲಿ ತಿರುಳೆಷ್ಟಿದೆ ಎಂಬುದನ್ನು ತಿಳಿಯಕೊಳ್ಳುವುದಕ್ಕೆ ನಮ್ಮ ಅಧಿಕಾರಿಗಳಿಗೆ ಆ ಕಾಗದವನ್ನು ಕಳುಹಿಸಿದ್ದೇವೆ. ಅದರ ವಿಚಾರಣೆಯು ಮುಗಿದ ನಂತರ ಅದರ ಬಂಡವಾಳ ಗೊತ್ತಾಗಬೇಕು. ಈ ದಿವಸ ಮೈಸೂರು ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಇಂಪೋರ್ಟೆಡ್ ರಾ ಮೆಟೀರಿಯಲ್ಸನ್ನು ಕೆಲವೇ ಕೆಲವು ಉದ್ಯಮಗಳವರ ಕೈಲಿದ್ದು ಅವರು ಅದರಿಂದ ಬಹಳ ಹಣವನ್ನು ಮಾಡುತ್ತಿದ್ದರು, ಅವನ್ನು ಇತ್ತೀಚೆಗೆ ತಪ್ಪಿಸಲಾಗಿದೆ. ಹೀಗಾಗಿ ಅವರಿಗೆ ಈಗ ಒಂದು ಪೆಟ್ಟು ಬಿದ್ದಿದೆ. ಆದ್ದರಿಂದ ಆ ಜನರು ಈಗ ಈ ಒಂದು ಕಾರ್ಯಕ್ಕೆ ಕೈಹಾಕಿದ್ದಾರೆ; ಅಲ್ಲದೆ ಈ ಜನರೇ ಬೆಂಗಳೂರಲ್ಲಿ ಬಹಳ ಜಾಸ್ತಿ ಇದ್ದಾರೆ. ಇನ್ನೂ ಹೇಳಬೇಕೆಂದರೆ ಇದಕ್ಕೆ ಸಂಬಂಧಪಟ್ಟ ಒಬ್ಬ ಅಧಿಕಾರಿಯ ಮಗನು ಶಾಲೆಗೆ ಹೋಗುವುದಕ್ಕೆ ಬಿಡದಂತೆ ತೊಂದರೆ ಕೊಡುತ್ತಿದ್ದಾರೆಂಬ ವಿಚಾರ ತಿಳಿದಮೇಲೆ ಅವರಿಗೆ ಪೋಲೀಸ್ ಪ್ರೊಟೆಕ್ಷನ್ ಕೊಡಬೇಕಾದ ಪ್ರಸಂಗ ಬಂದಿತ್ತು. ಅಂಥ ಜನರು ಇಲ್ಲಿ ಇರುವುದರಿಂದ ಅವರೇ ಈ ರೀತಿ ಒಂದು ಪತ್ರವನ್ನು ಬರೆದು ಡೈರೆಕ್ಟರೂ ಮತ್ತು ಜಾಯಿಂಟ್ ಡೈರೆಕ್ಟರೂ 5 ಸಾವಿರದಿಂದ 30 ಸಾವಿರದವರೆಗೂ ಲಂಚವನ್ನು ಪಡೆಯುತ್ತಿದ್ದಾರೆ ಎಂದು ಆ ಕಾಗದದಲ್ಲಿ ಬರೆದಿದ್ದಾರೆ. ಇವರ ಬರವಣಿಗೆಯಲ್ಲಿ ಅಂಥ ಒಂದು ಸತ್ಯಾಂಶವಿರಬೇಕಾದರೆ ಇಲ್ಲಿ ಕನಿಷ್ಠಪಕ್ಷ 30 ಸಾವಿರ ರೂಪಾಯಿಗಳ ಇಂಪೋರ್ಟನ್ನು ಪಡೆದಿರತಕ್ಕ ಲೈಸೆನ್ಸ್‌ಹೋಲ್ಡರು ಒಬ್ಬರಾದರೂ ಇರಬೇಕಲ್ಲವೇ? ಹಾಲಿ ಲೈಸೆನ್ಸ್ ಪಡೆದಿರತಕ್ಕವರಲ್ಲಿ ಯಾರಿಗೂ 10 ಸಾವಿರಕ್ಕೆ ಮೇಲೆ ಲೈಸೆನ್ಸನ್ನು ಕೊಟ್ಟಿಲ್ಲ. ಅಂದಾಗ ಇದೊಂದು ಸುಳ್ಳಿನ ಕಂತೆ ಎಂಬುದು ಮೇಲೆ ಕಾಣುತ್ತಿದೆ. ಹಾಗೂ ನಾವು ಈ ವಿಷಯದಲ್ಲಿ ಏನು ಸತ್ಯಾಂಶ ಅಡಗಿದೆ ಎಂಬುದನ್ನು ತಿಳಿದುಕೊಳ್ಳಲು ಅಧಿಕಾರಿಗಳಿಗೆ ವಿಚಾರಣೆ ಮಾಡುವುದಕ್ಕೆ ಕಳುಹಿಸಿದ್ದೇವೆ. ಹಾಗಿರುವಾಗ ಇದರ ಬಗ್ಗೆ ವಿನಾ ಕಾರಣ ಒಬ್ಬ ದಕ್ಷ ಹಾಗೂ ನಿಸ್ಪೃಹ ಅಧಿಕಾರಿಯ ಬಗ್ಗೆ ವಿಚಾರಣೆ ನಡೆಸಬೇಕೆಂದರೆ ಅವರ ಮನಸ್ಸಿಗೆ ನೋವಾಗುವುದಲ್ಲದೆ ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಕೆಲಸ ಮಾಡುವ ಉತ್ತೇಜನ ಕಡಮೆಯಾಗುತ್ತದೆ.

ಇನ್ನು 1969-70ರಲ್ಲಿ ಬಿ. ಪಿ. ಷೀಟುಗಳಿಗೂ ಮತ್ತು ಜಿ. ಪಿ. ಷೀಟುಗಳಿಗೂ ಅಪ್ಲಿಕೇಷನ್ ಹಾಕಿಕೊಂಡಿದ್ದವರ ಪೈಕಿ ಸರ್ಕಾರದವರು ಜಿ. ಪಿ. ಷೀಟ್ ಲೈಸನ್ಸಿಗೆ ಶಿಫಾರ್ಸ್ ಮಾಡಿದ್ದುದು 347 ಜನಕ್ಕೆ ಮಾತ್ರ ಮತ್ತು ಬಿ. ಪಿ. ಷೀಟುಗಳಿಗೆ ಶಿಫಾರ್ಸ್ ಮಾಡಿದ್ದು 174 ಜನಕ್ಕೆ ಮಾತ್ರ ಅಂದರೆ ಬಿ. ಪಿ. ಷೀಟಿಗೆ ಅರ್ಜಿ ಹಾಕಿದ್ದವರು 1141 ಜನರು ಮತ್ತು ಬಿ. ಪಿ. ಷೀಟಿಗೆ ಅರ್ಜಿ ಹಾಕಿದ್ದವರು 787 ಜನರು. ಜಿ. ಪಿ. ಷೀಟ್‌ಗೆ ರೆಕಮಂಡ್ ಮಾಡಿರತಕ್ಕ 347 ಅಪ್ಲಿಕೇಷನ್‌ಗಳಿಗೆ ಕೊಡತಕ್ಕ

(ಶ್ರೀ ಎ. ಪಿ. ಅಪ್ಪಣ್ಣ)

ಕೋಟಾ ಅದನ್ನು ಕೇಂದ್ರದವರು ಮಂಜೂರುಮಾಡುತ್ತಾರೆ, ಇದು 31 ಲಕ್ಷ 70 ಸಾವಿರ ಬೆಲೆಯದು ಜಿ. ಪಿ. ಷೀಟುಗಳಿಗೆ ಕೊಡತಕ್ಕ ಕೋಟಾ ಬೆಲೆ 5 ಲಕ್ಷ 22 ಸಾವಿರದ್ದು ಮಾತ್ರ.

ಇದು ಏನು ತೋರಿಸುತ್ತದೆ ಎಂದರೆ ಬಹುಶಃ ಲಂಚ ತೆಗೆದುಕೊಂಡು ಹೆಚ್ಚಾಗಿ ಕೋಟಾ ಕೊಡುವುದಾಗಿದ್ದರೆ ಇಷ್ಟು ರಿಜೆಕ್ಷನ್ ಬರಲಿಕ್ಕೆ ಕಾರಣವಿಲ್ಲ. ಅಷ್ಟು ರಿಜೆಕ್ಷನ್ ಮಾಡಬೇಕಾಗಿದ್ದರೆ ಬಹುಶಃ ಇದನ್ನು ನಿಷ್ಪಕ್ಷಪಾತದಿಂದ ಮಾಡಿದ್ದಾರೆ ಎಂದು ಹೇಳಬಹುದು. ಇದನ್ನು ವಜ್ರಮುಷ್ಟಿಯಿಂದ ಮಾಡಿದ್ದಾರೆ ಅನ್ನುವುದಾಗಲಿ ಅಥವಾ ಬೇರೆ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ ಅನ್ನುವುದಾಗಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಈರೀತಿ ಹೊಸ ಲೈಸನ್ಸ್ ಪಡೆಯುವವರ ಸಂಖ್ಯೆ ಜಾಸ್ತಿಯಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಆದರೆ ಬೆಂಗಳೂರಿನಲ್ಲಿ ಹೊಸ ಇಂಡಸ್ಟ್ರೀಸ್ ತೆರಿಯುಲಿಕ್ಕೆ ಬಿಡುವುದಿಲ್ಲ ಎಂದು ನಿಲುವನ್ನು ತಾಳಿದ ಮೇಲೆ ಅವರು ಹಾಸನ, ಚಿಕ್ಕಮಗಳೂರು, ತುಮಕೂರು ಇಂತಹ ಜಿಲ್ಲಾ ಕೇಂದ್ರಗಳಿಗೆ ಹೋಗಿ ಅಲ್ಲಿಯ ಮುನಿಸಿಪಾಲಿಟಿಗೆ ಲೈಸನ್ಸ್ ಅಪ್ಲೈ ಮಾಡುವವರ ಸಂಖ್ಯೆಯೂ ಜಾಸ್ತಿಯಾಗಿದೆ ಇದರಿಂದಾಗಿ ಅಲ್ಲಿಯ ಮನೆ ಬಾಡಿಗೆಯೂ ಜಾಸ್ತಿಯಾಗಿದೆ.

Sri B. P. GANGADHAR.—In Tumkur also we see many sign boards of stainless steel manufacturers, but I feel they are disposing it of otherwise and making money. That is why I was suggesting that instead of giving these sheets it is better to convert them into vessels so that the poor people can get these vessels at cheaper rates.

Sri A. P. APPANNA.—We know that all these people have moved to district headquarter places, because we have taken a decision that no new industry should come up in Bangalore. I agree with the hon. Member. But, the quota is not allotted to the State. It is given on the individual imported licence issued on the basis of the recommendation made by the State Government. Supposing we do not recommend even a single case, then the State is to lose in this direction.

Sri D. DEVARAJ URS.—Sir, I have been very carefully following the line of argument of the Hon. Deputy Minister. We are not suggesting that they should prevent such spurious companies coming up by not recommending. Our argument is that they are not recommending the right type of industrialists. That has got to be examined.

Sri A. P. APPANNA.—Those people who are indulging in these sort of activities are cleverer than people who investigate. I can only say that we have been trying our best to minimise such cases. We cannot say that we have eradicated these people. We are relying on the reports of the departmental officers. I cannot say all of them are perfect ; there are loopholes, I agree.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಈ ಸ್ಟೈನ್‌ಲೆಸ್ ಸ್ಟೀಲ್ ಕೋಟಾವನ್ನು ಯಾರು ದುರುಪಯೋಗ ಮಾಡಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿದ್ದಾರೋ ಅಂಥಹವರನ್ನು ವಿಚಾರಣೆ ಮಾಡಲಿಲ್ಲ. ಎಷ್ಟು ಸಾರಿ ಹೇಳಿದರೂ ಅವರು ಖಾಸಗಿಯವರಿಗೆ ಕೊಡತಕ್ಕಂಥ ಲೈಸನ್ಸ್ ಬಗ್ಗೆ ಹೇಳುತ್ತಾರೆಯೇ ಹೊರತು ಬೇರೆ ಯಾವುದೂ ಹೇಳುವುದಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಈಗ ನಾನು ಮೊದಲನೇ ಪ್ರಶ್ನೆಗೆ ಜವಾಬು ಹೇಳುತ್ತಿದ್ದೇನೆ. ಅನಂತರ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಕೇಳುವ ಪ್ರಶ್ನೆಗೆ ಜವಾಬು ಹೇಳುತ್ತೇನೆ. ಕಳೆದ ವರ್ಷ ಈರೀತಿ ದುರ್ವ್ಯವಹಾರದಲ್ಲಿದ್ದ 5? ಸಂಸ್ಥೆಗಳನ್ನು ಹಿಡಿದು ಕೇಂದ್ರಕ್ಕೆ ಬರೆದು ಅವರಿಗೆ ಇನ್ನು ಮೇಲೆ ಇಂಪೋರ್ಟ್ ಲೈಸನ್ಸ್ ಕೊಡ ಕೂಡದು ಅವರು ಬ್ಲಾಕ್‌ನಲ್ಲಿ ಮಾರುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಸಿದೆವು. ಇದರಲ್ಲಿ ಎಷ್ಟು ಅತ್ಯಾಚಾರ ನಡೆದಿದೆ ಎನ್ನುವುದನ್ನು

ಪರೀಕ್ಷೆ ಮಾಡುತ್ತೇನೆ. ಅದರಲ್ಲಿ ಪೂರ್ಣ ಸತ್ಯಾಂಶ ಏನು ಎನ್ನುವುದನ್ನು ನೋಡಬೇಕು. ಇದರಲ್ಲಿ ಪ್ರಿಮಾಫೇಸಿ ಕೇಸು ಇದೆಯೇ ಎನ್ನುವುದನ್ನು ನೋಡಬೇಕು.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಮಂತ್ರಿಗಳು ಹೇಳಿದ್ದು ನಿಜ. ಆ ದೂರಿನಲ್ಲಿ ರುಜು ಹಾಕದೇ ಇದ್ದುದರಿಂದ ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. 41 ಕೈಗಾರಿಕೋದ್ಯಮಿಗಳು ಮುಖ್ಯ ಮಂತ್ರಿಗಳಿಗೆ, ಇತರ ಮಂತ್ರಿಗಳಿಗೆ, ಶಾಸಕರಿಗೆ ಕಾಗದ ಬರೆದಿದ್ದಾರೆ. ಈ ಪತ್ರ ಯಾರು ಬರೆದಿದ್ದಾರೆ, ಯಾರು ರುಜು ಮಾಡಿದ್ದಾರೆ, ಇದಕ್ಕೆ ಇಲಾಖೆಯವರೇ ಕಾರಣರೇ ? ಇದನ್ನು ಸರ್ಕಾರದವರೇ ವಿಚಾರಣೆ ಮಾಡುವುದಾದರೆ ನಾವು ರುಜುವಾತು ಕೊಡುತ್ತೇನೆ ನೀವು ರುಜುವಾತು ಕೊಡಬೇಕು. ಇದೆಲ್ಲಾ ವಿಚಾರಣೆ ಮಾಡುವಂಥಾ ವಿಷಯ. ಈಗ ಅದು ತಮ್ಮಲ್ಲಿ ಬಂದಿದೆ. ಅದನ್ನು ಇಲ್ಲಿನ ವಿಜಿಲೆನ್ಸ್ ಕಮೀಷನ್‌ಗಾದರೂ ಕಳುಹಿಸಿ ಅಥವಾ ಕೇಂದ್ರ ವಿಜಿಲೆನ್ಸ್ ಕಮಿಷನ್‌ಗಾದರೂ ಕಳುಹಿಸಿ.

ಶ್ರೀ ಎ. ಪಿ. ಅಪ್ಪಣ್ಣ.—ಮೈಸೂರು ರಾಜ್ಯದಲ್ಲಿ ಸಣ್ಣ ಕೈಗಾರಿಕೋದ್ಯಮಿಗಳ ಸಂಸ್ಥೆ ಇದೆ. 41 ಜನ ಇದರಲ್ಲಿ ಅತೃಪ್ತಿ ಪಟ್ಟಿದ್ದಾರೆ. ಮೈಸೂರು ಸ್ಟೇಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಷನ್ ಮುಖಾಂತರ ಇದನ್ನು ನಮ್ಮ ಗಮನಕ್ಕೆ ತರಬಹುದಾಗಿತ್ತು.

ಶ್ರೀ ಎಸ್. ಗೋಪಾಲಗೌಡ.—ಈಗ ನಾವು ಹೇಳುವುದನ್ನು ನೋಡಿದರೆ ಸತೀಶ ಚಂದ್ರರವರಿಗೆ ಬರೆದ ಹಾಗೆ ಕಾಣುತ್ತದೆ. ಇದರ ಬಗ್ಗೆ ಸರ್ಕಾರ ಹೇಳದೆ ಹೋದರೆ, ಇದು ಎಲ್ಲಿ ಟೈಪ್ ಆಗಿದೆ ಏನಾಗಿದೆ ಎನ್ನುವುದನ್ನು ನಾನೇ ಬೇಕಾದರೆ ತಪಾಸಣೆ ಮಾಡಿಕೊಡುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಈ ಅಪ್ಲಿಕೇಷನ್ ಅನಾನಿಮಸ್ ಆಗಲಿ ಅಥವಾ ಸುಡಾನಿಮಸ್ ಆಗಲಿ ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯ ಇದೆ. ಈ ರೀತಿ ಎನ್‌ಕ್ವೈರಿ ಮಾಡದೆ ಹೋದರೆ ಯಾರಾದರೂ ಕೆಲಸ ಮಾಡುವುದಕ್ಕಾಗುತ್ತದೆಯೇ ?

Sri A. P. APPANNA.—That is what is I am telling. There is Small Scale Industries Association in all the districts and they are affiliated to the All Mysore Small Scale Industries Association. If there is any such grievance against an officer, there is ample opportunity for this Association to represent to the Government. I want to bring to the notice of the hon. Member Sri Gopala Gowda that most of these bogus industries are not members of the Small Scale Industries Association, because the Small Scale Industries themselves are not entertaining them. Whenever they do not find entry into the Association they cannot come through the Association. That is why we have recognised the all-Mysore Small Scale Industries Association. If it is a fact that 41 people are aggrieved by this, this is a just case to refer it to the Association. The very fact that these people are not members of the Association, shows that these are bogus units and they want to harm the officers who are strictly implementing the policies of the Government. We are trying our best to curb such people and the co-operation of the hon. Members in this behalf is solicited.

ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ಸಹಕಾರವನ್ನು ನೀಡಿದ್ದಾರೆ. ಯಾವ ಸಂದರ್ಭದಲ್ಲಿಯೇ ಆಗಲೀ ಬೋಗಸ್ ಇಂಡಸ್ಟ್ರೀಗಳನ್ನು ಪತ್ತೆ ಹಚ್ಚಲು ಮಾನ್ಯ ಸದಸ್ಯರು ಇದೇ ರೀತಿಯ ಸಹಕಾರವನ್ನು ಕೊಟ್ಟಿದ್ದೇ ಆದರೆ ಬೋಗಸ್ ಇಂಡಸ್ಟ್ರೀಗಳ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡು ಜೆನ್ಯುಯಿನ್ ಇಂಡಸ್ಟ್ರೀಗಳವರು ಯಾರಿದ್ದಾರೆ ಅವರಿಗೆ ಸಹಾಯ ಮಾಡಲು ಅನುಕೂಲವಾಗುತ್ತದೆ.

2–30 P.M.

ಶ್ರೀ ಎಂ. ಕಲ್ಯಾಣರಾವ್.—ಕೈಗಾರಿಕ ಮಂತ್ರಿಗಳ ಸಂಬಂಧೀಕರೇ ಕೈಗಾರಿಕಾ ಇಲಾಖೆಗಳಲ್ಲಿ ಕೆಲಸಮಾಡುತ್ತಿದ್ದಾರೆ. ಇವರು ಇಲ್ಲಿ ಅಕ್ರಮ ವ್ಯವಹಾರಗಳನ್ನು ಮಾಡಿದರೂ ಇಂತಹವರನ್ನು ಈಗ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಇದು ಸರಿಯೇ ?

Sri A. P. APPANNA.—Just because the Joint Director of Small Scale Industries happens to be the relative of the Hon. Minister, that should not be made the reason for making all sorts of allegations. If there is truth in the matter, whether one is a relative of the Minister or not, we have to go into it. The Joint Director of Small Scale Industries has been deputised to go abroad at the instance of the Government of India.

ಮೊದಲು ಇದ್ದ ಜಾಯಿಂಟು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಕಳುಹಿಸಬೇಕೆಂದು ಇತ್ತು. ಆದರೆ ಕೇಂದ್ರ ಸರಕಾರದವರು ನಮ್ಮ ರಾಜ್ಯದಲ್ಲಿರುವ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ಲಿರುವವರನ್ನೇ ಇದಕ್ಕೆ ಚುನಾಯಿಸಿ ಪರದೇಶಕ್ಕೆ ಕಳುಹಿಸಬೇಕೆಂದು ಸೂಚನೆ ಬಂತು. ಇದೇ ಸಂದರ್ಭದಲ್ಲಿ ಇವರೂ ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಇಲಾಖೆಯಲ್ಲೂ ಜಾಯಿಂಟ್ ಡೈರೆಕ್ಟರು ಆಗಿದ್ದುದರಿಂದ ಇವರನ್ನೇ ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಬೇಕಾಗಿ ಬಂತು. The present hon. Minister for Industries was not the Minister at the time of the proposal; nor the present Joint Director was the Joint Director at that time. The recommendation took place when both of them were not there. But fortunately the recommendation materialised when the present Joint Director is holding that office. It did not materialise the time of the previous Joint Director.

ಶ್ರೀ ಎಂ. ಕಲ್ಯಾಣರಾವ್.—ಹಿಂದೆ ಇದರಲ್ಲಿ ಶಿಕ್ಷೆಯಾಗಿದ್ದಂತಹವರನ್ನು ಇವರಿಗೆ ಪ್ರೊಟೆಕ್ಷನ್ ಕೊಡಲಿಕ್ಕಾಗಿ ಮಾಡುತ್ತಾರೆಂದು ಹೇಳುತ್ತಿದ್ದಾರೆ.

ಶ್ರೀ ಎ. ಪಿ. ಅಪ್ಪಣ್ಣ.—ಇನ್ನು ಒಂದೇ ಒಂದು ಮಾತು ಶ್ರೀ ರಾಜಯ್ಯ ಶೆಟ್ಟರವರು ಹೇಳಿದ್ದಾರೆ. ಅದು ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಕಾಪರ್ ಕಂಪನಿಯ ವಿಚಾರ. ಇದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಈ ಕಂಪನಿಯಲ್ಲಿ ಹಣ ಹಾಕುವುದು ಸಾಧ್ಯವೇ ಎನ್ನುವುದು ಇನ್ನೂ ತೀರ್ಮಾನವಾಗದೇ ಇದ್ದುದರಿಂದ ಈ ಕಂಪೆನಿಯಲ್ಲಿ ಹಣ ಹಾಕಿಲ್ಲ. ಈಚೆಗೆ ಈ ಕಂಪನಿಯವರು ಸರಿಯಾಗಿ ಕೆಲಸ ಮಾಡುತ್ತಾರೆ ಇದಕ್ಕೆ ಹಣ ಸಹಾಯ ಮಾಡಿ ಪ್ರೊಡಕ್ಷನ್ ಮಾಡಲು ಸಹಾಯ ಮಾಡಬೇಕು ಎನ್ನುವ ತೀರ್ಮಾನಕ್ಕೆ ಸರಕಾರ ಬಂದಿದೆ. ಈಗಾಗಲೇ ಈ ಕಂಪನಿಯವರು ಸುಮಾರು 75 ಲಕ್ಷದಷ್ಟು ಹಣ ಬೇಕೆಂದು ಕೇಳಿದ್ದಾರೆ. ಇದು ಸರಕಾರದ ಪರಿಶೀಲನೆಯಲ್ಲಿದೆ. ಸದ್ಯದಲ್ಲೇ ಇದಕ್ಕೆ ಹಣ ಸಹಾಯ ಮಾಡಿ ಪ್ರೊಡಕ್ಷನ್ ಸ್ಟಾರ್ಟ್ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇಷ್ಟು ಮಾತುಗಳನ್ನು ಹೇಳಿ ಇದರಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರುಗಳನ್ನೆಲ್ಲಾ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಬಿ. ಎಂ. ಡಿ. ಎನ್ನುವುದನ್ನು ಸರಕಾರ ವಹಿಸಿಕೊಂಡಿದೆಯಲ್ಲಾ ಇದರಲ್ಲಿ ಬಹಳ ಅವ್ಯವಸ್ಥೆಗಳು ನಡೆದಿವೆ ಎನ್ನುವುದು ಲೋಕಪ್ರಸಿದ್ಧವಾಗಿದೆ. ಇದು ಪಿ. ಎ. ಸಿ. ಕಮಿಟಿ ರಿಪೋರ್ಟಿನಲ್ಲೂ ಬಂದಿದೆ ಮತ್ತು ಇತರೇ ರಿಪೋರ್ಟುಗಳಲ್ಲೂ ಬಂದಿವೆ. ಈ ಅವ್ಯವಸ್ಥೆಗಳು ಆಗಲು ಯಾರು ಕಾರಣ? ಇದು ಗೊತ್ತಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ಸುಮ್ಮನೆ ಕಣ್ಣುಮುಚ್ಚಿಕೊಂಡು ನೋಡುತ್ತಿರುತ್ತಾರೆ. ಈಗ ಮಿನರಲ್ ಡೆವಲಪ್‌ಮೆಂಟು ಬೋರ್ಡು ಕೂಡ ನಿಮ್ಮ ತಲೆಗೆ ತಗಲಿಸಿರುವುದರಿಂದ ಬಿ. ಎಂ. ಡಿ. ಅವ್ಯವಹಾರಗಳ ಬಗ್ಗೆ ಒಂದು ಪ್ರೋಬ್ ಮಾಡಬೇಕು. ಇದರಲ್ಲಿ ಎಷ್ಟು ಲುಕ್ಸಾನು ಆಗಿವೆ ಮತ್ತು ಇಷ್ಟು ಲುಕ್ಸಾನು ಆಗಲು ಕಾರಣರು ಯಾರು? ಇದರ ಬಗ್ಗೆ ಎಲ್ಲ ವಿವರಗಳನ್ನು ಪಟ್ಟಿ ಮಾಡಿ ಇದನ್ನು ಈ ಸಭೆಯ ಮುಂದೆ ಇಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ಈ ವಿಚಾರದಲ್ಲಿ ಈಗಾಗಲೇ ಹಿಂದೆ ನಮ್ಮ ಕೈಗಾರಿಕಾ ಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ವಿಚಾರಣೆ ನಡೆಯಬೇಕೆಂದು ಇಲ್ಲಿ ತೀರ್ಮಾನ ಕೈಗೊಂಡು ಆಗ ಇದ್ದ ಬೆಂಗಳೂರು ಡಿವಿಜನಲ್ ಕಮಿಷನರ್‌ರವರು ಈಗ ಅವರು ನಮ್ಮ ರಾಜ್ಯದ ಚೀಫ್ ಸೆಕ್ರೆಟರಿಗಳಾಗಿದ್ದಾರೆ, ವಿಚಾರಣೆ ಮಾಡಿ ಒಂದು ವರದಿಯನ್ನು ಸರಕಾರಕ್ಕೆ ಕೊಡಬೇಕೆಂದು ಸರಕಾರದ ಆರ್ಡರು ಕೂಡ ಆಗಿದೆ. ಇದರ ಎಲ್ಲ ಜವಾಬ್ದಾರಿಯನ್ನೂ ಅವರ ಕಡೆಗೆ ಕೊಡಲಾಗಿದೆ. ಅವರು ಇನ್ನೂ ಸರಕಾರಕ್ಕೆ ವರದಿ ಒಪ್ಪಿಸಿಲ್ಲ. ಅವರು ವರದಿಯನ್ನೂ ಸರಕಾರಕ್ಕೆ ಒಪ್ಪಿಸಿದ ಮೇಲೆ ಇದರ ಮೇಲೆ ಮುಂದಿನ ಕಾರ್ಯಕ್ರಮವನ್ನು ಏನು ಸರಕಾರ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿದ ಪಾಯಿಂಟ್ ಬಗ್ಗೆ ಹೇಳಲಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಕರ್ನಾಟಕ ಟ್ರೇಡರ್ಸ್ ಬಗ್ಗೆ ಎಕ್ಸ್‌ಪೋರ್ಟ್ ಎಂಟೈಟಲ್‌ಮೆಂಟು ಬಗ್ಗೆ ಕೇಂದ್ರ ಸರಕಾರಕ್ಕೆ ಇವರು ಅಪ್ಲೈ ಮಾಡಿದಾಗ ಇದಕ್ಕೆ ಕೇಂದ್ರದವರು ಪರ್ಮಿಷನ್ ಕೊಟ್ಟಿಲ್ಲ. ಇದಕ್ಕೆ ಮಿನಿಸ್ಟ್ರೀ ಆಫ್ ಫಾರಿನ್ ಟ್ರೇಡ್ ಈ ಇಲಾಖೆಯವರು ಇವರಿಗೆ ಪರ್ಮಿಷನ್ ಕೊಡಬೇಕೇ ಬೇಡವೇ ಮತ್ತು, ಇಂಪೋರ್ಟ್ ಮಾಡಿದ ಸ್ಟೇನ್‌ಲೆಸ್ ಸ್ಟೀಲನ್ನು ತರಿಸಿ ಯಾರಿಗೆ ಮಾರಬೇಕು ಎನ್ನುವ ಪ್ರಶ್ನೆ ಬಂತು. ಇದನ್ನು ಮೊದಲು ಕೊಯಮುತ್ತೂರು ಕಡೆ ಇರುವ ಕೈಗಾರಿಕೆಗಳಿಗೆ ಮಾರಬೇಕು ಎಂದು ಹೇಳುತ್ತಿದ್ದರು. ಆದರೆ ಕೇಂದ್ರ ಸರಕಾರದವರು ಇದಕ್ಕೆ ಒಪ್ಪಿಗೆ ಕೊಡಬೇಕಾದರೆ ನಮ್ಮ ರಾಜ್ಯದಲ್ಲಿರುವ ಸಣ್ಣ ಕೈಗಾರಿಕಾ ಕ್ಷೇತ್ರಗಳವರಿಗೇ ಮಾರಬೇಕು ಮತ್ತು ಇದರಲ್ಲಿ 14 ಸಣ್ಣ ಕೈಗಾರಿಕೆಗಳು ಇವೆ, ಇವರಿಗೆ ಇವನ್ನೆಲ್ಲಾ ಮಾರಬೇಕೆಂದು ಮತ್ತು ಇದರ ಬಗ್ಗೆ ಒಂದು ಪಟ್ಟಿ ಮಾಡಿ ಕಳುಹಿಸಬೇಕೆಂದು ಈ ಕಂಪನಿಯವರಿಗೆ ಕೇಂದ್ರ ಸರಕಾರದವರು ಸೂಚನೆ ಕೊಟ್ಟಿದ್ದರು. ಇದರಂತೆ ಈ ಕರ್ನಾಟಕ ಎಕ್ಸ್‌ಪೋರ್ಟ್ ಕಂಪನಿಯವರು ಪಟ್ಟಿಯನ್ನು ಕೇಂದ್ರ ಸರಕಾರದ ಕಡೆಗೆ ಕಳುಹಿಸಿದ್ದಾರೆ. ಆದರೆ ಕೇಂದ್ರದವರು ಇನ್ನೂ ಇವರ ಪಟ್ಟಿಯನ್ನು ಒಪ್ಪಿಲ್ಲ. 14 ಸಣ್ಣ ಕೈಗಾರಿಕೆಗಳ ಪಟ್ಟಿ ಬಗ್ಗೆ ಯಾವುದು ಬೋಗಸ್ ಮತ್ತು ಯಾವುದು ನಿಜವಾಗಿರುವುದು ಎನ್ನುವುದನ್ನೆಲ್ಲಾ ಕೇಂದ್ರ ಸರಕಾರದವರು ಪರಿಶೀಲನೆ ಮಾಡಿದಮೇಲೆ ಬಹುಶಃ ಇವರಿಗೆ ಪರ್ಮಿಷನ್ ಬರಬಹುದು. ಇದುವರೆಗೆ ಅವರಿಗೆ ಇನ್ನೂ ಪರ್ಮಿಷನ್ ಕೊಟ್ಟಿಲ್ಲ. ಇದರಲ್ಲಿ ಹೊಸದೇನೂ ಇಲ್ಲ.

Mr. SPEAKER.—The question is :

"That the respective sums not exceeding the amounts mentioned in the Demand Nos. 24, 14, 16 and 44 be granted to the Government to defray the charges which will come in course of payment during the financial year for the period ending 31st March, 1971."

The motion was adopted.

As directed by the Chair the motion for demands for grants adopted by the Chair are reproduced below:

DEMAND NO. 14.—SUPPLIES AND DISPOSALS

25. Supplies and Disposals

"That a sum not exceeding Rs. 3,37,000 be granted to the Government to defray the charges which will come in course of payment during the financial year for the poriod ending 31st day of March 1971, in respect of 'Supplies and Disposals'.".

DEMAND NO. 16.—SCIENTIFIC DEPARTMENTS

27. Scientific Departments

"That a sum not exceeding Rs. 54,07,000 be granted to the Government to defray the charges which will come in course of payment during the financial year for the period ending 31st day of March 1971, in respect of 'Scientific Departments'."

DEMAND NO. 24.—INDUSTRIES INCLUDING SERICULTURE

35. Industries

"That a sum not exceeding Rs. 13,71,25,000 be granted to the Government to defray the charges which will come in course of payment during the financial year for the period ending 31st day of March 1971, in respect of 'Industries'."

DEMAND NO. 44.—INDUSTRIAL AND ECONOMIC DEVELOPMENT

97. Capital Outlay on Industrial and Economic Development.

"That a sum not exceeding Rs. 8,55,70,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Industrial and Ecomomic Development'."

Mr. SPEAKER.—The House will now adjourn and meet at 3-30 P.M.

The House rose for lunch at Forty Minutes past Two of the clock and re-assembled at forty Minutes past Three of the Clock.

[MR. SPEAKER in the Chair]

Mysore Sales Tax (Amendment) Bill, 1970

(Introduction)

Mr. SPEAKER.—In regard to the introduction of the Mysore Sales Taxa (Amendment) Bill, 1970 and the Mysore Panchayatiraj Bill, 1970, I may inform the House that His Excellency the Governor is pleased to give his recommendation for both. The Finance Minister may introduce the Sales Tax (Amendment) Bill.

Sri RAMAKRISHNA HEGDE (Minister for Finance, Planning and Youth Welfare).—Sir, I beg to introduce the Mysore Sales Tax (Amendment) Bill, 1970.

Sri M. NAGAPPA.—Sir, I rise on a point of order. I would like to to know whether any consent has been given by the President of India for the introduction of the Mysore Sales Tax (Amendment) Bill, 1970. This comes under article 304 (*b*). The taxation which is being revised